UNIVERSAL LIBRARY
OU_202343
UNIVERSAL LIBRARY

ಲಲಿತ ಸಾಹಿತ್ಯಮಾಲೆಯ ೧೫ನೆಯ ಕುಡಿ

# ಕವಿವರ ಬೇಂದ್ರೆ

ಪ್ರಕಾಶನ ಶಾಖೆ

ಬೇಂದ್ರೆ ಸತ್ಕಾರ ಸಮಿತಿ, ಧಾರವಾಡ

ಇವರಿಂದ ಸಂಪಾದಿತ

ಲಲಿತ ಸಾಹಿತ್ಯಮಾಲೆ
— ಧಾರವಾಡ —

೧೯೪೬ ಮೇ ೧—೪—೦

ಸಂಪಾದಕರು

ಚುಳಕಿ ಗೋವಿಂದರಾಯರು

Checked 1965

CHECKED. 1951

ಮಾರಾಟಗಾರರು

ಮನೋಹರ ಗ್ರಂಥ ಭಾಂಡಾರ, ಧಾರವಾಡ

ಕನ್ನಡ ಪುಸ್ತಕಾಲಯ, ಬೆಳಗಾಂವಿ

CHECKED 1958

Checked 1969

೩ನೆಯ ವರ್ಷದ ೪-೫ನೆಯ ಕುಡಿ

# ನಿರ್ಮಲಾ

## ಸ್ತ್ರೀ-ಜೀವನದ ಒಂದು ಕರುಣ ಕಥೆ

ಹಿಂದೀ ಲೇಖಕರು : ದಿವಂಗತ ಪ್ರೇಮಚಂದ

ಕನ್ನಡಿಸಿದವರು : ಶ್ರೀಮತಿ ಕುಪ್ಪಮ್ಮ

ಮುದ್ರಕರು

ಎಸ್. ಎಲ್. ಜೋಶಿ

ಮೋಹನ ಪ್ರೆಸ್

ಧಾರವಾಡ

ಪ್ರಕಾಶಕರು

ದ. ಬಾ. ಕುಲಕರ್ಣಿ

ಮನೋಹರ ಗ್ರಂಥ ಭಾಂಡಾರ

ಧಾರವಾಡ

# ಅರಿಕೆ

ಬೇಂದ್ರೆಯವರ ೫೦ನೆಯ ಹುಟ್ಟುಹಬ್ಬದ ನಿಮಿತ್ತವಾಗಿ ನಿಧಿ ಸಮರ್ಪಿಸುವ ಕಾಲಕ್ಕೆ ಒಂದು ಹೊತ್ತಿಗೆಯನ್ನು ಪ್ರಕಟಿಸಿ ಅರ್ಪಿಸಬೇಕೆಂದು ಹಿರಿಯರಿಗೂ ಗೆಳೆಯರಿಗೂ ಸಾಹಿತ್ಯಿಕರಿಗೂ ಬಿನ್ನವಿಸಿಕೊಂಡು ಲೇಖನಗಳನ್ನು ಬರೆಯಿಸಿ ತರಿಸಿಕೊಂಡೆವು. ಅವುಗಳನ್ನು ಬೇಂದ್ರೆ ಸತ್ಕಾರ ಸಮಿತಿಯಿಂದ ಪ್ರಕಟಿಸುವದು ಕಾಗದ ನಿಯಂತ್ರಣದ ಮೂಲಕ ಸಾಧ್ಯವಿಲ್ಲದುದರಿಂದ ಕೈಬರೆಹದ ಪ್ರತಿಯನ್ನೇ ಅರ್ಪಿಸಬೇಕೆಂದು ನಿಶ್ಚಯ ಮಾಡಿದ್ದೆವು ಹೀಗೆ ನಾವು ನಿಶ್ಚಯಿಸಿದ ಕಾಲಕ್ಕೆ ಲಲಿತ ಸಾಹಿತ್ಯಮಾಲೆಯ ಸಂಪಾದಕರು ತಾವಾಗಿಯೇ ಒಂದು ಗ್ರಂಥವನ್ನು ಪ್ರಕಟಿಸುವೆವೆಂದು ಕೇಳಿಕೊಂಡದ್ದರಿಂದ ಅವರಿಗೆ ಕೆಲವು ಲೇಖನಗಳನ್ನು ಪ್ರಕಟಿಸಲಿಕ್ಕೆ ಕೊಡಲು ನಾವು ಒಪ್ಪಿಕೊಂಡೆವು. ಅದರ ಫಲವಾಗಿಯೇ ಇಂದು ಈ 'ಕವಿವರ ಬೇಂದ್ರೆ' ಎಂಬ ಪುಸ್ತಕವು ಪ್ರಕಟವಾಗುತ್ತಿರುವದು ಸಂತೋಷದ ಸಂಗತಿಯೇ ಸರಿ. ಅದಕ್ಕಾಗಿ ನಾವು ಲ. ಸಾ. ಮಾಲೆಯ ಸಂಪಾದಕರಿಗೂ ನಮ್ಮ ಬಿನ್ನಹದ ಮೇರೆಗೆ ಲೇಖನಗಳನು ಬರೆದುಕೊಟ್ಟಂಥ ಮಹನೀಯರಿಗೂ ನಾವು ತುಂಬಾ ಕೃತಜ್ಞರಾಗಿದ್ದೇವೆ

**ಕಾರ್ಯದರ್ಶಿ ಪ್ರಕಟನಾ ಶಾಖೆ,**
**ಬೇಂದ್ರೆ ಸತ್ಕಾರ ಸಮಿತಿ, ಧಾರವಾಡ**

## ಸಂಪಾದಕರ ಬಿನ್ನಹ

ಲಲಿತ ಸಾಹಿತ್ಯಮಾಲೆಯ ೩ನೆಯ ವರುಷದ ೩ನೆಯ ಕುಡಿಯನ್ನಾಗಿ ಈ 'ಕವಿವರ ಬೇಂದ್ರೆ' ಎಂಬ ಗ್ರಂಥವನ್ನು ಪ್ರಕಟಿಸುವದಕ್ಕಾಗಿ ತುಂಬಾ ಸಂತೋಷಿಸುತ್ತೇವೆ. ಈ ಹೊತ್ತಿಗೆಯಲ್ಲಿ ಕವಿವರ ಬೇಂದ್ರೆಯವರನ್ನು ಕುರಿತು ಬರೆದ ಅನೇಕ ಮಹನೀಯರ ಲೇಖನಗಳ ಸಂಗ್ರಹವನ್ನು ಪ್ರಕಟಿಸಿದ್ದೇವೆ. ಕವಿತಿಲಕರಾದ ಶ್ರೀ. ಬೇಂದ್ರೆಯವರ ಸಾಹಿತ್ಯವನ್ನು ಜನರು ಮೆಚ್ಚಿ ಹೇಗೆ ಕೊಂಡಾಡುವರೋ ಹಾಗೆಯೇ ಅವರ ಬಗ್ಗೆ ಬರೆದ ಲೇಖನ'ಮಾಲೆಯನ್ನೂ ಓದಿ ಮನಾನಂದ ಪಡದೆ ಇರಲಾರರೆಂದು ಭಾವಿಸಿದ್ದೇವೆ.

ಈ ಲೇಖನ ಸಂಗ್ರಹದ ಹೊತ್ತಿಗೆಯನ್ನು ಪ್ರಕಟಿಸಲು ಅನುಮತಿಯನ್ನೀಯಲು ನಾವು ಪ್ರಕಾಶನ ಶಾಖೆ, ಬೇಂದ್ರೆ ಸತ್ಕಾರ ಸಮಿತಿ, ಧಾರವಾಡ ಇವರನ್ನು ಕೇಳಿಕೊಂಡೆವು. ಅದಕ್ಕೆ ಅವರು ದಯೆಯಿಟ್ಟು ಒಪ್ಪಿದ್ದಕ್ಕಾಗಿ ನಾವು ಅವರಿಗೆ ಆಭಾರಿಯಾಗಿದ್ದೇವೆ. ಮೋಹನ ಮುದ್ರಣಾಲಯದ ಸಂಚಾಲಕರಾದ ಎಸ್. ಎಲ್. ಜೋಶಿಯವರು ಸಕಾಲಕ್ಕೆ ಅಂದವಾಗಿ ಮುದ್ರಿಸಿಕೊಟ್ಟದ್ದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಸಲ್ಲಿಸಿದ್ದೇವೆ. ಈ ಪುಸ್ತಕಕ್ಕಾಗಿಯೇ ಹೊಸದಾಗಿ ಶ್ರೀ. ಬೇಂದ್ರೆಯವರ ಛಾಯಾಚಿತ್ರ ತೆಗೆದುಕೊಟ್ಟ ಶ್ರೀ. ಕೋನೇರಿ ಧೀರೇಂದ್ರರಾಯರಿಗೂ ಉಚಿತವಾಗಿ ಒಂದು ಪಡಿಯಚ್ಚು ಮಾಡಿಕೊಟ್ಟ ಶ್ರೀನಿವಾಸ ಕಂಪನಿಯ ವ್ಯವಸ್ಥಾಪಕರಿಗೂ ನಾವು ಕೃತಜ್ಞರಾಗಿದ್ದೇವೆ.

**—ಗೋ. ವೆ. ಚುಳಕಿ**

# ಪ ರಿ ವಿ ಡಿ

●


| | | | |
|---|---|---|---|
| ೧ | ಹರಕೆ | ಶ್ರೀ ' ಶ್ರೀನಿವಾಸ ' | ೧ |
| ೨ | ಬೇಂದ್ರೆಯವರ ಮನೆತನ | ದಿವಂಗತ ಮಹರ್ಷಿ ಅಶ್ವತ್ಥರಾಯರು | ೩ |
| ೩ | ಗೆಳೆಯ ಬೇಂದ್ರೆ | ಶ್ರೀ. ಶ್ರೀಧರ ಖಾನೋಳಕರ | ೯ |
| ೪ | ನಾ ಕಂಡ ' ದತ್ತು ' | ಶ್ರೀ. ಸ. ಪ. ಗಾಂವಕರ | ೨೧ |
| ೫ | ' ಗೆಳೆಯರ ಗುಂಪಿ 'ನ ಕಣಸು | ಶ್ರೀ. ವಿ. ಕೃ. ಗೋಕಾಕ | ೨೯ |
| ೬ | ಅಣ್ಣನ ಕಾರ್ಯ | ಶ್ರೀ. ' ಮಧುರಚೆನ್ನ ' | ೪೫ |
| ೭ | ಕವಿ ಬೇಂದ್ರೆ (ಕವನ) | ಪ. ವೆಂಕೋಬಾಚಾರ್ಯ | ೪೯ |
| ೮ | ನಾನೂ ಶ್ರೀ. ಬೇಂದ್ರೆಯವರೂ | ಶ್ರೀ. ಸಿಂಪಿ ಲಿಂಗಣ್ಣ | ೫೦ |
| ೯ | ವಿಚಿತ್ರ ಬೇಂದ್ರೆಯವರು | ಡಾ। ಮ. ಗೋಪಾಲಕೃಷ್ಣ | ೫೫ |
| ೧೦ | ಬೇಂದ್ರೆಯವರ ವ್ಯಕ್ತಿತ್ವ | ಶ್ರೀ. ಗೊರೂರು ರಾಮಸ್ವಾಮಿ ಅಯ್ಯಂಗಾರ | ೫೯ |
| ೧೧ | ಅಪೇಕ್ಷೆ | ಶ್ರೀ. ಸಿ. ಜಿ. ಕುಲಕರ್ಣಿ | ೭೭ |
| ೧೨ | ' ಗೆಳೆಯರ ಗುಂಪಿ 'ನ ಮೊದಲು | ಶ್ರೀ. ಗೋ. ವೆ. ಚುಳಕಿ | ೮೨ |
| ೧೩ | ಮುಮುಕ್ಷು ಬೇಂದ್ರೆ | ಶ್ರೀ. ನಾ. ಶ್ರೀ. ರಾಜಪುರೋಹಿತ | ೯೦ |
| ೧೪ | ಶ್ರೀ. ಬೇಂದ್ರೆಯವರಿಗೆ (ಕವನ) | ಶ್ರೀ. ಬಿ. ಎಚ್. ಶ್ರೀಧರ | ೯೫ |
| ೧೫ | ಶುಭಾಶಯಗಳು | ಶ್ರೀಮಂತ ಬಸವಪ್ರಭು ಸರದೇಸಾಯಿ<br>ಶ್ರೀ. ರಂಗನಾಥ ದಿವಾಕರ | ೯೬ |

# ಹರಕೆ

**ಶ್ರೀ 'ಶ್ರೀನಿವಾಸ'**

ಕವಿವರ ಶ್ರೀ. ಬೇಂದ್ರೆಯವರಿಗೆ ಗೆಳೆಯರು ಕಾಣಿಕೆಯಾಗಿ ಒಪ್ಪಿಸಬೇಕೆಂದಿರುವ ಗ್ರಂಥದಲ್ಲಿ ನನ್ನ ನಾಲ್ಕು ಮಾತು ಸೇರಬೇಕೆಂದು ಸತ್ಕಾರದ ನಿರ್ವಾಹಕರು ಅಪ್ಪಣೆ ಮಾಡಿದಾರೆ.

ಬೇಂದ್ರೆಯವರ ವಿಷಯ ನಾಲ್ಕು ಮಾತಲ್ಲ, ಹತ್ತು ಮಾತನ್ನು ಬರೆಯುವುದೂ ನನಗೆ ಸಮ್ಮತವೆ; ಸಂತೋಷವೆ ಹೆಸರಿನ ಮುನ್ನ ಕಾವ್ಯದಿಂದ ನನ್ನ ಮನಸ್ಸನ್ನು ಸೆಳೆದು ಕೆಲವು ಕಾಲದ ಮೇಲೆ ಪರಸ್ಪರ ಕಂಡಾಗ ಗೆಳೆಯರಾಗಿ ಜೊತೆ ಬೆರೆತು ಕಾಲ ಕಳೆದಂತೆ ಅವರು ನನ್ನ ಒಡಹುಟ್ಟಿದ ತೆರನಾಗಿ ಬಾಳಿನಲ್ಲಿ ಬೆರೆತಿದಾರೆ. ಇಷ್ಟು ಹತ್ತಿರವಾಗಿ ಬೆಳೆದ ಜೀವನವಾದುದರಿಂದ ಅದನ್ನು ಕುರಿತು ಮಾತನಾಡುವುದಕ್ಕೆ ಸಂಕೋಚ ಕೂಡ ಆಗುತ್ತದೆ.

ಆದರೆ ನಿಜವಾಗಿ ಸಂಕೋಚಪಡಬೇಕಾದ ಕಾರಣವಿಲ್ಲ. ಅವರು ನನ್ನ ಸೋದರರಾದುದರಿಂದ ನಾನು ಅವರ ಕಾವ್ಯವನ್ನು ಮೆಚ್ಚಲಿಲ್ಲ, ಅವರ ಬಾಳಿನ ವಿಲಕ್ಷಣ ಸತ್ವಕ್ಕೆ ಮನಸೋಲಲಿಲ್ಲ. ಅವರ ಕಾವ್ಯವನ್ನು ಮೆಚ್ಚಿ ಅವರ ಬಾಳಿನ ವಿಲಕ್ಷಣ ಸತ್ವಕ್ಕೆ ಮನಸೋತು ಅವರ ಸೋದರ ನಾಗಿರುವುದು ಒಂದು ಹೆಮ್ಮೆ ಎನ್ನುವುದನ್ನು ಕಲಿತೆನು; ಕನ್ನಡ ತಾಯ ಮಗನಾಗಿ ಹುಟ್ಟಿದ ಪುಣ್ಯ ಎಷ್ಟು ನಿಜವಾದುದೆಂದು ತಿಳಿಸಿದ ನಾಲ್ಕಾರೇ ಸೌಭಾಗ್ಯಗಳಲ್ಲಿ ಈ ಸೋದರ್ಯ ಒಂದು ಎಂದು ಮನಗಂಡೆನು.

ಬೇಂದ್ರೆಯವರ ಕಾವ್ಯಶಕ್ತಿಯನ್ನು ಕುರಿತು ನನ್ನ ಭಾವನೆ ಏನೆಂಬು ದನ್ನು ನಾನು ಈ ಮೊದಲು ಬೇರೊಂದು ಸಂದರ್ಭದಲ್ಲಿ ವರ್ಣಿಸಿದ್ದಾಗಿದೆ. ಅದೇ ಮಾತನ್ನು ಮತ್ತೆ ಇಲ್ಲಿ ಹೇಳಬೇಕಾಗಿಲ್ಲ. ಆದರೆ ಅದರ ಸಾರವನ್ನು ತಿಳಿಸುವುದು ಪ್ರಸ್ತುತವಾದೀತು ಬೇಂದ್ರೆಯವರ ಕಾವ್ಯದೃಷ್ಟಿ ತೀವ್ರವಾದುದು. ಶ್ರೇಷ್ಠ ವರ್ಗದ್ದು; ವಿಲಕ್ಷಣವಾದುದು ಜೊತೆಗೆ ಅವರ ಜೀವನ ಅವರಿಗೆ ತೀವ್ರವಾದ, ಶ್ರೇಷ್ಠವಾದ, ವಿಲಕ್ಷಣವಾದ ಅನುಭವವನ್ನು ತಂದಿದೆ. ಇದ ರಿಂದ ಅವರ ಕೃತಿಯಲ್ಲಿ ಇದೇ ಲಕ್ಷಣಗಳು ಮೂಡಿವೆ; ಅವರ ಕಾವ್ಯದ ಬಣ್ಣ ಲೋಕದ ಅತ್ಯುತ್ತಮ ಕಾವ್ಯದ ಬಣ್ಣವಾಗಿದೆ.

ಇಂತಹ ಬಣ್ಣದ ಕೃತಿಯನ್ನು ಪಡೆದಿರುವುದು ಕನ್ನಡಿಗರ ಪುಣ್ಯ ಅವರ ಕರ್ತೃವನ್ನು ಒಡನಾಡಿಯಾಗಿ ಕಾಣುತ್ತಿರುವುದು ಈ ತಲೆಮಾರಿನ ಪುಣ್ಯ. ಆ ಕರ್ತೃವಿಗೆ ಸತ್ಕಾರ ಮಾಡಬಹುದಾಗಿರುವುದು ಅವರ ಗೆಳೆಯರ ಪುಣ್ಯ.

ಬೇಂದ್ರೆಯವರ ಆಯುಷ್ಯ ನೂರು ತುಂಬಿ ಮೀರಲಿ. ಅವರ ಕಾವ್ಯ ಸತ್ವ ಸೋಲರಿಯದೆ ಏರಲಿ ಇವರಿಂದ ಕನ್ನಡನಾಡಿಗೆ ಶುಭ ದೊರೆಯಲಿ; ನುಡಿಗೆ ಕೀರ್ತಿ ಬರಲಿ.

———

# ಬೇಂದ್ರೆಯವರ ಮನೆತನ

* ದಿವಂಗತ ಶ್ರೀ ಮಹರ್ಷಿ ಅಶ್ವತ್ಥರಾಯರು, ಶಿರಹಟ್ಟಿ

ಶ್ರೀ. ಬೇಂದ್ರೆಯವರ ಪೂರ್ವಜರು ಸಾಂಗಲಿ ಸಂಸ್ಥಾನಕ್ಕೆ ಸೇರಿದ ಶಿರಹಟ್ಟಿಯವರು. ಇವರು ನಮ್ಮೂರಿನವರಾದ್ದರಿಂದ ನಮಗೆ ತೀರ ಆತ್ಮೀಯರಾಗಿದ್ದಾರೆ. ಶ್ರೀ. ಬೇಂದ್ರೆಯವರು 'ಕವಿವರರು' ಎಂದು ಹೆಸರುವಾಸಿಯಾದುದನ್ನು ಕಂಡು ಶಿರಹಟ್ಟಿಯವರಾದ ನಮಗೆ ತುಂಬಾ ಅಭಿಮಾನವೆನಿಸುತ್ತಿದೆ. ಇವರ ಮನೆತನದ ಊರಾದ ನಮ್ಮ ಶಿರಹಟ್ಟಿಯು ಇವರ ಕೀರ್ತಿಯಿಂದ ಪ್ರಸಿದ್ಧಿಯನ್ನು ಪಡೆದಿದೆಯೆಂದು ನಮಗೆ ಅದೆಷ್ಟೋ ಹರುಷವೆನಿಸುತ್ತಿದೆ; ಹೆಮ್ಮೆ ಪಡುವಂತಾಗಿದೆಯೆಂದೂ ಹೇಳಬಹುದು.

ಶ್ರೀ. ಬೇಂದ್ರೆಯವರ ಅಜ್ಜಂದಿರಾದ (ತಂದೆಯ ತಂದೆ) ಅಪ್ಪಾಶಾಸ್ತ್ರಿಗಳು ನನಗೆ ನನ್ನ ಬಾಲ್ಯದಾರಭ್ಯದಿಂದಲೂ ಪರಿಚಿತರು. ಜನರು ಇವರಿಗೆ ಅಪ್ಪಾಭಟ್ಟರೆಂದು ಕರೆಯುತ್ತಿದ್ದರು. ಅಪ್ಪಾಭಟ್ಟರು ಸಂಸ್ಕೃತದಲ್ಲಿ ಅಗಾಧ ಪಂಡಿತರಾಗಿದ್ದರು. ಇವರು ಸಂಸ್ಕೃತ ಭಾಷೆಯಲ್ಲಿ "ಪಾರ್ವತೀ ಪರಿಣಯ"ವೆಂಬ ಚಿಕ್ಕ ಹೊತ್ತಿಗೆಯನ್ನು ಬರೆದಿದ್ದಾರೆ. ವೈದಿಕ ಶಾಸ್ತ್ರಗಳಲ್ಲಿ ಪ್ರವೀಣರಾದುದರಿಂದ ಇವರು ಅನೇಕ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದ್ದಾರೆ. ಸರಸ್ವತಿಯ ಕೃಪೆಯಿದ್ದ ಇವರಿಗೆ ಲಕ್ಷ್ಮಿಯ ಕಟಾಕ್ಷವಿತ್ತೆಂದು ಹೇಳಲಿಕ್ಕೇ ಬೇಡ. ಇವರು ನಿಷ್ಠಾವಂತರಿದ್ದುದಲ್ಲದೆ ಧಾರ್ಮಿಕ ಪ್ರಶ್ನೆಗಳು ಉಂಟಾದಾಗ ತಮ್ಮ ಪಾಂಡಿತ್ಯದಿಂದ ಯೋಗ್ಯ ನಿರ್ಣಯವನ್ನು ಕೊಡುತ್ತಿದ್ದರು. ಈ ತೆರದ ಅಧಿಕಾರಸಂಪನ್ನರಾದ ಅಪ್ಪಾಶಾಸ್ತ್ರಿಗಳು ಶಿರಹಟ್ಟಿಯ ಊರ ಜನರಿಗೆಲ್ಲ ಪ್ರಿಯರಾಗಿದ್ದರು. ಈ ಜನಪ್ರಿಯತೆಯ ದ್ಯೋತಕವಾಗಿಯೇ ಎಂದು ಇವರ ಬಾಂಧವರು ಇವರ ಸಮಾಧಿಯನ್ನು ಕಟ್ಟಿಸಿದ್ದಾರೆ. ಈ ಸಮಾಧಿಯ ಪೂಜೆಯು ನಿರಂತರವಾಗಿ ನಡೆಯುವಂತೆ ಇವರ ಎರಡನೆಯ ಮಕ್ಕಳಾದ ಬಂಡೇರಾಯರು ವ್ಯವಸ್ಥೆ ಮಾಡಿದ್ದಾರೆ

---

* ಈ ಲೇಖನವನ್ನು ಶ್ರೀಯುತರು ೧೬-೭-೧೯೪೫ರಲ್ಲಿ ಬರೆದು ಕಳಿಸಿದ್ದರು. ಆದರೆ ಈ ಲೇಖನವು ಮುದ್ರಿತವಾಗುವದರೊಳಗಾಗಿ ಅವರು ಆಕಸ್ಮಿಕವಾಗಿ ತೀರಿಹೋದುದಕ್ಕಾಗಿ ನಮಗೆ ಅತ್ಯಂತ ವಿಷಾದವೆನಿಸುತ್ತದೆ.

—ಸಂಪಾದಕ

ಈ ಅಪ್ಪಾಶಾಸ್ತ್ರಿಗಳಿಗೆ ಇಬ್ಬರೆ ಗಂಡಸು ಮಕ್ಕಳು. ಹಿರಿಯ ಮಕ್ಕಳಾದ ರಾಮಚಂದ್ರಭಟ್ಟರೆ (ಇವರಿಗೆ ರಾಮೂ ತಾತ್ಯಾ ಎಂದು ವಾಡಿಕೆಯ ಹೆಸರಿತ್ತು) ನಮ್ಮ ಕವಿವರ ಅಂಬಿಕಾತನಯದತ್ತರ ತಂದೆಯವರು. ಇವರ ಅಭ್ಯಾಸವು ಶಿರಹಟ್ಟಿಯ ಶಾಲೆಯಲ್ಲಿಯೇ ಆಯಿತು. ಇವರಿಗೆ ಕನ್ನಡವು ಕೆಲ ಮಟ್ಟಿಗೆ ಬರುತ್ತಿತ್ತು. ಮರಾಠಿ ಚನ್ನಾಗಿಯೆ ಬರುತ್ತಿತ್ತು. ತಂದೆಯವರಾದ ಅಪ್ಪಾಭಟ್ಟರೇ ಇವರಿಗೆ ವೈದಿಕ ವಿದ್ಯಾಭ್ಯಾಸವನ್ನು ಹೇಳಿಕೊಟ್ಟಿದ್ದರು. ರಾಮಚಂದ್ರಭಟ್ಟರು ಈ ವೈದಿಕ ವಿದ್ಯೆಯಲ್ಲಿ ಒಳ್ಳೆ ನಿಷ್ಣಾತರೆಂದು ಖ್ಯಾತ ರಾಗಿದ್ದರು ತಂದೆಯಂತೆ ಇವರೂ ನಿರುಪದ್ರವಿಗಳಾಗಿದ್ದುದಲ್ಲದೆ ಮಿತಭಾಷಿ ಗಳಾಗಿದ್ದರು. ಇವರ ಮೊದಲನೆಯ ಹೆಂಡತಿ ತೀರಿಕೊಂಡದ್ದರಿಂದ ಎರಡ ನೆಯ ಮದುವೆ ಮಾಡಿಕೊಂಡಿದ್ದರು. ಇವರೇ ನಮ್ಮ ಈ ಕವಿವರರ ಜನ್ಮ ದಾತೆಯಾದ ಅಂಬಿಕಾತಾಯಿಯವರು. ತಾಯಿಯ ಮೇಲೆ ಅತ್ಯಂತ ಮಮತೆ ಯುಳ್ಳವರಾದ ದತ್ತರು ತಮ್ಮ ಕಾವ್ಯನಾಮವನ್ನು "ಅಂಬಿಕಾತನಯದತ್ತ" ಎಂದು ಹೆಸರಿಟ್ಟುಕೊಂಡುದು ಸಾರ್ಥಕವಾಗಿಯೇ ಇದೆಯೆಂದು ಹೇಳ ಬಹುದು. ಇಂಥ ಮಾತಾ—ಪುತ್ರರೇ ಧನ್ಯರು!

ಅಪ್ಪಾಶಾಸ್ತ್ರಿಗಳ ಎರಡನೆಯ ಮಕ್ಕಳಾದ ಬಂಡೇರಾಯರು ಇಂಗ್ಲಿಷ ಶಿಕ್ಷಣವನ್ನು ಪಡೆದರು. ಮ್ಯಾಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾದನಂತರ ಮಿಲಿಟರಿ ಅಕೌಂಟ ಕಚೇರಿಯಲ್ಲಿ ನೌಕರಿಗೆ ಸೇರಿಕೊಂಡು ದೊಡ್ಡ ಅಧಿಕಾರೀ ಸ್ಥಳವನ್ನು ಸಂಪಾದಿಸಿ ಪೆನ್‌ಶನ್ ಪಡೆದುಕೊಂಡ ನಂತರ ಮರಣ ಹೊಂದಿ ದರು. ಇವರಿಗೆ ಮಕ್ಕಳಾಗಲೇ ಇಲ್ಲ. ಕವಿವರ ಬೇಂದ್ರೆ ಹಾಗೂ ಇವರ ತಮ್ಮಂದಿರಾದ ಕೃಷ್ಣರಾಯರ ಮೇಲೆ ಬಂಡೇರಾಯರ ಮಮತೆ ಬಹಳ. ಇಬ್ಬರಿಗೂ ಇವರೇ ವಿದ್ಯಾಭ್ಯಾಸ ಮಾಡಿಸಿದರು ಬಂಡೇರಾಯರು ತಾವು ಗಳಿಸಿದುದರಲ್ಲಿಯ ಬಹು ಭಾಗವನ್ನು ಯೋಗ್ಯ ರೀತಿಯಿಂದ ದಾನಧರ್ಮ ಮಾಡಿದರು. ಹೀಗೆ ದಾನಧರ್ಮ ಮಾಡಿದುದರಲ್ಲಿ ಶಿರಹಟ್ಟಿಯ ಲೋಕಮಾನ್ಯ ವಾಚನಾಲಯಕ್ಕೆ ೩೦೦ ರೂ. ಗಳು ತಲುಪಿರುತ್ತವೆ. ಈ ಮುನ್ನೂರು ರೂಪಾಯಿಗಳಿಗೆ ಬರುವ ಬಡ್ಡಿಯ ಹಣದಲ್ಲಿ ವಾಚನಾಲಯಕ್ಕಾಗಿ ಧಾರ್ಮಿಕ ಗ್ರಂಥಗಳನ್ನು ಕೊಳ್ಳಬೇಕೆಂಬ ಕರಾರು ಹಾಕಿದ್ದಾರೆ ಅದರಂತೆ ಈಗ ವಾಚನಾಲಯದಲ್ಲಿ ಒಂದು ನೂರು ರೂಪಾಯಿ ಬೆಲೆ ಬಾಳುವ ಗ್ರಂಥಗಳ

ಸಂಗ್ರಹವಾಗಿದೆ ಬಂಡೇರಾಯರು ದತ್ತಾತ್ರಯರಿಗೂ ಕೃಷ್ಣರಾಯರಿಗೂ ಕೆಲವೊಂದು ಹಣವನ್ನು ಕೊಟ್ಟಿದ್ದಾರೆ. ಕೃಷ್ಣರಾಯರು ಪುಣೆಯಲ್ಲಿ ಬಂಡೇ ರಾಯರ ಕುಟುಂಬದವರ ಹತ್ತಿರವಿದ್ದುಕೊಂಡು ವ್ಯಾಪಾರದಲ್ಲಿ ತೊಡಗಿರು ತ್ತಾರೆ. ಬಂಡೇರಾಯರ ಸ್ವಭಾವವು ಸಾತ್ವಿಕ ಗುಣದಿಂದ ಕೂಡಿದುದಾಗಿತ್ತು.

ಬೇಂದ್ರೆಯವರ ಮನೆತನವು ಶಿರಹಟ್ಟಿಯಲ್ಲಿಯೇ ಪ್ರತಿಷ್ಠಿತ ಮನೆತನ. ಪೂಜ್ಯ ಅಪ್ಪಾಶಾಸ್ತ್ರಿಗಳ ಕಕ್ಕಂದಿರ ಮಕ್ಕಳು ಐದು ಜನರು. ಇವರಲ್ಲಿ ಕೆಲ ವರು ಸರಕಾರೀ ನೌಕರಿಯಲ್ಲಿ ಸೇರಿಕೊಂಡು ಅಲ್ಲಲ್ಲಿಯೇ ನೆಲೆಸಿದ್ದಾರೆ. ಇವ ರಲ್ಲೊಬ್ಬರಾದ ವೆಂಕಟರಾಯರೆಂಬವರು ಒಳ್ಳೇ ಕರ್ತೃತ್ವಶಾಲಿ ಪುರುಷರಾಗಿ ದ್ದರು. ಇವರು ಮ್ಯಾಟ್ರಿಕ್ ಪರೀಕ್ಷೆಯಾದನಂತರ ಮಿಲಿಟರಿ ಅಕೌಂಟ ಖಾತೆ ಯಲ್ಲಿ ನೌಕರಿಯನ್ನು ದೊರಕಿಸಿಕೊಂಡು ತಮ್ಮ ಬುದ್ಧಿಶಕ್ತಿಯಿಂದ ಮುಂದೆ ಬಂದರು. ಇವರೇ ಬೇಂದ್ರೆ ಮನೆತನದಲ್ಲಿಯ ಎಷ್ಟೋ ಜನರನ್ನು ಮುಂದೆ ತರಲು ಕಾರಣರಾದರೆನ್ನಬಹುದು ಇವರ ಚಿರಂಜೀವರಾದ ವಿಶ್ವನಾಥ ಎಂಬ ವರು ಒಳ್ಳೇ ಮೇಧಾವಿಗಳು. ತಮ್ಮ ಬುದ್ಧಿಯ ಬಲದಿಂದಲೇ ನೌಕರಿಯಲ್ಲಿ ಮೇಲಕ್ಕೇರುತ್ತ ಈಗ ಮುಂಬಯಿ ಸರಕಾರದ ಸೆಕ್ರೆಟರಿಯೇಟ್‌ದಲ್ಲಿ ದೊಡ್ಡ ಸ್ಥಳದಲ್ಲಿರುತ್ತಾರೆ.

ದತ್ತಾತ್ರಯರಾಯರ ತಾಯಿ ಅಂಬೂತಾಯಿಯವರ ತಾಯಿ ಗೋದೂ ಬಾಯಿಯವರ ಪರಿಚಯ ನನಗೆ ೧೮೫೮ ಇಸ್ವಿಯಲ್ಲಾಯಿತು. ಆಗ ನಾನು ಧಾರವಾಡ ಹಾಯಸ್ಕೂಲಿನಲ್ಲಿ ಕಲಿಯುತ್ತಿದ್ದೆ. ಆ ಸಮಯದಲ್ಲಿ ನಾನು ಗೋದೂಬಾಯಿಯವರ ಮನೆಯಲ್ಲಿಯೇ ಊಟಮಾಡುತ್ತಿದ್ದೆ. ಗೋದೂ ಬಾಯಿಯವರು ಅಂಬೂತಾಯಿಯ ಮದುವೆಯನ್ನು ಮಾಡಬೇಕೆಂದು ವರ ಸಂಶೋಧನೆ ನಡೆಯಿಸಿದ್ದರು. ಗೋದೂಬಾಯಿಯವರು ನನಗೂ ಸಾತ್ವಿಕ ಮನೆತನದ ವರನನ್ನು ಹುಡುಕಿಕೊಡಲಿಕ್ಕೆ ಹೇಳಿದರು. ಶಾಲೆಯ ಬಿಡುವಿ ನಲ್ಲಿ ನಾನು ಶಿರಹಟ್ಟಿಗೆ ಬಂದಾಗ ರಾಮೂತಾತ್ಯಾ ಇವರ ಹೆಂಡತಿಯು ತೀರಿಕೊಂಡ ಸುದ್ದಿಯನ್ನು ಕೇಳಿದೆ ಅಪ್ಪಾಶಾಸ್ತ್ರಿಗಳು ಕನ್ಯೆಯ ಶೋಧನೆ ಯಲ್ಲಿ ತೊಡಗಿದ್ದಾರೆಂದೂ ನನಗೆ ತಿಳಿದುಬಂದಿತು ಆದ್ದರಿಂದ ನಾನು ಅಪ್ಪಾಶಾಸ್ತ್ರಿಗಳನ್ನು ಕಂಡು ಮದುವೆಯ ಪ್ರಸ್ತಾಪವನ್ನೆತ್ತಿ ಗೋದೂಬಾಯಿ ಯವರ ಮನೀಷೆಯನ್ನು ಅವರಿಗೆ ಶ್ರುತಪಡಿಸಿದೆನು. ಅವರು 'ಹುಡುಗಿಯನ್ನು

ನೋಡೋಣ. ಮನಸಿಗೆ ಒಂದರೆ ಮದುವೆ ಮಾಡೋಣ' ಎಂದಂದು ಹುಡುಗಿಯನ್ನು ಶಿರಹಟ್ಟಿಗೆ ಕರೆದುಕೊಂಡು ಬರಲು ಗೋದೂಬಾಯಿಯವರಿಗೆ ತಿಳಿಸಬೇಕೆಂದರು. ನಾನು ಧಾರವಾಡಕ್ಕೆ ಹೋಗಿ ಅಪ್ಪಾಶಾಸ್ತ್ರಿಗಳು ಹೇಳಿದುದನ್ನೆಲ್ಲ ಗೋದೂಬಾಯಿಯವರಿಗೆ ಹೇಳಿ, ಮನೆತನದ ಬಗ್ಗೆಯೂ ವರನ ಬಗ್ಗೆಯೂ ಎಲ್ಲ ಮಾತುಗಳನ್ನು ಮನವರಿಕೆ ಮಾಡಿಕೊಟ್ಟೆನು. ಅದರಂತೆ ಗೋದೂಬಾಯಿಯವರು ಕನ್ಯೆಯನ್ನು ಶಿರಹಟ್ಟಿಗೆ ಕರೆದುಕೊಂಡು ಹೋಗಿ, ತೋರಿಸಿ, ಮದುವೆಯ ನಿಶ್ಚಯ ಹಾಕಿಕೊಂಡೇ ಬಂದರು. ಕೆಲ ದಿನಗಳ ನಂತರ ಶಿರಹಟ್ಟಿಯಲ್ಲಿಯೇ ಮದುವೆಯ ಸಮಾರಂಭವು ನೆರವೇರಿತು. ಮುಂದೆ ರಾಮೂತಾತ್ಯಾ ಇವರು ಧಾರವಾಡದಲ್ಲಿಯೇ ಇರತೊಡಗಿದ್ದರೂ ಶಿರಹಟ್ಟಿಗೆ ಮೇಲಿಂದಮೇಲೆ ಬಂದು ಹೋಗುತ್ತಿದ್ದರು. ರಾಮೂತಾತ್ಯಾ-ಅಂಬೂತಾಯಿಯರಿಗೆ ದತ್ತರಾಯರು, ಕೃಷ್ಣರಾಯರು ಎಂಬ ಇಬ್ಬರು ಗಂಡು ಮಕ್ಕಳಾದರು. ಇವರಿಬ್ಬರ ಬಾಲ್ಯದ ವಿದ್ಯಾಭ್ಯಾಸ ಧಾರವಾಡದಲ್ಲಿಯೇ ಆಯಿತು. ರಾಮೂತಾತ್ಯಾ ಇವರು ತೀರಿಕೊಂಡನಂತರ ದತ್ತರಾಯರು ಮಾತೋಶ್ರೀ ಮತ್ತು ತಮ್ಮನನ್ನು ಕರೆದುಕೊಂಡು ಕಕ್ಕಂದಿರಾದ ಬಂಡೇರಾಯರ ಹತ್ತಿರ ಇರಲು ಹೋಗಿ ಅಲ್ಲಿಯೇ ಕಾಲೇಜ ವಿದ್ಯಾಭ್ಯಾಸ ಮಾಡಿ, ಬಿ. ಏ. ಪರೀಕ್ಷೆಯಲ್ಲಿ ತೇರ್ಗಡೆಯಾದರು.

ನನಗೆ ದತ್ತರಾಯರ ಪರಿಚಯವಾದುದು ಪುಣೆಯಲ್ಲಿ ಅವರು ಕಾಲೇಜದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ. ಬೇಂದ್ರೆ ಮನೆತನದಲ್ಲಿ ಕರ್ತೃತ್ವಶಾಲಿಗಳೂ ನನ್ನ ಅತ್ಯಂತ ಸ್ನೇಹಿತರೂ ಆದ ವೆಂಕಟರಾಯರು ಆಕಸ್ಮಿಕವಾಗಿ ತೀರಿಕೊಂಡರು. ಅವರ ತಮ್ಮಂದಿರಾದ ಗೋವಿಂದರಾಯರೆಂಬವರು ನೌಕರಿಯಿಂದ ನಿವೃತ್ತರಾಗಿ, ಪೆನ್‌ಶನ್ ಪಡೆದುಕೊಂಡು ಪುಣೆಯ ಪ್ರಸಿದ್ಧ ವಿಸ್ತರಣವಾದ ಡೆಕ್ಕನ್‌ಜಿಮಖಾನಾ ಭಾಗದಲ್ಲಿ ಒಂದು ಚಿಕ್ಕ ಮನೆಯನ್ನು ಕಟ್ಟಿಕೊಂಡು ಅಲ್ಲಿಯೆ ವಾಸಿಸುತ್ತಿದ್ದಾರೆ. ಅವರೇ ನನಗೆ ವೆಂಕಟರಾಯರು ತೀರಿಕೊಂಡುದನ್ನು ತಿಳಿಸಿದರು. ಆದುದರಿಂದ ವೆಂಕಟರಾಯರ ಕುಟುಂಬದವರನ್ನು ಕಂಡು ಮಾತನಾಡಿಸಿ ಸಮಾಧಾನ ಹೇಳಿಬರಬೇಕೆಂದು ನಾನು ೧೯೧೬ರಲ್ಲಿ ಪುಣೆಗೆ ತೆರಳಿದೆನು. ಆಗ ಪುಣೆಯಲ್ಲಿ ಪ್ಲೇಗಿನ ಹಾವಳಿಯು ಹಬ್ಬಿದ್ದರಿಂದ ವೆಂಕಟರಾಯರ ಕುಟುಂಬದವರು ಊರ ಹೊರಗೆ ಫರ್ಗ್ಯುಸನ್

ಕಾಲೇಜಿನ ಹತ್ತಿರ ಗುಡಿಸಲದಲ್ಲಿದ್ದರು. ದತ್ತರಾಯರೂ ಅದೇ ಸ್ಥಳದಲ್ಲಿ ತಮ್ಮ ಕಕ್ಕಂದಿರಾದ ಬಂಡೇರಾಯರೊಂದಿಗೆ ಇರುತ್ತಿದ್ದರು ಬಂಡೇರಾಯರ ಹತ್ತಿರವೇ ನಾನು ಇಳಿದುಕೊಂಡಿದ್ದೆ. ೨-೩ ದಿನ ಇರಬೇಕಾಗಿ ಬಂದಿತು. ಆಗಲೇ ನಾನು ದತ್ತರಾಯರನ್ನೂ ಅವರ ತಮ್ಮಂದಿರಾದ ಕೃಷ್ಣರಾಯರನ್ನೂ ಮೊದಲನೇ ಸಲ ನೋಡಿದೆನು. ಬಂಡೇರಾಯರು ಕಚೇರಿಗೆ ಹೋಗತಕ್ಕವರು. ದತ್ತರಾಯರು ಕಾಲೇಜಿಗೆ ಹೋಗುವವರು. ನಾನು ಸುಮ್ಮನೇ ಗುಡಿಸಲಿನಲ್ಲಿ ಕುಳಿತು ವೇಳೆ ಕಳಿಯಬೇಕೆಂದು ಏನಾದರೂ ಓದಲಿಕ್ಕೆಂದು ದತ್ತರಾಯರ ಪುಸ್ತಕಪ್ರಪಂಚವನ್ನೂ ಟಿಪ್ಪಣಿ ಬರೆದುಕೊಂಡ ಪುಸ್ತಕಗಳನ್ನೂ ತಿರುವಿ ಹಾಕಿದೆನು. ಆಗ ನನಗೆ ಒಂದು ಆಶ್ಚರ್ಯಕಾರಕ ದೃಶ್ಯ ಕಂಡುಬಂದಿತು. ಅವರು ಓದುವ ಪುಸ್ತಕಗಳಲ್ಲಿ ಮತ್ತು ಟಿಪ್ಪಣಿ ಬುಕ್ಕುಗಳಲ್ಲಿ ಕನ್ನಡ ಲಿಪಿಯಲ್ಲಿ ತುಂಬಾ ಬರೆದುದನ್ನು ಕಂಡೆನು. ನಾನು ಅವುಗಳನ್ನು ಒಳ್ಳೇ ಕುತೂಹಲದಿಂದ ಓದತೊಡಗಿದೆನು. ಕವನಗಳಿದ್ದವು; ಗದ್ಯಲೇಖನಗಳಿದ್ದವು. ಕೆಲವು ಇಂಗ್ಲಿಷ ಕವನಗಳೂ ಇದ್ದವು ಎಲ್ಲವನ್ನೂ ಎರಡುಮೂರು ಸಲ ಓದಿದೆನು ಆನಂದಪಟ್ಟೆನು ಅವರ ಕಾವ್ಯಪ್ರತಿಭೆಯನ್ನು ಕಂಡು ಮನದಲ್ಲಿಯೇ ಕೊಂಡಾಡಿದೆನು. ದತ್ತರಾಯರು ಯಾವಾಗ ಬಂದಾರೋ—ನಾನು ಯಾವಾಗ ಅವರನ್ನು ಅಭಿನಂದಿಸೇನೋ ಎಂಬ ತವಕದಲ್ಲಿ ಕಾವ್ಯಾನಂದವನ್ನು ಅನುಭವಿಸುತ್ತಲೇ ಇದ್ದೆ. ಹೊತ್ತಿನ ಪರಿವೆಯೇ ನನಗಿರಲಿಲ್ಲ. ಸಾಯಂಕಾಲವಾಗಿರಬೇಕು- ಆಗ ದತ್ತರಾಯರು ಆಗಮಿಸಿದರು. ಅವರನ್ನು ಕಂಡೊಡನೆಯೇ ತಬ್ಬಿಕೊಂಡು, ಬೆನ್ನು ತಟ್ಟಿ ಅಂತಃಕರಣಪೂರ್ವಕವಾಗಿ ಅವರ ಅಭಿನಂದನೆ ಮಾಡಿದೆನು. ದತ್ತರಾಯರಿಗೂ ಒಂದು ತೆರದ ಸಮಾಧಾನವೆನಿಸಿರಬೇಕೆಂದು ಭಾವಿಸಿದೆನು. ಮುಂದೆ ಮಾತುಕಥೆ ನಡೆಯಿತು. ಆಗ ಅವರು ಬಿ ಏ. ಆದನಂತರ ಧಾರವಾಡದಲ್ಲಿಯೆ ನೆಲೆಸಿ ಕನ್ನಡ ಸಾಹಿತ್ಯ ಸೇವೆಯನ್ನು ಕೈಕೊಳ್ಳಬೇಕೆಂಬ ತಮ್ಮ ಮನೀಷೆಯನ್ನೂ ಜೀವನದ ಗುರಿಯನ್ನೂ ವ್ಯಕ್ತಪಡಿಸಿದರು. ಅವರ ಆ ಧ್ಯೇಯವನ್ನು ಕಂಡು ನನಗೆ ಅವರಲ್ಲಿ ಆದರಾಭಿಮಾನಗಳುಂಟಾದವು. ಇಂದಿಗೆ ಅದೆಷ್ಟೋ ಪಟ್ಟು ಹೆಚ್ಚಾಗಿ ಬೆಳೆದಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ತಿರುಳುಗನ್ನಡ ನಾಡಿನ ಶಿರಹಟ್ಟಿಯಲ್ಲಿಯ ಕೊಂಕಣಸ್ಥ ಮನೆತನವೊಂದರಲ್ಲಿ ಕನ್ನಡಕವಿವರ

ನೊಬ್ಬನು ಜನ್ಮತಾಳಿದುದನ್ನು ಕಂಡು ನನಗಾದ ಆನಂದವನ್ನು ವ್ಯಕ್ತಪಡಿಸಲು ನನ್ನ ಶಬ್ದಸಂಪತ್ತಿಯು ಸಾಲದೆಂದು ಹೇಳದಿರಲಾರೆ.

ದತ್ತರಾಯರು ಧಾರವಾಡದಲ್ಲಿ ನೆಲೆಸಿದಂದಿನಿಂದ ಶಿರಹಟ್ಟಿಗೆ ಹಲವಾರು ಸಲ ಬಂದಿದ್ದಾರೆ. ವ್ಯಾಖ್ಯಾನ ಕೊಟ್ಟಿದ್ದಾರೆ. ಕಾವ್ಯಾಮೃತವನ್ನು ಉಣಿಸಿದ್ದಾರೆ. ಪ್ರಗಲ್ಭ ವಿಚಾರಗಳ ಪ್ರಭಾವವನ್ನು ಬೀರಿದ್ದಾರೆ. ಅವರು ಶಿರಹಟ್ಟಿಗೆ ಆಗಮಿಸಿದರೆ ಶಿರಹಟ್ಟಿಯ ಜನರಿಗೆಲ್ಲ ತಮ್ಮ ಮನೆಯ ಪ್ರಿಯವಾದ ವ್ಯಕ್ತಿಯೇ ಬಂದಂತೆನಿಸಿ ಅಭಿಮಾನ ಉಕ್ಕೇರಿ ಬರುತ್ತಲಿದೆ ಎಂಬುದರಲ್ಲಿ ಸಂಶಯವಿಲ್ಲ

ಕವಿವರ ಅಂಬಿಕಾತನಯದತ್ತರು ಪ್ರತಿಭಾಸಂಪನ್ನ ಕವಿಯೆಂದು ಅಖಂಡ ಕರ್ನಾಟಕದಲ್ಲಿ ಕೀರ್ತಿಶಾಲಿಯಾಗಿದ್ದಾರೆ. ಇಂಥ ಕವಿಯ ಕೀರ್ತಿಯು ಇತೋಽಪ್ಯತಿಶಯವಾಗಿ ಪಸರಿಸಲಿ. ಪರಮಾತ್ಮನು ಅವರಿಗೆ ದೀರ್ಘಾಯುಷ್ಯವನ್ನು ದಯಪಾಲಿಸಲಿ. ಅವರು ಕೈಕೊಂಡ ಕಾರ್ಯವು ಯಶಸ್ವಿಯಾಗಿ ಜರುಗಲಿ. ಶಾಶ್ವತವಾಗಿ ಬಾಳಲಿ ಎಂದು ನಾನು ಹಾರೈಸುತ್ತೇನೆ. ದತ್ತರಾಯರ ೫೦ನೆಯ ವರುಷದ ಬಗ್ಗೆ ಅವರ ಮಿತ್ರರಿಗಿರುವ ಆದರಾಭಿಮಾನಗಳನ್ನು ವ್ಯಕ್ತಪಡಿಸುವ ಒಂದು ಹೊತ್ತಿಗೆಯನ್ನು ಅರ್ಪಿಸಲಿರುವ ಬೇಂದ್ರೆ ಸತ್ಕಾರ ಸಮಿತಿಯವರು ನನಗೆ ಈ ಬರೆಹವನ್ನು ಬರೆದು ಕೊಡುವ ಸಂಧಿಯನ್ನು ಒದಗಿಸಿಕೊಟ್ಟುದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ.

———

# ಗೆಳೆಯ ಬೇಂದ್ರೆ

ಶ್ರೀ. ಶ್ರೀಧರ ಖಾನೋಳಕರ, ಪುಣೆ

"But try" you urge,—the trying shall suffice.
The aim, if reached or not, makes great the life,
Try to be Shakespeare., and leave the rest to fate"
—*Browning*

ಸುಮಾರು ೪೩ ವರ್ಷಗಳ ಹಿಂದಿನ ನೆನಪು. ನನಗೆ ೫ನೇ ವರ್ಷ. ಶಾಲೆಗೆ ಹಾಕಿದರು. ಕೈಯಲ್ಲೊಂದು ಹೊಸಪಾಟಿ. ಹೊಸ ಉಡುಪು. ಜರದ ಟೊಪ್ಪಿಗೆ. ನಮ್ಮ ಛಾಪಖಾನೆಯಲ್ಲಿ ಕೆಲಸ ಮಾಡುತ್ತಿದ್ದ ರಾಮಯ್ಯನು ನನ್ನನ್ನು ಬೂದಪ್ಪ ಮಾಸ್ತರರಿಗೆ ಒಪ್ಪಿಸಿ ಹೋದನು. ಅದೇ ವರ್ಗಕ್ಕೆ ಸ್ವಲ್ಪ ಹೊತ್ತಿನ ಮೇಲೆ ಇನ್ನೊಂದು ನನ್ನಂತಹದೇ ಮಗು ಬಂತು! ಅದೇ ಮಗು ದತ್ತೂ!

ಅ ಆ ಕೂಡಿ ಕಲಿತೆವು. ಅವನೊಂದು ತಪ್ಪು ಬರೆಯಲು ಮಾಸ್ತರರು ಕಪಾಳಕ್ಕೆ ಹೊಡೆಯಲು ಹೇಳಿದರು. ನಾನು ಹಗುರಾಗಿ ದತ್ತೂನ ಗಲ್ಲ ಕೈಯಿಂದ ತಟ್ಟಿದೆ—ಪ್ರೀತಿಯಿಂದ. ಮಾಸ್ತರರು "ಹಾಗಲ್ಲೋ ಹೀಗೆ" ಎಂದು ನನ್ನ ಕಪಾಳ ಗಡ್ಡೆಗೆ ಕೊಟ್ಟರು. ನಾವಿಬ್ಬರೂ ಕೂಡೇ ಅತ್ತೆವು ಆ ದಿನ!

೧ನೇ ವರ್ಗದಿಂದ ಮುಂದಾಗುತ್ತ ನಾನು ೪ನೇ ಇಯತ್ತೆಗೆ ಹೋದೆ. ೪ನೇ ಇಯತ್ತೆಯಲ್ಲಿ ಮಾತ್ರ ದತ್ತೂ ಮುಂದೆ ಪಾಸಾಗಿ ೫ನೇ ಇಯತ್ತೆಗೆ ಹೋದ. ನಾನು ನಾಪಾಸಾಗಿ ೪ನೇ ಇಯತ್ತೆಯಲ್ಲಿಯೇ ಉಳಿದೆ. ಅವನದು ೫ನೇ ಇಯತ್ತೆ ಮುಗಿಯಿತು. ನನ್ನದೂ ೪ನೇ ಇಯತ್ತೆ ಮುಗಿಯಿತು. ಇಬ್ಬರೂ ಮತ್ತೆ ಒಂದೇ ಶಾಲೆಯಲ್ಲಿ—ವ್ಹಿಕ್ಟೋರಿಯಾ ಹಾಯಸ್ಕೂಲಿನಲ್ಲಿ—ಕೂಡೇ ಕಲಿಯಹತ್ತಿದೆವು. ಮತ್ತೆ ಹಾಗೆಯೇ ತಪ್ಪುಗಂಟಾಗಿ ಮ್ಯಾಟ್ರಿಕ್ಯು-ಲೇಶನದಲ್ಲಿ ಒಂದೇ ವರ್ಷ ಇಬ್ಬರೂ ಪಾಸಾದೆವು. ಮುಂದೆ ಇಬ್ಬರೂ ಪುಣೆಗೆ ಬಂದು ಅವರು ಫರ್ಗ್ಯೂಸನ್‌ದಲ್ಲಿ, ನಾನು ಡೆಕ್ಕನ್ ಕಾಲೇಜದಲ್ಲಿ ಕಲಿತೆವು.

ಅವರು ಬಿ. ಎ ಆಗಿ ಎಮ್ ಎ. ಆದರು ನಾನು ಏನೂ ಆಗಲಿಲ್ಲ, ಬಿ. ಎ. ವರೆಗೆ ಕಲಿತೆ. ೧೯೨೦ರಲ್ಲಿ ಕಾಲೇಜಕ್ಕೆ ಶರಣು ಹೊಡೆವೆ ಆಮೇಲೆ ಮತ್ತೆ ಧಾರವಾಡದ ರಾಷ್ಟ್ರೀಯ ವಿದ್ಯಾಲಯದಲ್ಲಿ ೨-೩ ವರ್ಷ ಕೂಡೇ ಮಾಸ್ತರರಾಗಿದ್ದೆವು. ಇಷ್ಟಿದೆ ನನ್ನದೂ ಶ್ರೀ ಬೇಂದ್ರೆಯವರದೂ ಜೀವನ ಸಂಗತಿ.

ಶಾಲೆಗಳಲ್ಲಿ ಮಾತ್ರ ನಾವಿಬ್ಬರೂ ಜೀವದ ಗೆಳೆಯರಾಗಿದ್ದೆವು. ಎಷ್ಟೋ ಪಾಲಾಫೂಗಳಾದವು ಎಷ್ಟೋ ಯುದ್ಧಗಳಾದವು. ಎಷ್ಟೋ ಆಟಗಳಾದವು- ಗೋಲಿ, ಚಂಡು, ಹುಡುತುತ್ತು, ಕ್ರಿಕೇಟು, ಫುಟಬಾಲು ನಾವಿಬ್ಬರೂ ಕೂಡೇ ಆಡುತ್ತಿದ್ದೆವು. ಕೂಡೇ ವಿಚಾರ ಮಾಡುತ್ತಿದ್ದೆವು ಕೂಡೇ ಜಗಳಾಡುತ್ತಿದ್ದೆವು ನಮ್ಮ ಪಾಲಾಫೂ ಆಟಗಳಲ್ಲಿ ನಾವು ಮಾತಾಡುತ್ತಿದ್ದಿಲ್ಲ. ಇಷ್ಟೇ. ಮೌನವ್ರತದಿಂದಲೇ ಇದ್ದು ಒಬ್ಬರನ್ನೊಬ್ಬರು ಪ್ರೀತಿ ಮಾಡುತ್ತಿದ್ದೆವು. ನಮ್ಮ ಪ್ರೀತಿಗೆ ಮೇರೆಯಿದ್ದಿರಲಿಲ್ಲ ಪಂಕಾಯಾಪ್ರವೇಶದ ತತ್ವಗಳನ್ನು ಮುಂದೆ ಓದಿ ತಿಳಿದುಕೊಂಡರೂ ಬಾಲ್ಯದಲ್ಲಿ ನಮಗಿಬ್ಬರಿಗೂ ಅದ್ವೈತ ವೇದಾಂತದ ದರ್ಶನವಾಗಿತ್ತೆಂದರೆ ಅತಿಶಯೋಕ್ತಿಯಾಗಲಾರದು. ಹಿಂದಿನ ಜನ್ಮದಲ್ಲಿ ದಂಪತಿಗಳಿದ್ದೆವೋ ಎಂಬ ಸಂಶಯ ಬರುತ್ತದೆ.

ಅಭ್ಯಾಸದಲ್ಲಿ ಇಬ್ಬರೂ ಒಂದೇ! ಅಂದರೆ ಪೂಜಿ! ಅಂದರೆ ಶಾಲೆಯ ಅಭ್ಯಾಸವಲ್ಲ! ಕ್ಲಾಸಿನೊಳಗೆ ಕೇಳಿದಷ್ಟರಿಂದಲೇ ಪಾಸಾಗುತ್ತಿದ್ದೆವು. ಬರೇ ವಣವಣ ಧಾರವಾಡದ ರಸ್ತೆಗುಂಟ ತಿರುಗಾಡುವದರಲ್ಲಿಯೇ ಕಾಲ ಕಳೆಯುತ್ತಿದ್ದೆವು ಧಾರವಾಡದಲ್ಲಿಯ ಹಾಳುಮನೆ, ದುರ್ಗಾದೇವತೆಯಿಂದ ಹಿಡಿದು ರಾಯರ ಹನುಮಂತದೇವರ ಗುಡಿಗಳ ತನಕ ಗುಡಿಗಳು, ಕಾಲಿವೆಗಳು, ಗಟಾರಗಳು, ಆಡವ ಅಂಗಣಗಳು, ಶಾಲೆಗಳು, ಪಂದ್ಯಾಟಗಳು, ಮಾರ್ಕೀಟು—ಇಂಥಲ್ಲಿ ನಮ್ಮ ಪಾದಧೂಲಿ ಬಿದ್ದಿಲ್ಲವೆಂದು ಬೇಕಾದವರು ಸಿದ್ಧ ಮಾಡಬೇಕು. ಅಭ್ಯಾಸ ದೃಷ್ಟಿಯಿಂದ ಅವರು ಗಣಿತದಲ್ಲಿ ಮೇಲು! ನಾನು ಕವಿತೆಗಳನ್ನು ಅನ್ನುವದರಲ್ಲಿ (ಅರ್ಥದಲ್ಲಿ ಪೂಜಿಯಾದರೂ) ಮೇಲು! ಉಳಿದ ವಿಷಯಗಳಲ್ಲಿ ಸಮಸಮಾ ಇದ್ದೆವೆಂದರೂ ಸರಿಯಾಗುವದು.

ಗೆ. ಬೇಂದ್ರೆಯವರು ಅಂದರೆ—ಗಿಡ್ಡ ನ್ನ ಮೂರ್ತಿ (ಈಗಿನಂತೆಯೇ). ಒಂದು ಲಂಗೋಟ ಕನ್ನಡ ಶಾಲೆಯಲ್ಲಿ. ಉದ್ದ ಪಾಟಲೋಣು ಇಂಗ್ಲಿಷ ಶಾಲೆಯಲ್ಲಿ ಆಶಕ್ತ. ಕಜ್ಜಿ ಹುರುಕು ಸಮೃದ್ಧ ಇಬ್ಬರಿಗೂ. ಅವರ

ಕಣ್ಣುಗಳಲ್ಲಿ ಮಾತ್ರ ತೇಜವಿತ್ತು. ಯಾವಾಗಲೂ ಯಾವುದಾದರೊಂದು ಎಣಿಕೆ ಹಾಕುತ್ತ ಜೋಲಿ ಹೊಡೆಯುತ್ತ ಓಣಿ ಓಣಿ ತಿರುಗುವ ತಂಟೆಖೋರ. ಜಗಳವಿಲ್ಲದೆ ನಿದ್ದೆ ಹತ್ತುತ್ತಿದ್ದಿಲ್ಲ ಇವರಿಗೆ. ನಾವು ಎಷ್ಟೋ ಸಲ ನಾರದ ಮೂರ್ತಿಯೆಂತಲೇ ಸಂಬೋಧಿಸುತ್ತಿದ್ದೆವು. ಆಮೇಲೆ ಎರಡನೆಯ ವೈಗುಣ್ಯ ವೆಂದರೆ ಚಾಣಕ್ಯವೃತ್ತಿ. ಮುಂದೆ ನಿಂತು ಕಾದಾಡುವ ಸಾಮರ್ಥ್ಯವಿಲ್ಲದ್ದ ರಿಂದ ಗುಂಪುಗೂಡಿ ಎಣಿಕೆಹಾಕುವ ಚಟ ಬೇಂದ್ರೆ ಅಂದರೆ ಒಂದು ಗುಂಪು—ನಾಲ್ಕು, ಐದು, ಹದಿನಾರು, ಹದಿನೆಂಟು ಮಂದಿ ಇವರ ಗುಂಪಿ ನಲ್ಲಿ! ಒಬ್ಬರೇ ಇರುವದನ್ನು ನಾನು ಕಂಡಿರಲಿಲ್ಲ. ಈ ಬಾಲವೈಗುಣ್ಯಗಳೇ ಮುಂದಿನ ಜೀವನದಲ್ಲಿ ಕರ್ನಾಟಕದ ಉನ್ನತಿಯ ಬಗ್ಗೆ ಜಗಳ, ಕರ್ನಾಟಕದ ಏಳ್ಗೆಗಾಗಿ—ವಿಶೇಷತಃ ಸಾಹಿತ್ಯದ್ವಾರದಿಂದ ಆಧ್ಯಾತ್ಮಿಕ ಏಳ್ಗೆಗೆ ಗುಂಪು ಕಟ್ಟುವದು ಎಂಬಿವೇ ಮೊದಲಾದ ಉಚ್ಚ ಉದಾರ ಗುಣಗಳಾಗಿ ಪರಿಣಮಿ ಸಿವೆ. ನಾನು ಮಾತ್ರ ಒಬ್ಬೊಂಟಿಗನೇ ಕಡೆಯತನಕ--ಈಗ್ಯೂ!

ಬಾಲ್ಯದಿಂದಲೂ ಇವರ ಬೆನ್ನುಹತ್ತಿದ ಒಂದು ವಿಧಿಯೆಂದರೆ ದಾರಿದ್ರ್ಯ! ಇವರ ತಂದೆಗೆ ಅರ್ಧಾಂಗವಾಯು ಉತ್ಪನ್ನವೇನೂ ಇರಲಿಲ್ಲ ಇವರ ತಾಯಿಯ ತಾಯಿ (ಅಜ್ಜಿ) ಖಾನಾವಳಿ ಹಾಕಿದ್ದರು. ಆಗಿನ ಖಾನಾವಳಿ ಯೆಂದರೆ ಅದೊಂದು ಸುಂದರವಾದ ಊಟದ ಮನೆ. ದೊಡ್ಡ ಆಫೀಸರರು, ಬಿ. ಎ ಎಮ್. ಎ. ಆದಂಥ ಶಾಲಾ ಮಾಸ್ತರರು, ಕೆಲವು ವಿದ್ಯಾರ್ಥಿಗಳು ಹೀಗೆ ಊಟ ಮಾಡುವವರು. ಹೆಸರಿಗೇ ಅದು ಖಾನಾವಳಿ. ಒಂದು ಮನೆ ಯಂತೆಯೇ ಇತ್ತು. ಯಾರಾದರೂ ಬೇನೆ ಬಿದ್ದರೆ ಇವರ ಅಜ್ಜಿಯೇ ಉಪ ಚಾರ ಮಾಡುತ್ತಿದ್ದರು ಖಾನಾವಳಿಯಲ್ಲಿ ಊಟ ಮಾಡುವವರೆಲ್ಲರೂ ಇವರಿಗ ಮೊಮ್ಮಕ್ಕಳೇ ಅನ್ನಿರಿ! ಇಷ್ಟು ಪ್ರೀತಿಸುತ್ತಿದ್ದರು ಅನೇಕ ವಿದ್ವಾಂಸರು ನಿತ್ಯ ಕಣ್ಣಿಗೆ ಬೀಳುವದೂ, ಅವರ ಉದಾತ್ತ ವಿಚಾರಗಳಿಂದ ಪರಿಪ್ಲುತವಾದ ವಾದವಿವಾದಗಳನ್ನು ಕೇಳುವದೂ ಬೇಂದ್ರೆಯವರಿಗೆ ಮೊದಲಿನಿಂದಲೇ ಸಿಕ್ಕಿತು. ಆದ್ದರಿಂದ ಅವರಂತೆಯೇ ತಾವಾದರೂ ಯಾವದೊಂದು ದೊಡ್ಡ ಕಾರ್ಯವನ್ನು ವಹಿಸಿಕೊಂಡು, ಪಂಡಿತನಾಗಿ ದೇಶಸೇವೆಗೈಯಬೇಕೆಂಬ ಮಹತ್ವಾಕಾಂಕ್ಷೆಯು ಚಿಕ್ಕಂದಿನಲ್ಲಿಯೇ ತನ್ನಿಂದ ತಾನೇ ಹುಟ್ಟಿರಲಿಕ್ಕೆ ಸಾಕು!

ಒಮ್ಮೆ ಯಾವುದೋ ಒಂದು ಉತ್ಸವ ನಡೆದಿತ್ತು. ನಾವಿಬ್ಬರೂ ಅದಕ್ಕೆ ಹೋಗಿದ್ದೆವು. ಆ ವೇಳೆಯಲ್ಲಿ ಶ್ರೀ ವೆಂಕಟರಾವ ಆಲೂರರವರು 'ಕರ್ನಾಟಕ'ದ ವಿಷಯವಾಗ ಏನೇನೋ ಮಾತಾಡಿದರು. ನನಗೇನೂ ಅರ್ಥವಾಗಲಿಲ್ಲ. ಆ ಉಪನ್ಯಾಸದಲ್ಲಿಯ 'ನಾವೆಲ್ಲರೂ ಕನ್ನಡಿಗರು! ನಮ್ಮಲ್ಲಿ Karnatak Consciousness ಬೆಳೆಯಬೇಕು' ಎಂಬದು ಮಾತ್ರ ಈಗಲೂ ನನಗೆ ಕೇಳಿಸುತ್ತಿದೆ. ನಾವು ಇಂಗ್ಲಿಷ ನಾಲ್ಕನೇ ಇಯತ್ತೆಯಲ್ಲಿರಬೇಕು. ಹೊರಗೆ ಬಂದ ಮೇಲೆ ಕರ್ನಾಟಕದ ಬಗ್ಗೆ ನಾವಿಬ್ಬರೂ ಕೂಡಿ ಮಾತಾಡಿದ್ದು ಇನ್ನೂ ನೆನಪಿನಲ್ಲಿದೆ.

ಇದೇ ಸುಮಾರಕ್ಕೆ ಬೇಂದ್ರೆಯವರು ಪುಣೆಗೆ ಹೋಗಿಬಂದರು. ಪುಣೆಯಲ್ಲಿ ಅವರ ಕಕ್ಕಂದಿರು ಮಿಲಿಟರೀ ಅಕೌಂಟ್ಸದಲ್ಲಿ ಆಫೀಸರರಿದ್ದರು. ಅಲ್ಲಿ ಒಂದು ತಿಂಗಳು ನಿಂತು ಬಂದರು. ನಮಗೆಲ್ಲರಿಗೂ ಆಗ ಪುಣೆಯೆಂದರೆ ಏನೋ ಒಂದು ಅದ್ಭುತವಾಗಿತ್ತು! ಅಲ್ಲಿಂದ ಅವರು ತಂದ ಮಾತುಗಳೆಂದರೆ ಕೇಶವಸುತ ಎಂಬುವವರ ಕವಿತೆ! 'ಕಾಠೋಕಾಠ ಭರೂ ದ್ಯಾ ಪೇಲಾ, ಫೇಸ ಭರಾಭರ ಉಸಳೂ ದ್ಯಾ। ಪ್ರಾಶನ ಕರಿತಾ ಗಂಗ ಜಗಾಚೇ, ಕ್ಷಣೋ ಕ್ಷಣೀ ತೇ ಬದಲೂ ದ್ಯಾ' ಇದನ್ನು ತಾವು ಹಾಡುತ್ತಿದ್ದರಲ್ಲದೆ ನನಗೂ ಕಲಿಸಿದರು. ಅದರಲ್ಲಿ ಮೇಲೆ ಬರೆದ ಎರಡೇ ಸಾಲುಗಳು ನೆನಪಿನಲ್ಲಿವೆ. ಆಮೇಲೆ ಪುಣೆಯಂಥ ದೊಡ್ಡ ಊರಿನ ವರ್ಣನೆ. ಅಲ್ಲಿಯ ಗೆಳೆಯರು. ಅವರ ನಡತೆನಡಾವಳಿ, ಅಭ್ಯಾಸ, ಅವರ ಬುದ್ಧಿವರ್ಚಸ್ಸು. ಅಲ್ಲಿಯ ಶನಿವಾರ ವಾಡೆ. ಎಷ್ಟೆಷ್ಟೋ ಹೇಳಿದರು. ಆಗ ದಿನಾಲು ಪುಣೆಯ ಹರಟೆಯೇ ನಮ್ಮ ಮಂಡಲದಲ್ಲಿ. ಒಂದು 'ಕರ್ನಾಟಕ ಆತ್ಮೀಯತೆ' ಎಂಬ ಮಂತ್ರ, ಎರಡನೆಯದು ಅದಕ್ಕೆ ಪುಣೆಯ ವಿಶಾಲ ಜೀವನದ ಪುಟ. ಇವೆರಡೂ ಕೂಡಿ ಬೇಂದ್ರೆಯವರ ಜೀವನ ಧ್ಯೇಯದ ತಳಹದಿಯು ರಚಿಸಲ್ಪಟ್ಟಿತೆಂದು ನನಗೆ ತೋರುತ್ತದೆ.

ಆಮೇಲೆ ಪುಣೆಗೆ ನಾವಿಬ್ಬರೂ ಬಂದೆವು ಕಾಲೇಜಿನ ಹರಟೆಗಳು ಸಾಗುತ್ತಿದ್ದವು. ಪುಣೆಯಲ್ಲಿಯೊಂದು 'ಶಾರದಾಮಂಡಲ' ವಿತ್ತು. ಅದರಲ್ಲಿ ಕಾಲೇಜಿನ ವಿದ್ಯಾರ್ಥಿಗಳಿದ್ದರು ಬೇಂದ್ರೆಯವರು ಅದಕ್ಕೆ ಸಭಾಸದರಿದ್ದರು. ಅದರಲ್ಲಿ ನನ್ನ ಪ್ರವೇಶವಾಯಿತು. ಒಂದು ದಿನ ನಮ್ಮೆಲ್ಲರ ಫೋಟೋ ತೆಗೆಯಲಾಯಿತು. ನಾನು ಒಂದೇ ದಿನ ಹೋಗಿದ್ದೆ ಮಂಡಲದಲ್ಲಿ—ಫೋಟೋ ದಿನ.

ನನಗೆಲ್ಲರೂ ಅಪರಿಚಿತರು. ಮರಾಠೀ ಭಾಷೆ ಬೇರೆ. ಅವರಲ್ಲಿ ಕೂಡಿಕೊಳ್ಳುವುದಾಗಲಿಲ್ಲ ನನಗೆ ಅದೇ ದಿನ ನೋಡಿದ ಆನಂದದ ನೋಟವೆಂದರೆ ಮಾಸಿಕ ಪುಸ್ತಕಗಳ ಪ್ರದರ್ಶನ. ಆ ಪ್ರದರ್ಶನದಲ್ಲಿ ವಿವಿಧ ಮಾಸಿಕದ ಅಂಕುಗಳೂ, ವಿಶೇಷಾಂಕಗಳೂ ಇದ್ದವು. ಇದರಿಂದಲೇ ಬೇಂದ್ರೆಯವರಲ್ಲಿ ಪ್ರಾಚೀನ ಗ್ರಂಥ ಸಂಗ್ರಹದ ಹುಚ್ಚು ಹಿಡಿಯಿತೆಂಬುದರಲ್ಲಿ ಸಂದೇಹವಿಲ್ಲ ಅದೇ ವೇಳೆಯಲ್ಲಿ ಬೇಂದ್ರೆಯವರಿಗೆ ಪುಣೆಯ ಪ್ರಸಿದ್ಧ ಇತಿಹಾಸ ಸಂಶೋಧಕರಾದ ಶ್ರೀ ದತ್ತೋ ವಾಮನ ಪೋತದಾರ ಇವರ ಪಂಚಯವಾಯಿತು ಪ್ರಾಚೀನ ಗ್ರಂಥಗಳ ಪ್ರೇಮಕ್ಕೆ ಈ ಪರಿಚಯವು ಕಾರಣವಿರಬೇಕೆಂದು ನನಗೆ ಅನಿಸುತ್ತದೆ. ಇರಲಿ.

ನಾವು ಇಂಟರದಲ್ಲಿರುವಾಗ ಒಮ್ಮೆ ಬೇಂದ್ರೆಯವರು ನಮ್ಮ ಮನೆಗೆ ಬಂದಿದ್ದರು. ಯರವಡಾ ಜೇಲಿನೆದುರಿಗೆ ನಮ್ಮ ಮನೆ ಇತ್ತು ಇಲ್ಲಿಂದ ನಾನು ಡೆಕ್ಕನ್ ಕಾಲೇಜಕ್ಕೆ ನಡೆದು ಹೋಗುತ್ತಿದ್ದೆ. ಆಗ ನನಗೆ ಸಂಸ್ಕೃತ ಕವಿತೆಗಳನ್ನು ಕಟ್ಟುವ ಹುಚ್ಚು ಇತ್ತು. ನಾನು ಬೇಂದ್ರೆಯವರಿಗೆ ಓದಿ ತೋರಿಸುತ್ತಿದ್ದೆ. ಅವರಿಗೆ ಆಗ ಇಂಗ್ಲಿಷ ಮತ್ತು ಕನ್ನಡ ಕವಿತೆಗಳನ್ನು ಕಟ್ಟುವ ಹುಚ್ಚು ಹಿಡಿದಿತ್ತು. ಅವರು ನನಗೆ ಸಂಸ್ಕೃತದಲ್ಲಿ ಬರೆಯುವದಕ್ಕಿಂತಲೂ ಕನ್ನಡದಲ್ಲಿ ಬರೆಯಬೇಕೆಂದು ಹೇಳಿದರು. ನಾನು ನನಗೆ ಕನ್ನಡ ಬರುವದಿಲ್ಲೆಂದು ಹೇಳಿದೆನು. ಅವರು 'ಯಾರಾದರೂ ನಕ್ಕಾರು! ಕನ್ನಡ ಮಾತು ಬರುತ್ತದೆ, ಆದರೆ ಬರೆಯಲಿಕ್ಕೆ ಬರುವದಿಲ್ಲವೆಂದರೆ! ನೀವು ಬರೆಯಲೇ ಬೇಕು. ನಾನು ಮುಂದಿನ ಆದಿತ್ಯವಾರ ಬರುವೆನು' ಎಂದು ಹೇಳಿ ತೆರಳಿದರು. ನಾನು ಎಂಥದಾದರೂ ಒಂದು ಕವಿತೆ ಗೆಳೆಯನ ಆಗ್ರಹಕ್ಕಾಗಿ ಕಟ್ಟಿದೆ:

ಶ್ರೀ ರಮಾರಮಣನೇ ನಿನ್ನ ಮಹಿಮೆಯ ಪೊಗಳಿ।
ವಾರಿಜಾಕ್ಷನೆ ನಿನ್ನ ಮಹಿಮೆ ಬಣ್ಣಿಸಿ ನಾನು!
ಕುರುಡರಿಗೆ ಬೋಧಮಂ ಕೊಡುವ ನೆವದಿಂದಲೀ ಪದಗಳನು ಹಾಡುತಿಹೆನು॥
ವರಶಬ್ದರಚನೆಯಂ ನೀನು ಮಾಡಿದೆಯಲ್ಲ।
ಸರಸವರ್ಣದ ಸೃಷ್ಟಿ ಶಬ್ದಮಾಧುರ್ಯಮಂ।
ಸಾರವನು ಕಸುಕೊಂಡು ನಾನೇನು ಕೊಡಲೀಗ? ಪಾಮರನು ಶರಣು ನಿನಗೆ॥

ಬೇಂದ್ರೆಯವರು ಆದಿತ್ಯವಾರ ಬಂದರು. ನಾನು ಓದಿ ತೋರಿಸಿದೆ. 'ಸೈ, ಕವಿಯಾದಿರಿ' ಎಂದು ಹರಕೆ ಕೊಟ್ಟರು. ಇದೊಂದೇ ನಾನು ಆಗ ಬರೆದ ಕವಿತೆ. ಮುಂದೆ ಒಂದೂ ಬರೆಯಲಿಲ್ಲ ಆಗಿನ ಕಾಲಕ್ಕೆ

ಇದೇ ಕಾಲಕ್ಕೆ ನನ್ನ ಕಾಲೇಜ ಮಿತ್ರರೊಬ್ಬರು (ಶ್ರೀ ಕುರ್ತಕೋಟಿ) ಎಂಬವರು ಶ್ರೀ ರವೀಂದ್ರನಾಥರ 'ಸಾಧನ' ವೆಂಬ ಉಪನ್ಯಾಸಗಳ ಪುಸ್ತಕವನ್ನು ಕೊಟ್ಟಿದ್ದರು. ಅದು ಬೇಂದ್ರೆಯವರ ಕಣ್ಣಿಗೆ ಬಿತ್ತು. ಅದನ್ನು ತೆಗೆದುಕೊಂಡು ಮನೆಗೆ ಹೋದರು. ಓದಿದರು, ಮನನ ಮಾಡಿದರು, ಸೈ ಎಂದರು. ಇದೊಂದೇ ಗ್ರಂಥದ ವಾಚನದಿಂದ ಅಂದು ರವೀಂದ್ರನಾಥರು ಬೇಂದ್ರೆಯವರಿಗೆ ಸದ್ಗುರುಗಳಾದರು. ನಾವಿಬ್ಬರೂ ಬಿ. ಎ ದಲ್ಲಿದ್ದಾಗ ನಾನು ಶ್ರೀ ಅರವಿಂದರ 'ಆರ್ಯ' ಎಂಬ ಮಾಸಿಕ ಪುಸ್ತಕವನ್ನು ತರಿಸುತ್ತಿದ್ದೆ. ಅದನ್ನು ನಾವಿಬ್ಬರೂ ಕೂಡಿ ಓದಿದೆವು. ಬೇಂದ್ರೆಯವರ ಮನಸ್ಸಿನಲ್ಲಿ ಅತ್ಯಾದರ ಭಾವನೆಯನ್ನು—ಭಕ್ತಿಯನ್ನೇ—ಬಿತ್ತಿತು ಈ ಆರ್ಯಮಾಸಿಕ. ನಾನು ಮಾತ್ರ ಯಾರನ್ನೂ ಗುರುಗಳನ್ನಾಗಿ ಮಾಡಿಕೊಳ್ಳಲಿಲ್ಲ. ನನಗೆ ಶ್ರೀ ರಾಮಕೃಷ್ಣ ಪರಮಹಂಸ ಮತ್ತು ಶ್ರೀಮದ್ವಿವೇಕಾನಂದರು ಎಂದೋ ಗುರುಗಳಾಗಿಬಿಟ್ಟಿದ್ದರು. ಶ್ರೀ ರವೀಂದ್ರನಾಥ ಠಾಕೂರರೂ ಶ್ರೀ ಅರವಿಂದ ಘೋಷರೂ ಬೇಂದ್ರೆಯವರ ಗುರುಗಳಾದರು. ಒಬ್ಬರಿಂದ ಕಾವ್ಯಫಲ ಸಿಕ್ಕಿತು. ಇನ್ನೊಬ್ಬರಿಂದ ಯೋಗಫಲ ಸಿಕ್ಕಿತು ಅವರಿಗೆ.

ಇಷ್ಟೆಲ್ಲ ಬೀಜಗಳನ್ನು ಮನಸ್ಸಿನಲ್ಲಿ ಬಿತ್ತಿಕೊಂಡು ಬಿ. ಎ. ಆಗಿ ಧಾರವಾಡದಲ್ಲಿ ವ್ಹಿಕ್ಟೋರಿಯಾ ಹಾಯಸ್ಕೂಲಿನಲ್ಲಿ ಮಾಸ್ತರರಾದರು. ಅಲ್ಲಿಯೂ ಹುಡುಗರ ಮನಸ್ಸಿನಲ್ಲಿ ವಿದ್ಯಾಭಿರುಚಿ, ಕಾವ್ಯಯೋಗ, ಕರ್ನಾಟಕಾಭಿಮಾನ, ಕರ್ನಾಟಕ ಸಂಸ್ಕೃತಿ, ಯೋಗಜೀವನವೆಂಬ ಬೀಜಗಳನ್ನು ಅವರು ಹೇಗೆ ಬಿತ್ತಿದರೆಂಬುದು ಅನೇಕರಿಗೆ ಗೊತ್ತಿರುವ ಮಾತಾಗಿದೆ.

## ಬೇಂದ್ರೆಯವರು

ಮಾನವನು ತಾನು ಹುಟ್ಟಿ ಬಂದದ್ದು ಏತಕ್ಕೆ? ನಾನು ಏನು ಮಾಡಬೇಕು? ನನಗೆ ಏನು ಸಾಧ್ಯ? ಎಷ್ಟು ಸಾಧ್ಯ? ಎಂಬಿವೇ ಪ್ರಶ್ನೆಗಳಿಗೆ ಉತ್ತರಗಳನ್ನು ಕಲ್ಪಿಸಿಕೊಂಡೇ ಜೀವನಪಥವನ್ನು ಆಕ್ರಮಿಸುತ್ತಾನೆ. ಆದರೆ ಯಾರ ಜೀವನವು ಬರೇ ಅನ್ನ ವಸ್ತ್ರಗಳನ್ನು ದೊರಕಿಸುವದರಲ್ಲಿಯೇ

ಹೋಗುತ್ತದೆಯೋ, ಅವರಿಗೆ ಈ ಪ್ರಶ್ನೆಗಳು ಬರುವದೇ ಇಲ್ಲವೆಂದು ತಪ್ಪು ತಿಳುವಳಿಕೆಯಿದೆ. ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡದೇ ಜೀವನವೇ ನಡೆಯುವದಿಲ್ಲ. ಆದರೆ ಆ ಪ್ರಶ್ನೆಗಳ ವ್ಯಾಪ್ತಿಯಷ್ಟೇ ಬೇರೆಯಾಗುವದು. ಅನ್ನ ವಸ್ತ್ರದ ಕೊರತೆಗಳು ದೂರವಾದವೆಂದರೆ ಮಾನವನು ಈ ಜಗತ್ತಿನ ವಿಷಯವಾಗಿ ವಿಚಾರ ಮಾಡಹತ್ತುವನು. (ವೇದಾಂತ) ಅಥವಾ ತನ್ನ ಮನರಂಜನೆಯ ಆಟಗಳನ್ನು (ಕಲೆ) ಕಲ್ಪಿಸುವನು. ಈ ಬಗೆಯಾಗಿ ತನ್ನ ಆತ್ಮೋನ್ನತಿಯನ್ನೂ ಸಮಾಜೋನ್ನತಿಯನ್ನೂ ಮಾಡತೊಡಗುವನು. ಅವನು ಯಾವ ಗುರಿಯನ್ನು, ಧ್ಯೇಯವನ್ನು ನಿಶ್ಚಯಿಸಿ ಆ ಕಾರ್ಯದ ವಿಷಯಕ್ಕೆ ಪ್ರಯತ್ನಗಳನ್ನು ಮಾಡುವನೋ ಅದರಿಂದಲೇ ಅವನ ಮಹತ್ವ. ಅದರಿಂದಲೇ ಅವನ ಜೀವನ ಸಾಮರ್ಥ್ಯ. ಮತ್ತೊಂದು ಮಹತ್ವದ ಮಾತೆಂದರೆ ಮಾನವನು ಪರಿಸ್ಥಿತಿಯ ಮಗು. ಆ ಪರಿಸ್ಥಿತಿಯೊಳಗಿನ ದೋಷಗಳನ್ನೂ ಅನ್ಯಾಯವನ್ನೂ ದೂರಮಾಡುವ ಶಕ್ತಿಯು ಬರುವತನಕವಾದರೂ ಅವನು ಪರಿಸ್ಥಿತಿಯ ಗುಲಾಮನಾಗಿಯೇ ಇರಬೇಕಾಗುವದು ಶ್ರೀ. ಬೇಂದ್ರೆಯವರು ಯಾವ ಧ್ಯೇಯಕ್ಕಾಗಿ ದುಡಿದಿರುವರೆಂಬುದನ್ನು ನೋಡುವ ಮೊದಲು ಅವರು ಆ ಧ್ಯೇಯವನ್ನೇ ಏಕೆ ಆಯ್ದುಕೊಂಡರೆಂಬುವದನ್ನು ನೋಡುವದವಶ್ಯ ಮಾತು

ಶ್ರೀ ಬೇಂದ್ರೆಯವರು ಬಿ. ಎ ದಲ್ಲಿರುವಾಗಲೇ ಅವರ ನಿಶ್ಚಯ ವಾಗಿತ್ತು—ಕರ್ನಾಟಕದ ಸೇವೆಗಾಗಿ ಏನಾದರೂ ಮಾಡಬೇಕು. ತನಗೆ ಯಾವದು ಸಾಧ್ಯ ? ಜ್ಞಾನದಾನ—ಶಿಕ್ಷಣ. ಆದ್ದರಿಂದ ಬಿ ಎ. ಆದಕೂಡಲೇ ಅವರು ಧಾರವಾಡಕ್ಕೆ ಹೋಗಿ ಮಾಸ್ತರರಾದರು. ಆಗಿನ ಕಾಲದಲ್ಲಿ ಅಂದರೆ ೧೯೧೭—೧೮ರಲ್ಲಿ ಸರಕಾರೀ ನೌಕರೀ ಹಿಡಿದಿದ್ದರೆ ಅವರಿಗೆ ಈಗ ಐನೂರರಷ್ಟು ಸಂಬಳವು ದೊರೆಯುವಷ್ಟು ಸೌಕರ್ಯವು ಇತ್ತು. ಅವರಿಗೆ ಒಂದೇ ಒಂದು ಧ್ಯೇಯ. ಕರ್ನಾಟಕದ ಸಂಸ್ಕೃತಿಯ ಉನ್ನತಿ. ಆ ಧ್ಯೇಯವನ್ನು ಸಾಧಿಸು ವದು ಇನ್ನೆಲ್ಲಿಯೂ ಇಲ್ಲ. ಕರ್ನಾಟಕದಲ್ಲಿ. ಅದೂ ಅಧ್ಯಾಪಕರಾಗಿ ಅಂದರೆ ಎಳೇ ಮಕ್ಕಳಿಗೆ ಕರ್ನಾಟಕಾಭಿಮಾನವನ್ನು ಕಲಿಸಿ ಅದನ್ನು ಬೇರೂರುವಂತೆ ಮಾಡುವದು. ಆ ಅಭಿಮಾನವು ಒಣ ದಂಭವಲ್ಲ. ಕರ್ನಾಟಕದಲ್ಲಿ ಹುಟ್ಟಿದ ವೀರರ, ವೇದಾಂತಿಗಳ ಚರಿತ್ರಮಹಾತ್ಮ್ಯವನ್ನು ತಿಳಿದು, ಕರ್ನಾಟಕದ

ಕಲೆಯ ವೈಭವವನ್ನು ಕಂಡುಹಿಡಿದು, ಕನ್ನಡ ವಾಙ್ಮಯದಲ್ಲಿ ಅಡಕವಾಗಿರುವ ಉಚ್ಚ ಜೀವನ ತತ್ವಗಳನ್ನು ಕಲಿತು ನಡೆದು ತೋರಿಸಿ "ಇದುನೋಡಿರಿ ನಮ್ಮ ಕರ್ನಾಟಕ. ಇಷ್ಟು ದೊಡ್ಡದು. ಇದರ ವಿಷಯವಾಗಿ ಅಭಿಮಾನ ತಾಳಿರಿ" ಎಂದು ತೋರಿಸುವದು. ಈ ಧ್ಯೇಯವನ್ನು ಸಾಧಿಸುವದಕ್ಕೋಸ್ಕರ ಅವರು ಪಟ್ಟ ಕಷ್ಟಗಳು, ಅವರು ಮಾಡಿದ ಸಾಹಸ, ಅವರು ಕೈಕೊಂಡ ದಾರಿದ್ರ್ಯ, ಅವರು ಆಚರಿಸಿದ ದೀರ್ಘೋದ್ಯೋಗ—ಇವುಗಳನ್ನೆಲ್ಲ ನೋಡಿದರೆ, ಎದೆಯು ತಣ್ಣಗಾಗುವದು! ಭೆಟ್ಟಿಯಾದವರಿಗೆಲ್ಲ 'ಕನ್ನಡ ಓದಿರಿ' ಇದೇ ಮಂತ್ರವನ್ನು ಎಷ್ಟೋ ದಿವಸ ಹೇಳುತ್ತ ನಡೆದ ಇವರನ್ನು ನೋಡಿ ಈ ಗೃಹಸ್ಥನಿಗೆ ಬೇಸರಿಕೆ ಹೇಗೆ ಒದುವದಿಲ್ಲವೆಂದು ನನಗೆ ಆಶ್ಚರ್ಯವಾಗುತ್ತಿತ್ತು. ಸಾವಿರಾರು ಮಂದಿಗೆ ಹೇಳಿದರೆ ಕಟ್ಟಕಡೆಗೆ ಒಬ್ಬನಾದರೂ ಸಮಾನ ಧರ್ಮಿಯು ಉತ್ಪನ್ನವಾಗಬಹುದೆಂದು ಇವರ ಹಂಬಲವನ್ನು ನೋಡಿ ನನಗೆ ಆನಂದವೆನಿಸುತ್ತಿದ್ದಿತು. ಈ ಕರ್ನಾಟಕ ಸಂಸ್ಕೃತಿಯ ಧ್ಯೇಯವನ್ನು ಸ್ವಲ್ಪೇ ಅಂಶದಿಂದಲಾದರೂ ಹಿಡಿದವರೆಲ್ಲ ಇವರ ಗೆಳೆಯರಾಗುತ್ತಿದ್ದರು. ಮ. ರಾ. ರಾ. ಎಂಬ ಒಕ್ಕಣಿಕೆಯು ಹೋಗಿ ಗೆ. ಎಂಬ ಒಕ್ಕಣಿಕೆಯು ಪ್ರಸಾರವಾಗಹತ್ತಿತು. ಇಂಥ ಗೆಳೆಯರು ಬೇಂದ್ರೆಯವರಿಗೆ ಎಷ್ಟೋ ಮಂದಿ ಸಿಕ್ಕರು. ಅದೇ "ಗೆಳೆಯರ ಗುಂಪು" ಆಯಿತು. ಗೆಳೆಯರ ಗುಂಪಿನ ಮಹತ್ವವಾದ ಕಾರ್ಯವೆಂದರೆ "ಜಯಕರ್ನಾಟಕ" ಮಾಸಿಕ. ಅದರ ಮೊದಮೊದಲಿನ ಸಂಚಿಕೆಗಳಲ್ಲಿ ಎಲ್ಲ ಗೆಳೆಯರು ಒಟ್ಟುಗೂಡಿದರೆ ಎಷ್ಟು ಕಾರ್ಯವಾಗುವದೆಂಬುದು ಪ್ರಕಟವಾಗಿದೆ. ಗೆಳೆಯರ ಗುಂಪು (ಧಾರವಾಡ) ಮಾಡಿದ ಕಾರ್ಯದಿಂದ ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಸ್ಫೂರ್ತಿಯನ್ನು ಹೊಂದಿ ಅನೇಕ ಗುಂಪುಗಳು ಅಲ್ಲಲ್ಲಿ ಕರ್ನಾಟಕ ಸೇವೆಗಾಗಿ ಇನ್ನೂ ಕೆಲಸ ಮಾಡಹತ್ತಿವೆ. ವಸಂತೋತ್ಸವ, ನಾಡಹಬ್ಬ, ಸಾಹಿತ್ಯಕೂಟಗಳ ಸುರಿಮಳೆಯಾಯಿತು. ಇದರ ಶ್ರೇಯವನ್ನು ನಾನಂತೂ ಬೇಂದ್ರೆಯವರಿಗೇನೇ ಕೊಡುತ್ತೇನೆ. ಇಷ್ಟರಿಂದಲೇ ಆಗಲಿಲ್ಲ. ಪ್ರತಿಯೊಂದು ಊರೊಂದು ಗೆಳೆಯರ ಗುಂಪಾಗಿ ಹೋಗಬೇಕು. ಕರ್ನಾಟಕದಲ್ಲಿರುವ ಜನರೆಲ್ಲರೂ ಗೆಳೆಯರಾಗಬೇಕು. ಸಜ್ಜನರಾಗಬೇಕು. ಸುಸಂಸ್ಕೃತಿಯುಳ್ಳವರಾಗಬೇಕು. ಈ ಧ್ಯೇಯದಿಂದ ಪ್ರೇರಿತವಾದದ್ದೊಂದು ದೊಡ್ಡ ಸಂಸ್ಥೆಯನ್ನೇ—ರವೀಂದ್ರರ ಶಾಂತಿನಿಕೇತನದಂಥಹದು—ಏರ್ಪಡಿಸಬೇಕೆಂದು ಬೇಂದ್ರೆಯವರ ಹಂಬಲವಿತ್ತು.

'ಕನ್ನಡ ಕುಲ'ದ ಕನಸು ಕನಸೇ ಆಗುವದೂ ಬಿಡುವದೂ ಕರ್ನಾಟಕದ ಧನಿಕರನ್ನು ಕೂಡಿದೆ. ಇಂದಿಲ್ಲ ನಾಳೆ 'ಕನ್ನಡ ಕುಲ'ವೆಂಬುವ ಸಂಸ್ಥೆಯು ಯಾರಿಂದಲಾದರೂ ಏರ್ಪಟ್ಟೇ ತೀರುವದೆಂದು ನನ್ನ ಆಶೆ!

ಬೇಂದ್ರೆಯವರು ಕವಿಗಳೆಂದು ಪ್ರಸಿದ್ಧವಿದ್ದರೂ ಅವರು ಕರ್ನಾಟಕ ಸಂಸ್ಕೃತಿಯ ಯೋಗಿಯೆಂದು ನಾನು ಅನ್ನುವದು. ಅವರ ಕಾವ್ಯದ ತಿರುಳೇನು? ಇದೇ. ಆತ್ಮೋನ್ನತಿ ಮುಂಚೆ. ಅದರಿಂದಲೇ ಕರ್ನಾಟಕದ ಉನ್ನತಿ. ಆ ಉನ್ನತಿಯ ಕಾರ್ಯದಲ್ಲಿ ಯೋಗದಲ್ಲಿ ಹೊಳೆಯುವ ಭಾವ ಗಳೆಂದರೇನೇ ಬೇಂದ್ರೆಯವರ ಕಾವ್ಯವೆಂದು ಹೇಳಬಹುದು.

ಬೇಂದ್ರೆಯವರು ಕೊಂಕಣಸ್ಥ ಬ್ರಾಹ್ಮಣರು. ಕೊಂಕಣಸ್ಥರಲ್ಲಿ ಬುದ್ಧಿ ಹೆಚ್ಚು—ಅದೂ ವ್ಯಾವಹಾರಿಕ ಬುದ್ಧಿ. ಕನ್ನಡಿಗರಲ್ಲಿ ಅಂದರೆ ದೇಶಸ್ಥರಲ್ಲಿ ಹೃದಯ, ಪ್ರೇಮ ಹೆಚ್ಚು. ಅವರು ಕೊಂಕಣಸ್ಥ ಕನ್ನಡಿಗರಾದ್ದರಿಂದ ಅವ ರಲ್ಲಿ ವಿಲಕ್ಷಣವಾದ ಬುದ್ಧಿ ಮತ್ತು ಕರಳಿನ ವಿಲಾಸಗಳ ಸಂಗಮವಾಗಿದೆ ಇದಕ್ಕೆ ಜೋಡು ಎಂದರೆ ಅವರ ಸತತ ಅಭ್ಯಾಸ. ವೇದಾಂತ, ಶಾಸ್ತ್ರ, ಸಮಾಜಶಾಸ್ತ್ರ, ಸಾಹಿತ್ಯಶಾಸ್ತ್ರ (ಇದಂತೂ ಮನೆಯದು), ರಾಜಕಾರಣ, ಚರಿತ್ರೆ—ದಿನಾಲು ಏನಾದರೊಂದು ಗ್ರಂಥದ ಅಭ್ಯಾಸ ನಡೆದೇ ಇರುವದು. ಇದರಲ್ಲಿಯೂ ಕರ್ನಾಟಕಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳು. ಭಟಕಳ ಬಂದರದ ನಕಾಶೆಯಾಗಲೀ ಗೆರೆಸೊಪ್ಪೆಯ ತಡಸಲಿನಿಂದ ವಿದ್ಯುದ್ದೀಪದ ಯಂತ್ರಗಳ ನಕಾಶೆಗಳಾಗಲೀ ಇವರಿಗೆ ಬೇಕು. ಭಟಕಳ ಮತ್ತು ಗೆರೆಸೊಪ್ಪೆ ಕರ್ನಾಟಕದಲ್ಲಿ ಇವೆಯಲ್ಲ. ಅವು ಗೊತ್ತಿರಲೇ ಬೇಕು. ನಾನೊಮ್ಮೆ ಕೊಡ ಗಿಗೆ ಹೋಗಿದ್ದೆ. ಬೇಂದ್ರೆಯವರು ಕೊಡಗಿನ ವಿಷಯ ನನ್ನನ್ನು ಎರಡು ಮೂರು ದಿನ ಗೋಳಾಡಿಸಿ ನಾನು ನೋಡಿದ ಎಲ್ಲ ವಿಷಯಗಳನ್ನು ಗ್ರಹಿಸಿ ಕೊಂಡರು. ಏಕೆ? ಕೊಡಗರು ಕನ್ನಡ ಮಾತಾಡುವ ಕನ್ನಡಿಗರೆಂದು! ಇದಲ್ಲದೆ ಭಾಷಾಶಾಸ್ತ್ರ, ಇಂಗ್ಲಿಷು ಬಲು ಜೋರು. ಮರಾಠಿ, ಸಂಸ್ಕೃತ, ಕನ್ನಡವಂತೂ ಬೆನ್ನಿಗೆ ಹತ್ತೇ ಇದೆ. ಯಾವ ವಿಷಯವನ್ನು ತೆಗೆದುಕೊಂಡರೂ ವಿಶಾಲವಾದ—ಅರವಿಂದ ಘೋಷರ ವಿಶಾಲವಾದ—ದೃಷ್ಟಿಯಿಂದ ನೋಡಿ, ಅಭ್ಯಾಸಮಾಡಿ, ವಾದ ಮಾಡುವಷ್ಟು ಸಂಗ್ರಹವಿರುವದು ಇವರಲ್ಲಿ. ವೇದಾಂತ ದಲ್ಲಿ ಸಾಂಖ್ಯವಿದ್ದರೂ ಸರಿಯೇ. ಬೌದ್ಧ ಜೈನವಾದರೂ ಸರಿಯೇ. ಇವರಿಗೆ

ಅದು ಸುಲಭವಾದದ್ದು—ಸಂತತ ಅಭ್ಯಾಸದಿಂದ. ಈ ವಿದ್ಯಾವ್ಯಾಸಂಗಕ್ಕೆ ತಕ್ಕಂಥ ಗ್ರಂಥ ಸಂಗ್ರಹವೂ ಅವರಲ್ಲಿದೆ. ಅವರು ಗ್ರಂಥಗಳನ್ನು ಕೊಂಡು ಅರ್ಥ ಬಡವರಾದರೆಂದರೆ ತಪ್ಪಾಗದು. ಈ ವಿದ್ಯಾವ್ಯಾಸಂಗಕ್ಕೆ ತಕ್ಕಂಥ ಸ್ಮರಣಶಕ್ತಿಯನ್ನೂ ಅವರಿಗೆ ದೇವರು ದಯಪಾಲಿಸಿದ್ದಾನೆ. ಅವರು ಕವಿತೆ ಬರೆಯಹತ್ತಿದರೆಂದರೆ ಭಾವರಸವು ಈ ತಿಕ್ಕಾಟದಲ್ಲಿ ಈಸಾಡಿ ಬರಬೇಕಾಗುತ್ತದೆ. ಬಂತೂ ಬರೆದೆ ಎಂಬುದು ಅವರಲ್ಲಿಲ್ಲ. ಪ್ರತಿಯೊಂದು ಶಬ್ದಕ್ಕೆ ತೂಕವಿರಲೇಬೇಕು. ಇವರು ಕಾವ್ಯವನ್ನು ಬರೆಯುತ್ತಿರುವಾಗ ಕುಳಿತು ಬರೆಯುವದು ತೀರ ಕಡಿಮೆ ಸಣ್ಣ ಹುಡುಗರಂತೆ ಜೋಕಾಲಿಯನ್ನು ತೂಗುತ್ತ ಬರೆಯುವ ಪರಿಪಾಠವಿತ್ತು. ಒಂದು ಕೈಯಿಂದ ಜೋಕಾಲಿಯ ಹಗ್ಗ ಹಿಡಿದು ಜೀಕುವದು. ಒಂದು ಕೈಯಲ್ಲಿ ಪುಸ್ತಕ ಪೆನ್ಸಿಲ್ಲು ವಿಚಾರ ಬಂದ ಹಾಗೆ ಬರೆಯುವದು. ಒಂದು ಸಾಲು ಮುಗಿಯಿತೆಂದರೆ ಅದನ್ನು ಸಾವಿರಾರು ಸಲ ಘಟ್ಟಿಯಾಗಿ ಹಾಡಿ ( ದೊಡ್ಡದೊಂದು ದನಿ ದೇವರು ಕೊಟ್ಟಿರುವನು ! ) ಬಿಡುವದು. ಒಂದು ಸುಂದರವಾದ ಸಾಲಿನ ರಚನೆಯಾಗಿತ್ತೆಂದರೆ ಅದಕ್ಕೆ ಮೂರು ದಿವಸ ! ಇದು ಇವರ ಕಾವ್ಯದ ಶೈಲಿ !

ಕಾವ್ಯವೆಂದರೊಂದೇ ಮಾದರಿಯದಿರುವದಿಲ್ಲ. ಹಲವು ತರಹದ ಕಾವ್ಯದ ಶೈಲಿಗಳಿರುವವು. ಇದು ಹೌದು ಅಂದರೆ ಅದು ಅಲ್ಲ ಎನ್ನುವ ಹಾಗಿಲ್ಲ. ಬೇಂದ್ರೆಯವರ ಕಾವ್ಯವು ಇಂಗ್ಲಿಷದಲ್ಲಿ ರಾಬರ್ಟ ಬ್ರಾವುನಿಂಗನ ಕಾವ್ಯವನ್ನು ಹೋಲುತ್ತಿದೆ. ಕಾಲೇಜದಲ್ಲಿರುವಾಗ ಬೇಂದ್ರೆಯವರ ಕಾವ್ಯ ಗುರುವೆಂದರೆ ಬ್ರಾವುನಿಂಗನೇ ! ಆಮೇಲೆ ರವೀಂದ್ರನಾಥರು. ಇವರ ಶೈಲಿಯ ಮೇಲೆ ಮರಾಠಿ ನಾಟಕಕಾರರಾದ ಗಡಕರಿಯವರ ಮುದ್ರೆಗಳನ್ನು ಈಗಲೂ ಕಾಣಬಹುದು ಗಡಕರಿಯವರು ಶಬ್ದಪ್ರಭುಗಳಿದ್ದರು. ಮರಾಠಿಯಲ್ಲಿ ಶಬ್ದಗಳ, ರಸಗಳ, ಭಾವಗಳ ಸ್ವೈರ ವಿಲಾಸವನ್ನು ನೋಡಬೇಕೆನ್ನುವವರು ಗಡಕರಿಯವರ ನಾಟಕಗಳನ್ನು ಓದಬೇಕು. ಬೇಂದ್ರೆಯವರಲ್ಲಿಯ ಶಬ್ದ ವಿಲಾಸವು ಗಡಕರಿಯವರಂತೆ ಸ್ವೈರವಾಗಿಲ್ಲ ಶಬ್ದರಚನೆಗೆ ಬಂಧವಿದೆ, ಶಬ್ದಗಳಲ್ಲಿ ಆಯ್ಕೆಯಿದೆ, ಶಬ್ದಗಳಲ್ಲಿ ಪೂರ್ಣ ಅರ್ಥವನ್ನು (ರಸವನ್ನು ಸಹ) ತರುವ ಸಾಮರ್ಥ್ಯವಿದೆ. ಈ ಶಬ್ದರಚನೆಯ ಜೀವಾಳವೆಂದರೆ ವೇದಾಂತ. ಜೀವನ ವೇದಾಂತ ಕೂಡಿದ ಬೇಂದ್ರೆಯವರ ಕಾವ್ಯವು ಉಪನಿಷತ್ತುಗಳಾಗ

ಬೇಕೆಂಬ ಹಂಬಲದಿಂದ ಹರಿಯುತ್ತಲಿದೆ ಎಂಬುದನ್ನು ಮರೆಯಕೂಡದು. ಬೇಂದ್ರೆಯವರ ಕಾವ್ಯವೆಂದರೆ ಮನೋರಂಜನೆಯಲ್ಲ—ಅಭ್ಯಾಸ ಸ್ವಲ್ಪ ಟೊಂಕ ಕಟ್ಟಿ ಓದಿದರೆ ಅಗಾಧವಾದ ಆನಂದವನ್ನು ಕೊಡುವದು. ಅದರ ಹಿನ್ನೆಲೆಗಳನ್ನು ಕಂಡುಹಿಡಿಯದ ಹೊರತು ಓದುಗರಿಗೆ ಚಟಕ್ಕನೇ ಅರ್ಥ ವಾಗುವಹಾಗಿಲ್ಲ. ನನಗೊಮ್ಮೆ ಅವರು 'ಬೇಕನ್ನನ ನಿಬಂಧಗಳನ್ನು ಕನ್ನಡಿಸಿರಿ' ಎಂದು ಪಾಠ ಕೊಟ್ಟಿದ್ದರು. ಇವರು ಸೂತ್ರರೂಪದಿಂದ ಹೇಳುವ ಮಾತು ಗಳೂ ಬಹಳ. ಅವರು ಕಾವ್ಯವನ್ನು ಬರೆಯುವದೂ ಹಾಗೆಯೇ. ನಾಲ್ಕಾರು ಪದ್ಯಗಳಿಂದ ತಮ್ಮ ಆತ್ಮದಲ್ಲಿಯ ಭಾವನೆಗಳ ಆವಿಷ್ಕಾರವನ್ನು ಮಾಡುವರು. ಒಂದು ವಿಚಾರದಿಂದ ಮತ್ತೊಂದು ವಿಚಾರಕ್ಕೆ ಅಂತರವಿದ್ದೇ ಇರುವದು. ಅದನ್ನು ನೀವೇ ತುಂಬಿಕೊಳ್ಳುವ ಶ್ರಮ ವಹಿಸಬೇಕು. ಅದಾಗದಿದ್ದರೆ ಅರ್ಥ ವಾಗುವದಿಲ್ಲವೆಂದು ಬಿಟ್ಟುಬಿಡಬೇಕು. ಇಲ್ಲದಿದ್ದರೆ ಅವೇ ಕವನಗಳನ್ನು ಅವರ ಬಾಯಿಂದಲೇ ಕೇಳಬೇಕು. ಅವರು ಕಾವ್ಯವನ್ನು ಅನ್ನುವಾಗ ಯಾವ ಆವೇಶದಿಂದ ಅದನ್ನು ಹೇಳುವರೋ ಅದೇ ಕಾವ್ಯಾರ್ಥ ಬಿಚ್ಚಾಗಿ ತೋರಿ ಬಿಡುವದು! ಹೀಗಿದೆ ಬೇಂದ್ರೆಯವರ ಕಾವ್ಯಮಹಾತ್ಮ್ಯ!

ಈಗಿನ ಕಾಲದಲ್ಲಿ ಬರೇ ಕಾವ್ಯವನ್ನು ಬರೆದರೆ ತೀರಲಿಲ್ಲ. ಸಾಹಿತ್ಯಿಕ ನೆಂದ ಕೂಡಲೇ ಸಭೆಗಳಲ್ಲಿ ಮಾತಾಡಬೇಕಾಗುವದು. ವಿಷಯವು ಯಾವುದೇ ಇರಲಿ ಬೇಂದ್ರೆಯವರು ಎದ್ದುನಿಂತಕೂಡಲೇ ಮೊದಲು ವಿಚಾರಗಳನ್ನು ಸರಿಗೂಡಿಸಲಿಕ್ಕೆ ನಾಲ್ಕೈದು ನಿಮಿಷಗಳು ಹಿಡಿಯುವವು—ವೈಣಿಕನು ತಂತಿ ಗಳನ್ನು ಸರಿಮಾಡುವಂತೆ. ಒಮ್ಮೆ ಆಮೇಲೆ ವಾಕ್ಪ್ರವಾಹವು ಪ್ರಾರಂಭ ವಾಯಿತೆಂದರೆ ಎರಡು ತಾಸು ಬೇಕಾದ ಹಾಡುಗಳನ್ನು ಅದರ ಮೇಲೆ ಅನ್ನ ಬೇಕು. ಪ್ರತಿಯೊಂದು ಶಬ್ದವನ್ನು ಕೇಳಿಕೊಳ್ಳಬೇಕು. ಪ್ರತಿಯೊಂದು ವಾಕ್ಯವೂ ಮಿದುಳಿನಿಂದ ಕೊರೆದು ಕೊರೆದು ಬೀಳುತ್ತಿದೆಯೋ ಏನೋ ಅನ್ನು ವಂತೆ ಅಚ್ಚುಕಟ್ಟಾಗಿ, ನುಣುಪಾಗಿ ಹೊರಬೀಳುತ್ತದೆ. ಮೊನ್ನೆ ಅವರು ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೆಂದು ಆರಿಸಲ್ಪಟ್ಟಾಗ ಪುಣೆಯಲ್ಲಿ ಅವರ ಮಿತ್ರಮಂಡಲಿಯವರು ಅವರಿಗೆ ಉಪಹಾರಪೂರ್ವಕವಾದ ಸನ್ಮಾನ ವನ್ನು ಮಾಡಿದರು. ಆಗ ಅವರು ಮಾಡಿದ ಉಪನ್ಯಾಸವು ಬರೆದುಕೊಂಡು ಪಾಠ ಮಾಡುವಷ್ಟು ಚೆನ್ನಾಗಿದ್ದಿತು. ಸಭೆಗೆ ಇಪ್ಪತ್ತೈದಕ್ಕಿಂತ ಹೆಚ್ಚು

ಜನರಿದ್ದಿರಲಿಲ್ಲ. ಕೆಲವರಿಗೆ (ನನಗೂ) ದೊಡ್ಡ ಸಭೆಯೆಂದರೆ ಹುರುಪು ಬರುವದು ಮಾತಾಡಲಿಕ್ಕೆ. ಬೇಂದ್ರೆಯವರಿಗೆ ಅಂಥದೇನೂ ಬೇಡ. ನಾಲ್ಕೇ ಜನರಿದ್ದರೂ, ಒನ್ನೊಬ್ಬರಿದ್ದರೂ ಸಾಕು, ಮಾತಾಡುವದು ಅದೇ ಪದ್ಧತಿ. ಮಾತಾಡುತ್ತಿರುವಾಗ ವಿಚಾರಗಳು ಗುಂಪುಗೂಡಿ ಬರುವದರಿಂದ ವಿಚಾರಗಳಿಗೆ ತಕ್ಕ ಭಾಷೆಯೂ ಸಿಗದಾಗುತ್ತದೆ. ಕನ್ನಡದಂಥ ಸುಸಂಸ್ಕೃತ ಭಾಷೆಯೂ ಅಸಮರ್ಥವಾಗುತ್ತದೆ. ಆಗ ಪ್ರತಿಯೊಂದು ವಿಚಾರಕ್ಕೊಂದು ವಾಕ್ಯವು ಟಂಕಸಾಲೆಯಿಂದ ಬೀಳುವ ಹೊಸ ಬಂಗಾರದ ನಾಣ್ಯದಷ್ಟು ಚೊಕ್ಕಾಗಿ ಬೀಳುತ್ತಿರುವದನ್ನು ಕೇಳಿದವರೇ ಧನ್ಯರು !

ಈ ಕಾವ್ಯ ಸಂದರ್ಭದಲ್ಲಿ ಅವರು ನನಗೆ ತಮ್ಮ ಕಾವ್ಯಗುಚ್ಛವೊಂದನ್ನು 'ಉಯ್ಯಾಲೆ' ಯನ್ನು ಅರ್ಪಿಸಿ ಸನ್ಮಾನ ಮಾಡಿರುವರು—ನಾನು ಅರ್ಹನೋ ಇಲ್ಲವೋ ದೇವರೇ ಬಲ್ಲ! ಅದರಂತೆಯೇ ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಸ್ಥಾನದಿಂದ 'ಶ್ರೀಧರನ ಜೀವನದ ಕಿನ್ನರಿ' ಎಂದು ಸಂಬೋಧಿಸಿ ನನ್ನ ಗೌರವ ಮಾಡಿದ್ದಾರೆ. ಮತ್ತಾರಾದರೂ ಬರೆದಿದ್ದರೆ ಉಪಚಾರವೆನ್ನುತ್ತಿದ್ದೆನು. ಬೇಂದ್ರೆಯವರು ಅಂದಿದ್ದರಿಂದ ನನ್ನದೂ ಅಲ್ಪಸ್ವಲ್ಪ ಕನ್ನಡದ ಸೇವೆಯಾಯಿತೆಂದು ಆನಂದವೂ ಸಮಾಧಾನವೂ ಉಂಟಾದವು ನನ್ನಲ್ಲಿ!!!

ಈ 'ಅಂಬಿಕಾತನಯದತ್ತ'ರ ಬಗ್ಗೆ ಎಷ್ಟು ಬರೆದರೂ ನನಗೆ ಸ್ವಲ್ಪವೇ ಆಗಿದೆ. ಎಲ್ಲವನ್ನೂ ಬರೆಯಬೇಕೆಂದರೆ ಒಂದು ದೊಡ್ಡ ಗ್ರಂಥವೇ ಆಗಬಹುದು. ಸುಮಾರು ೪೦ ವರುಷಗಳ ಅನುಭವಗಳನ್ನೂ ಜೀವನಸ್ಮೃತಿಗಳನ್ನೂ ಬರೆಯಬೇಕಾದೀತು. ಬರೇ ಬೇಂದ್ರೆಯವರ ಕಾವ್ಯವನ್ನಷ್ಟೇ ಓದಿ ಅದರ ಪರಿಚಯವನ್ನು ಕೊಟ್ಟರೂ ಒಂದು ಗ್ರಂಥ ಬೇಕು. ನನ್ನ ಜೀವನದಲ್ಲಿ ಬೇಂದ್ರೆಯವರೆಂದರೆ ನನಗೊಬ್ಬ ಗೆಳೆಯ, ನನಗೊಂದು ಸ್ಫೂರ್ತಿ, ನನಗೊಂದು ಆನಂದ!!!

———

# ನಾ ಕಂಡ 'ದತ್ತ'

ಶ್ರೀ. ಸ. ಪ. ಗಾಂವಕರ, ಅಂಕೋಲಿ

ಬೇಂದ್ರೆಯನ್ನೂ ಬಲ್ಲೆ; ಬೇಂದ್ರೆಯವರನ್ನೂ ಬಲ್ಲೆ; ಬಹುದಿನಗಳಿಂದ-೩೫–೩೬ ವರ್ಷಗಳಿಂದ—ಬಲ್ಲೆ. ಈ ಮಾತಿಗೆ—ಈ ಬೆಳೆದು ಬಂದ ಬಳಕೆಯು ಬೆಳಕಿಗೆ—ಇಷ್ಟೊಂದು ಸುದೀರ್ಘ ಕಾಲ ಸಂದಿದೆ. ಈ ಸಂದ ಸಮಯದ ಕಹಿ ಸಿಹಿ ನೆನಪು ನನಗಿರುವುದು ಸ್ವಾಭಾವಿಕ. ಆದುದರಿಂದ ಬೇಂದ್ರೆಯವರ ಭಾಗ್ಯದ ಭಾವಗೀತೆಯಲ್ಲಿ ದನಿಗೂಡುವ ಇಲ್ಲವೆ ಅವರ ಸ್ವರೂಪ ಚಿತ್ರಣದಲ್ಲಿ ಚಿತ್ರರೇಖೆಯಾಗುವ ಭಾಗ್ಯವೂ ಕೂಡ ಕೆಲಮಟ್ಟಿಗೆ ನನಗೆ ಇಲ್ಲದೆ ಇಲ್ಲ; ಆದರೆ ನನಗಾಗಿ ಸಮಯವೂ, ಶರೀರ ಸ್ವಾಸ್ಥ್ಯವೂ ಕಾದು ನಿಂತಿಲ್ಲ. ಇವೆರಡರ ಅಭಾವದಿಂದ ಎಳೆದ ಗೆರೆ ಡೊಂಕೋ ನೇರವೋ ನಾನರಿಯೆ. ಅಂತೆಯೇ ಬರೆಯುವ ಮುಂಚೆ ಕೊಂಚ ಚಿಂತೆ. ಆದರೂ ಹಿರಿಕಿರಿ ಸಾಹಿತಿಗಳ ಹಿರಿಕಿರುಗಾಣಿಕೆಗಳ ಮಳೆಮುತ್ತಿನ ಮನೋಹರ ದೃಶ್ಯದಲ್ಲಿ—ವಿಶೇಷವಾಗಿ ವಸಂತದ ಆ ಚಿತ್ರವನ ವೈಚಿತ್ರ್ಯದ ಚೈತ್ರ ಮಾಸದಲ್ಲಿ—ನನ್ನದೇ ಆದ ಮಿಂಚಿಲ್ಲದ ಮಳೆಮುತ್ತೋ, ಹೊಳಪಿಲ್ಲದ ಹೂವೋ ನಾನರಿಯೆ. ಒಟ್ಟಿಗೆ ಒಂದನ್ನು ಬೇಂದ್ರೆಯವರು ೫೦ ವರುಷ ಕಾಲಕಳೆದು ಕಳೆಗೊಂಡ ಆ ಮಂಗಲ ಸಮಯದ ಸರಕ್ಕೆ ಪ್ರಸನ್ನ ಚಿತ್ತದಿಂದ ಹಾಗೂ ಪ್ರೇಮಪೂರ್ಣ ಪರಿಚಯದ ಪ್ರಸಾದದಿಂದ ಸವಿನೆನಪಿಗಾಗಿ ಸೇರಿಸಲೆಳಸುವೆ. ಅಸ್ತು.

ಮಂದಾರ ಮಡ್ಡಿಯ ದೊಡ್ಡ ಕನ್ನಡ ಶಾಲೆ; ಹತ್ತೆಂಟು ಶಿಕ್ಷಕರು. ಸಹವ್ಯವಸಾಯಿಗಳಾಗಿ ಶಾಂತಕವಿಗಳೂ ಇತ್ತಿದ್ದಾರೆ. ಅಲ್ಲಿ ನಾನೊಬ್ಬ ಉಪಶಿಕ್ಷಕ. ಒಮ್ಮೆ ವರ್ಗದಲ್ಲಿ ತಣ್ಣಗೆ ಕುಳಿತಿರುವೆ; ಹುಡುಗರೆಲ್ಲ ಓದುತ್ತಿದ್ದಾರೆ. ಹೊರಗಿನಿಂದ ದೊಡ್ಡ ಹುಡುಗನೊಬ್ಬ—ಹೈಸ್ಕೂಲಿನ ವಿದ್ಯಾರ್ಥಿ—ಒಳಗೆ ಬಂದು ನಮಸ್ಕಾರ ಮಾಡಿ ನನ್ನೆಡೆಗೆ ಬಂದೇಬಿಟ್ಟ. ಹುಡುಗ ಒಂದಿಷ್ಟು ಎದೆಗಟ್ಟಿಗ; ತುಸು ಗಡಿಬಿಡಿಯವನಾದರೂ ಗಂಭೀರ ನಡೆನುಡಿಯವ; ಉಡಿಗೆತೊಡಿಗೆ ಅಷ್ಟು ಓರಣಿಸಿರಲಿಲ್ಲ; ಹಾಗೂ ಹೀಗೂ ಇದೆ.

'ನೀನು ಯಾರಯ್ಯಾ' ಎಂದು ಕೇಳುವ ಮೊದಲೇ ತನ್ನ ಬಿರುದು-ಬಾವಲಿಯನ್ನು ಬಿಚ್ಚಿ ತೋರಿಸಿದ. ಆಗ ತಾನೇ ತಿಳಿದೆ ಈತ ನಮ್ಮ ಬೇಂದೆ

ಕೃಷ್ಣನ ಅಣ್ಣ ಬೇಂದ್ರೆ ದತ್ತು. ಸರಿ ಸರಿ; ಪಾಠಗೀಠ ಸರಾಗವಾಗಿ ಸಾಗಿದೆ, ನೋಡಿಕೊಳ್ಳುವೆ ಎಂದೆ. ಸಂಗಡಲೇ ಶರಣೆಂದು ಆತ ಹೊರಟು ಹೋದ. ಇದೇ ನನ್ನ ಹಾಗೂ ಬೇಂದ್ರೆಯ ಮೊದಲ ಭೆಟ್ಟಿ; ಹಾಗೂ ಪರಿಚಯಕ್ಕೆ ಪ್ರಾರಂಭ.

ಈ ಭೆಟ್ಟಿ ಇಷ್ಟಕ್ಕೇ ಕಟ್ಟಾಗಲಿಲ್ಲ. ಕುಡಿಯೊಡೆದು ಕಡೆತನಕ ಕಕ್ಕ್ಲಾತಿ೯ಯಿಂದ ಕವ್ಮಗೆ ಸಾಗಿಕೊಂಡು ಹೋಗಿದೆ. ತಿಂಗಳಿಗೆ ಒಂದೆರಡು ಸಲ ಸಾಲೆಯಲ್ಲಿ ನನ್ನನ್ನು ಕಾಣುವುದು ಬೇಂದ್ರೆ ದತ್ತುವಿಗೆ ತಪ್ಪಿದ್ದಲ್ಲ. ಯಾಕಂದರೆ ಬೇಂದ್ರೆ ಕೃಷ್ಣ ಸ್ವಲ್ಪ ಹುಡುಗಾಟದ ಹೆಗ್ಗಡೆ. ಬೇಂದ್ರೆ ದತ್ತು ಸ್ವಲ್ಪ ಸಂಭಾವಿತ ಮನೆಯಲ್ಲಿ ತಾಯಮ್ಮನವರ ತಗಾದೆ ಬೇಂದ್ರೆ ದತ್ತುವಿಗ ಆಗಿರಲು ಸಾಕು. ಹುಡುಗರು ಅಭ್ಯಾಸ ಮಾಡುತ್ತಿದ್ದರೂ ಅವರಲ್ಲಿ ಆಡುವ ಚಟ ಹೆಚ್ಚಾಗಿ ಕಂಡುಬಂದಿತೆಂದರರೆ ಅವನು ಅಭ್ಯಾಸ ಮಾಡುತ್ತಾನೋ ಬಿಡುತ್ತಾನೋ ಎಂಬುದು ಎಲ್ಲ ತಾಯಂದಿರಲ್ಲಿ ನಾನು ಕಂಡ ಮಾತು. ಯಾವನೊಬ್ಬ ಹುಡುಗನು ಯಾವನೊಬ್ಬ ಶಿಕ್ಷಕನ ಕೈಯಲ್ಲಿ—ಅದರಲ್ಲಿಯೂ ಕೂಡ ಹತ್ತೆಂಟು ಶಿಕ್ಷಕರಿದ್ದ ನಾಲ್ಕನೆ ಇಯತ್ತೆ ಕಲಿಸುವ ಸಾಲೆಯಲ್ಲಿ ಒಂದು ವರ್ಷ, ಹೆಚ್ಚೆಂದರೆ ಎರಡು ವರ್ಷಕ್ಕಿಂತ ಹೆಚ್ಚಿರುವದು ಅಸಂಭವ ಆದರೂ ಬೇಂದ್ರೆ ಕಿಟ್ಟು, ಬಾಗಲವಾಡಿ ಬಾಳು, ಬಾಣಿ ಬಸ್ಯಾ, ಹರಿಬಲ ತಿಮ್ಮು, ಉಕ್ಕಡಗಾತ್ರಿ ಹುಚ್ಚು, ಹಾಗೂ ಯಾದಪ್ಪನವರ ಗುರು—ಹೀಗಿದ್ದ ಕಳ್ಳರ ಗುಂಪೊಂದು ಬಾಲಕರ ವರ್ಗ ಹಿಡಿದು ನಾಲ್ಕನೇ ಇಯತ್ತೆಯ ವರೆಗೂ ನನ್ನನ್ನು ಬಿಡಲೇ ಇಲ್ಲ. ನನಗೂ ಅವರನ್ನು ಬಿಡುವಂತೆ ಆಗಲಿಲ್ಲ. ಸಹವ್ಯವಸಾಯಿಗಳ ಉಪಟಳವೂ ಕೂಡ ನಮ್ಮ ಪ್ರಜಾಪ್ರಭುತ್ವಕ್ಕೆ ಮಣಿಯ ಬೇಕಾಯಿತು ಆದ್ದರಿಂದ ಬೇಂದ್ರೆಯವರ ಪರಿಚಯ ಪುರೋವೃದ್ಧಿಯಾಗುವದಕ್ಕೂ ಪರಿಣಾಮಕಾರಿಯಾಗುವದಕ್ಕೂ ಈ ಕಳ್ಳರ ಗುಂಪೇ ಕಾರಣವಾಯಿತೆಂದರೆ ನನಗಂತೂ ಹಿಡಿಸಲಾರದಷ್ಟು ಆನಂದವೆನಿಸುವದು. ನಡುವೊಮ್ಮೆ ಕೃಷ್ಣನಿಗೆ ಪ್ಲೇಗು ಆಗಿಬಿಟ್ಟಿತು. ಬದುಕುವ ಆಸೆ ಇರಲಿಲ್ಲ. ನಮಗೆಲ್ಲ ಸಂಕಟವೇ ಸಂಕಟ. ಎದ್ದ ಗಂಟು ಒಡೆಯಿತು. ಹುಡುಗ ಗುಣಮುಖದಲ್ಲಿದ್ದಾನೆಂದು ತಿಳಿದು ಬಂತು. ವರ್ಗವೆಲ್ಲ ಬದುಕಿದಂತಾಯಿತು. ಕೃಷ್ಣ ಶಾಲೆಗೆ ಬಂದ; ಕೊನೆಗೆ ಅಣ್ಣನೂ ಬಂದ. ಎದ್ದ ಗಂಟನ್ನು ನೋಡಿದೆ.

ಉಳಿಕೊಂಡಿಯುಪ್ಪ ' ಎಂದೆ. ಈಗಲೂ ಕಣ್ಣೀರೊಡೆಯುವದು ಆ ಮಾತಿಗೆ, ಬಂದ ಬಿರುಗಾಳಿ ಬಡತನದ ಬಾಳಿನಲ್ಲಿ ಮಿಣುಗುತ್ತಿರುವ ಸೀಸಗಳೆರಡರಲ್ಲಿ ಒಂದನ್ನು ಬಾಯೊಳಗೆ ಹಾಕಿಕೊಂಡು ಬಡವೆಯ ಭಾಗ್ಯಕ್ಕೆಲ್ಲಿ ಎರವು ಮಾಡ ವದೋ ಎಂಬ ಭಯ ನನಗಿತ್ತು. ದೇವರು ದೂರವ್ಮಾಡಿದನು. ಬೇಂದ್ರೆ ಯವರ ತಂದೆ ಚಿಕ್ಕಂದಿನಲ್ಲಿ ಮಕ್ಕಳಿಬ್ಬರನ್ನು ಬಿಟ್ಟು ಹೋಗಿದ್ದಾನೆ. ಅವರ ಪಾಲನೆ ಪೋಷಣೆಯ ಭಾರ ಸುಶೀಲೆಯೂ, ವ್ರತಸ್ಥಳೂ ಮಿತಭಾಷಿಣಿಯೂ ಆದ ಅವರ ತಾಯಿಯ ತೂಗುವ ತೊಟ್ಟಿಲದ ಪಾಲಿಗೆ ಬಂದು ಬಿದ್ದಿದೆ. ಒಂದಿಷ್ಟು ಗಟ್ಟಿ ಹೆಣ್ಣುಮಗಳಲ್ಲದಿದ್ದರೆ ಮಕ್ಕಳನ್ನು ಮಾಣಿಕವಾಗಿ ಮಾಡಲು ಸುತರಾಂ ಸಾಧ್ಯವಿರಲಿಲ್ಲ. ಅಂತೆಯೇ ಶಾಲೆಯಲ್ಲಿ ಕಲಿಯುವ ನಾಲ್ಕಾರು ಹುಡುಗರಿಗೆ ಊಟಕ್ಕೆ ನೀಡಿ ಮಕ್ಕಳಿಬ್ಬರನ್ನು ಜತನದಿಂದಲೂ ಜಾಗ್ರತೆ ಯಿಂದಲೂ ಬೆಳಿಸಿಕೊಂಡು ಬರುತ್ತಿದ್ದಾಳೆ. ಬೇಂದ್ರೆ ದತ್ತು ಚಿಕ್ಕಂದಿನಿಂದಲೇ ಸಂತೆಗಿಂತೆ ಚನ್ನಾಗಿ ಮಾಡಿ ತಾಯಿಗೆ ತುಂಬಾ ನೆರವಾಗುತ್ತಿದ್ದಾನೆ. ಮಮತಾಪೂರ್ಣ ಮಾತೃಮಂದಿರದಲ್ಲಿ ಆಗಾಗ್ಗೆ ಅವರ ದರ್ಶನವಾಗುತ್ತಿದೆ. ' ಇದೋ, ಕೃಷ್ಣನ ಮಾಸ್ತರರು ಹೋಗುತ್ತಿದ್ದಾರೆಂಬ' ತಾಯ್ತನದ ಒಳ ದನಿಯು ಕೇಳಿಬರುತ್ತಿದೆ ನಾನು ಆಗಾಗ್ಗೆ ಹೋಗಿ ಬರುತ್ತಿದ್ದುದು ಅವರ ಮನೆಯಹತ್ತಿರದ ವಾಚನಾಲಯಕ್ಕೆ. ಒಟ್ಟಿಗೆ ಇಂದು ಅಂದಿನ ಅವರ ಬಡ ತನದ ಚಿತ್ರವು ನನ್ನ ಕಣ್ಣ ಮುಂದೆ ಕಟ್ಟಿದೆ ಆ ಚಿತ್ರದಲ್ಲಿ ' Work is love made visible ' ಪ್ರೇಮದ ಸಾಕಾರ ಸ್ವರೂಪವೇ ಕಾರ್ಯವೆಂಬ ಖಲೀಲ ಗಿಬ್ರಾನರ ನುಡಿಯು ಚಿತ್ರಿತವಾಗಿದೆ.

ಬೇಂದ್ರೆ ಬಿ. ಎ. ಆದ ಸುದ್ದಿ, ನಮ್ಮೋರ್ವ ವ್ಯವಸಾಯ ಬಂಧು ರಾಮಾಚಾರ್ಯರ ಬಾಯಿಂದ ಶಾಲೆಯಲ್ಲಿ ಕೇಳಿದೆ. ಆ ನೆನಪು ಇಂದಿಗೂ ಇದೆ ಆಗ ಸರಕಾರೀ ನೌಕರಿ ನಾನು ತಾನೆನ್ನುತ್ತ ಮುಂದಿದೆ. ಎಂದಿಗೂ ಅದೊಂದು ಮೋಹಿನಿ. ಆ ಮೋಹಿನಿಗೆ ಸಿಗಬೀಳದವರು ಬಲು ಕಡಿಮೆ. ಬಡತನದ ಜಳ ತಾಕಿದ ಬೇಂದ್ರೆಯಂತಹರ ಬಾಳಿಗಂತೂ ಅದು ಬೇಕೇ ಬೇಕು; ಬಿಟ್ಟದ್ದಲ್ಲ. ಯಾಕಂದರೆ ಅದರಲ್ಲಿ ಬಾಳನ್ನು ಬಲಗೊಳ್ಳಲು—ಹಗು ರಾಗಿ ನೂಕಿಕೊಂಡು ಹೋಗಲು—ತುಂಬಾ ಭರವಸೆಯಿದೆ. ಮೇಲಾಗಿ ಜನತೆ ಯಲ್ಲಿ ಬೆಲೆಯೂ ಇದೆ ಇದನ್ನೆಲ್ಲ ಬಿಟ್ಟುಗೊಟ್ಟು ಅಂದು ರಾಷ್ಟ್ರೀಯ

ಮನೋವೃತ್ತಿಗೆ ಪೋಷಕವಾದ ಹಾಗೂ ತಾನು ಕಲಿತ ವ್ಹಿಕ್ಟೋರಿಯಾ ಹ್ಯಾಸ್ಕೂಲಿಗೆ ಉಧೋ, ಉಧೋ ಎಂದು ಬೇಂದ್ರೆಯವರು ಸೇರಿಬಿಟ್ಟರು. ಇದೇನು ಸಣ್ಣದಲ್ಲ. ಈ ಹಿರಿದಾದ ತ್ಯಾಗಬುದ್ಧಿಗೆ ಹಿನ್ನೆಲೆಯಿಲ್ಲದೆ ಇಲ್ಲ. ಇಲ್ಲಿ ನನಗೆ ನಾಲ್ವತ್ತು ವರ್ಷ ಸಂಪರ್ಕದ ಧಾರವಾಡದ ಛಾಯಾಚಿತ್ರವು ಸಿನೇಮಾದ ಸನ್ನಿವೇಶಗಳಂತೆ ಒಂದೊಂದಾಗಿ ಕಣ್ಣಮುಂದೆ ಬಂದು ಹಾದು ಹೋಗುತ್ತಿವೆ.

ವಂಗಭಂಗ ಸಂಘರ್ಷದಿಂದ ಎದ್ದ ಕಿಡಿ ಕನ್ನಡ ನಾಡಿನ ನಾಲ್ಕೂ ಕಡೆಗೂ ಹರಡಿ ಆಳರಸರ ಬಗ್ಗೆ ಹಾವಳಿಗೈದು ಸ್ವದೇಶೀವ್ರತದ ಆದೇಶವನ್ನು ವಿಧವಿಧವಾಗಿ ವಿವರಿಸಿದರೂ ಧಾರವಾಡದ ಧಾರಾತೀರ್ಥದ ದೃಶ್ಯವು ಮಾತ್ರ ಕನ್ನಡನಾಡ ಇತರ ನಗರಗಳ ದೃಶ್ಯಕ್ಕಿಂತ ಭಿನ್ನವಾಗಿತ್ತಲ್ಲದೆ ಭಾವೀ ಕನ್ನಡ ನಾಡ ರಚನಾತ್ಮಕ ಕಾರ್ಯಗಳ ದೃಷ್ಟಿಯಿಂದ ಸಂಪನ್ನವಾಗಿ ದರ್ಶನೀಯ ವಾಗಿತ್ತೆಂದರೆ ಅತ್ಯುಕ್ತಿಯೆನಿಸದು. ಭಾವ ಜೀವಿಗೆ ಭಾಗ್ಯಸಂಪನ್ನವಿತ್ತು. ನಾನೂ ಭಾವಜೀವಿ; ಬೇಂದ್ರೆಯವರೂ ಭಾವಜೀವಿ. ಆಲೂರ ವೆಂಕಟ ರಾಯರು ಅಧಿದೇವತೆಯಾಗಿದ್ದಾರೆ. ವಿವಿಧ ಚಟುವಟಿಕೆಗಳು ಅವರನ್ನು ವೇಷ್ಟೈಸಿವೆ. ಅವರು ತೆರೆದ ವಾಚನಾಲಯದಲ್ಲಿ ಬೇಂದ್ರೆಯವರು ನಾನು ಎಷ್ಟೋ ಸಲ ಕೂಡಿದ್ದೇವೆ. ಕನ್ನಡ ಟ್ರೇನಿಂಗ ಕಾಲೇಜದಲ್ಲಿ ನನ್ನೊಡನೆ ಕಲಿತು ಬಳಿಕ ಶಿಕ್ಷಕವೃತ್ತಿಗೆ ಶರಣು ಹೊಡೆದು ಬಂದು ಆಲೂರರ ಆಶ್ರಯ ದಲ್ಲಿ ಅರಿವನ್ನು ಅರಳಿಸಿಕೊಳ್ಳುತ್ತ ಇತಿಹಾಸ ಸಂಶೋಧನೆಯಲ್ಲಿದ್ದ ರಾಜಪುರೋಹಿತರು ನಮ್ಮೊಟ್ಟಿಗೆ ಸೇರುತ್ತಿದ್ದಾರೆ. ಸರಕಾರದಿಂದ ಜಪ್ತಾದ ಹಾಗೂ ಎಲ್ಲೆಲ್ಲೋ ಅಡಗಿಸಿಟ್ಟ ಕರ್ಮಯೋಗಿನ್ ಪತ್ರಿಕೆಯ ಫೈಲು ನಮ್ಮ ಕೈಗೆ ಸಿಕ್ಕಾಗ ಆದ ಆನಂದ; ಆಮೇಲೆ ಅರವಿಂದರು 'ಆರ್ಯಾ' ರೂಪದಿಂದ ಪ್ರಕಟವಾಗುತ್ತಿರಲು ಅದನ್ನು ಕಾಣುವ ನಮ್ಮ ಕಣ್ಣು ಸೂರ್ಯೋದಯದ ಪೂರ್ವದಲ್ಲಿ ಪ್ರಕಟವಾಗುವ ಗುಡುಗು ಮಿಂಚು ಸಿಡಿಲುಗಳಂತೆ ಆರ್ಭಟಿ ಯಿಂದ ಆರವಗೈವ ಪೂರ್ವ ವಯಸ್ಸಿನ ಮುದುವೀಡು ಕೃಷ್ಣರಾಯರ ಕಹಳೆಯ ಕೂಗು–ಇದನ್ನೆಲ್ಲ ನಾನೇನು ಹೇಳಲಿ? 'ತೇ ಹಿ ನೋ ದಿವಸಾಃ ಗತಾಃ' ಎಂದು ಶ್ರೀ ರಾಮನು ದಂಡಕಾರಣ್ಯವನ್ನು ಮಗುಳೊಮ್ಮೆ ನೋಡಿ ಮರುಗಿ ನುಡಿದಂತೆ ಧಾರವಾಡವನ್ನು ನೋಡಿ ನಾನು ಮರುಗಿ ನುಡಿಯ ಬೇಕಾಗಿದೆ.

ಬಾಂದಳದಿಂದ ಬಂದ ಭಾಗೀರಥಿಯು ಬಂಗಾಳವನ್ನು ಭಾರತದ ಭಾಗ್ಯ ಹಾಗೂ ಭಾವನಾದೇವತೆಯನ್ನಾಗಿ ಮಾಡಿದೆ. ರವೀಂದ್ರರಂಥ ಕವಿ ಪ್ರವಾದಿಗಳೂ, ರಾಮಕೃಷ್ಣ ಪರಮಹಂಸರಂಥ ಸರ್ವಧರ್ಮ ಸಮನ್ವಯಾಚಾರ್ಯರೂ, ಅರವಿಂದರಂಥ ಕ್ರಾಂತಿಕಾರಕ ಕ್ರಾಂತದರ್ಶಿಗಳೂ ಬೆಳಗಿದ ಬೆಳಕಿಗೆ ಶತಶಃ ಸಹಸ್ರಶಃ ಕೋಟಿಶಃ ನಮಸ್ಕಾರಗೈದು ನನ್ನಂತೆ ಬೇಂದ್ರೆಯವರು ತೇಲಿ ಹೋದುದನ್ನು ನಾನು ಬಲ್ಲೆ. ಅಂದು ನಾನು ಅರವಿಂದರ ಅಖಂಡ ಅನುಯಾಯಿ; ಬೇಂದ್ರೆಯವರ ಬೆಸುಗೆ ಮಾತ್ರ ಎಂದಿನಂತೆ ಇಂದಿಗೂ ಇದೆಯಲ್ಲದೆ ದೃಢವಾಗಿ ಬೇರೂರುತ್ತಿದೆ. ಆದರೂ ನನ್ನ ಹಾಗೂ ಅವರ ರಾಷ್ಟ್ರೀಯ ಮನೋವೃತ್ತಿಯು ಪೂರ್ವಪರಂಪರೆಯನ್ನು ವಿಚ್ಛೇದಿಸಲಿಲ್ಲ. ಋಷಿ ಮುನಿಗಳ ಆದರ್ಶ ಜೀವನದ ಸಾಮ್ಯವಾದದಲ್ಲಿ ಸಮಾಧಿಗೊಂಡಿದೆ. ಇದನ್ನು ನೆನೆದಾಗಲೆಲ್ಲ 'ಶ್ರುತೇರಿವಾರ್ಥಂ ಸ್ಮೃತಿರನ್ವಗಚ್ಛತ್' ಎಂಬ ಕಾಲಿದಾಸೋಕ್ತಿಯೂ 'There were the virtuous, the wise, the courageous; There were the statesmen, Kings and Emperors of India; but whom amongst all these classes did she look up to and choose to be the representative of men! They were the Rishies' ಎಂಬ ಕವೀಂದ್ರ ರವೀಂದ್ರರುಕ್ತಿಯೂ ನೆನಪಿಗೆ ಬಾರದಿರದು.

ಬೇಂದ್ರೆಯವರು ಹೈಸ್ಕೂಲಿಗೆ ಸೇರಿದರೆಂದು ಹಿಂದೆ ಹೇಳಿದೆ. 'ಕನ್ನಡವ ಬಿಟ್ಟಿನಗೆ ಅನ್ಯ ಜೀವನವಿಲ್ಲ' ಎಂಬ ಅವರ ಬಾಳು ಅಂದಿನಿಂದಲೇ ಆರಂಭವಾಯಿತು. ಸಾಹಿತಿಗಳನ್ನು ಕಂಡುಹಿಡಿಯುವ ಅವರ ಕಣ್ಣು; ಅದರ ಜೊತೆಗೆ ಅವರು ಸಾಹಿತ್ಯಕ್ಕೆ ಹಾಕಿಕೊಟ್ಟ ಹೊಸದೊಂದು ಹಾದಿ; ಒಂದಲ್ಲ, ಎರಡಲ್ಲ ಹಲವಾರು ಎದ್ದೇಳುವ ಸಾಹಿತಿಗಳನ್ನು ಸಾಹಿತ್ಯಮಣಿಮಾಲೆಯಲ್ಲಿ ಗುಂಪುಗೈದಿತು ಪ್ರೊ. ಮುಗಳಿ ಮುಂತಾದ ಇಂದಿನ ಸಾಹಿತಿಗಳು ಅವರ ಮನೆಗೆ ಬಂದು ಹೋಗುವದನ್ನು ಕಂಡಿದ್ದೇನೆ. ಹೀಗಾಗಿ ಗೆಳೆಯರ ಗುಂಪೊಂದು ಅವರ ಸುತ್ತಲೂ ರೂಪುಗೊಂಡಿತು; ಎಲ್ಲೆಲ್ಲೂ ತಲೆಯೆತ್ತಿತು; ಇಂದಿನ ಕನ್ನಡಕ್ಕೊಂದು ಕಾಣಿಕೆಯಿತ್ತಿತು. ಮುಂದಿನ ಕನ್ನಡಕ್ಕೆ ಕೈದೀವಿಗೆಯಾಯಿತು. ಇದೊಂದು ಕನ್ನಡಕ್ಕಾಗಿ ಬೇಂದ್ರೆಯವರು ಗೆಳೆಯರ ಗುಂಪಿನ

ಗುರುದೇವತ್ವದಲ್ಲಿ ಕೊಟ್ಟ ದೊಡ್ಡ ಕೊಡುಗೆಯೆಂದರೆ ಬೆಳಿಸಿದ ಬೆಳೆ ಮಾತಾಗದು. ಬೇಂದ್ರೆಯವರು ತಮ್ಮ ಹೊಸ ಹೊಸ ಕವನಗಳನ್ನು ಎಷ್ಟೋ ಸಲ ತನ್ಮಯವಾಗಿ ನನ್ನ ಮುಂದೆ ಹಾಡಿ ತೋರಿಸಿ,

" ಸಲುಗೆಯಲಿ ರೌದ್ರ ರಮಣೀಯ ವ್ಯತ್ಯತೆಯು
ಕಲೆಯಾಗಿ ಕಲೆತಿಹುದು ಕವಿ ಕಲ್ಪಲತೆಯು "

ಎಂಬ ನನ್ನೊಡಲಿನ ನುಡಿಯೊಂದನ್ನು ನಿದರ್ಶನಕ್ಕೆ ತಂದುಕೊಟ್ಟಿರುವರು.

ಮೊದಮೊದಲು ಸಂಪ್ರದಾಯಗಳು—ಮೇಲಾಗಿ ಪಂಡಿತರು ಬೇಂದ್ರೆಯವರ ಕವನಗಳೆಂದರೆ ಕುಲಗೆಟ್ಟ ಕವನಗಳೆಂದೂ ಯಾರು ಬೇಕಾದರೂ ಕಟ್ಟಿ ಹಾಡಬಲ್ಲ ಕಾಡು ಹಾಡುಗಳೆಂದೂ ಹಗಲು ಹಾಡೇ ಹೇಳುತ್ತಿದ್ದುದನ್ನು ಧಾರವಾಡದ ಒಳಗೂ ಹೊರಗೂ ನಾನು ಎಷ್ಟೋ ಸಲ ಕೇಳಿದ್ದೇನೆ. ಒಮ್ಮೊಮ್ಮೆ ನಾನೂ ಕೂಡ ಇದೇನು ರವೀಂದ್ರರ ಕನ್ನಡವೋ ಎಂದದ್ದೂ ಉಂಟು. ಆದರೆ ಬೇಂದ್ರೆಯವರ ನಾನಾ ಮುಖ ಸಾಹಿತ್ಯವು ಕರ್ನಾಟಕ ಸಾಹಿತ್ಯ ಮಂದಿರದ ಮನೆಮಾತಾಗಿ ಹಳ್ಳಿಹಳ್ಳಿಯಲ್ಲಿಯೂ ಹಳ್ಳವಾಗಿ ಹರಿದು ಹೋಗಿ ಹೊಲವನ್ನು ಹುಲುಸಾಗಿ ಮಾಡುವದೆಂದೂ—ಸಾಹಿತ್ಯದೇವಿಯ ಮಂದಿರದ ಮುಕುಟಕ್ಕೆ ಕಳೆಗಟ್ಟುವದೆಂದೂ ಅಂದು ನನಗೆ ಅನಿಸಿರಲಿಲ್ಲ.

ಸಾಹಿತ್ಯದ ಬಗ್ಗೆ ಹೆಚ್ಚಿಗೆ ಹೇಳಲಾರೆ. ನಾನೊಬ್ಬ ಸಾಹಿತಿಯಲ್ಲ. ಹುಟ್ಟಾ ಕನ್ನಡದ ಕಿಡಿ ನನ್ನಲ್ಲಿ ಗೆಡೆಗೊಂಡಿದ್ದರೂ ಅದಕ್ಕೊಂದು ಗತಿ ಕಾಣಿಸದೆ ಹೋದೆ. ಇಷ್ಟೇ ಅಲ್ಲ; ನಾನೊಬ್ಬ ದೊಡ್ಡ ದುರ್ದೈವಿ, ಒಂದು ವಿಷಯದ ಬಗ್ಗೆ. ಏನೆಂದರೆ ಬಿ. ವೆಂಕಟಾಚಾರ್ಯರ ಎರಡು ಮೂರು ಕಾದಂಬರಿಗಳನ್ನೂ ಲಕ್ಷ್ಮೀಶನ ಜೈಮಿನಿ ಭಾರತವನ್ನೂ ತಪ್ಪಿದರೆ ಕಬ್ಬಿಗರಕಾವವೊಂದನ್ನು ಬಿಟ್ಟು ಇದುವರೆಗಿನ ಕನ್ನಡ ಗ್ರಂಥಕಾರರ ಯಾವದೊಂದೂ ಗದ್ಯಪದ್ಯ ಗ್ರಂಥವನ್ನೂ ಆಮೂಲಾಗ್ರವಾಗಿ ಓದಿನೋಡುವ ಪುಣ್ಯ ನನ್ನ ಪಾಲಿಗೆ ಲಭಿಸಲಿಲ್ಲ. ಇದೊಂದು ನಾನು ಗೈದ ಪಾಪ. ಅಂತೆಯೇ ಬೇಂದ್ರೆಯವರ ಸಾಹಿತ್ಯದ ಗೊಡವೆಯನ್ನು ಬಿಟ್ಟು ಮಾತಾಡುವದೇ ಒಳಿತು.

ತಿಲಕಯುಗ ಹೋಯಿತು; ಗಾಂಧೀಯುಗ ಬಂತು; ಶಾಲೆ ಕಾಲೇಜುಗಳಲ್ಲಿ ಗಲಾಟೆಯೆದ್ದಿತು. ಎಲ್ಲೆಲ್ಲಿಯೂ ಸರಕಾರಕ್ಕೆ ಆಗ ಸಂಶಯನೇ

ಸಂಶಯ. ಆ ಸಂಶಯಪಿಶಾಚಿಗೆ ಬೇಂದ್ರೆಯವರು ಬಲಿಯಾದರು. ಆಗ ಧಾರವಾಡವನ್ನು ಬಿಟ್ಟು ಮುಗುದದಲ್ಲಿ ಸರಕಾರದ ಮೇಲುಗಾವಲದಲ್ಲಿ ಕಾಲ ಕಳೆಯುವ ಹೊತ್ತು ಅವರಿಗೆ ಬಂದಿತು. ಮನೆತನದ ತಾಪತ್ರಯಕ್ಕೂ ಆರಂಭ ವಾಯಿತು. ಅಲ್ಲಿಯ ಸೆರೆ ಹರಿದ ಮೇಲೆ ಧಾರವಾಡದಲ್ಲಿ ನೆಲಸಿ ಸಾಹಿತ್ಯ ಸೇವೆ ಮಾಡುತ್ತಿದ್ದುದನ್ನು ಕಂಡಿದ್ದೇನೆ; ಕೇಳಿದ್ದೇನೆ. ಆಗ ಅವರ ಆರ್ಥಿಕ ಸ್ಥಿತಿಯು ಅಷ್ಟೊಂದು ಸಂತೋಷಜನಕವಾಗಿರಲಿಲ್ಲ. ಅವರ ಬಗ್ಗೆ ಕೆಲವರು ಅವರ ಪರೋಕ್ಷದಲ್ಲಿ ಪ್ರಯತ್ನಗೈದುದನ್ನು ಕೇಳಿಯೂ ಇದ್ದೇನೆ. ಆದರೆ ಜಾತಿ, ಮತ, ಪಂಥ, ಪಕ್ಷಪಂಗಡಗಳೆಂಬ ಪರಚಕ್ರಗಳ ದಾಳಿಯಿಂದ ಪ್ರಯತ್ನ ಗಳೆಲ್ಲ ಫಲಸ್ವರೂಪಕ್ಕಿಳಿಯುವಾಗ ಹಾಳಾದುದನ್ನೂ ನಾನು ಬಲ್ಲೆ.

ಬೇಂದ್ರೆಯವರು ಲಹರಿಯ ಮನುಷ್ಯರು; ಲಹರಿಯಲ್ಲಿ ತೇಲಿ ಹೋಗು ವವರು; ಜಗವೆತ್ತ ತಾವೆತ್ತ ಎಂಬದನ್ನು ಕಾಣದವರು; ಅರ್ಥಾತ್ ಅಷ್ಟೊಂದು ವ್ಯವಹಾರಜ್ಞರಾಗಿಲ್ಲ. ಆದಪರಿಂದ ಕೆಲವೊಂದು ಸಂಗತಿ ಮಿಂಚಿಹೋದ ಮೇಲೆ ಚಿಂತಿಸುವ ಪ್ರಸಂಗವು ಅವರ ಪಾಲಿಗೆ ಬಾರದೇ ಇರಲಿಲ್ಲ. ಆದರೂ ಅದನ್ನು ಕಡೆತನಕ ಹಚ್ಚಿಕೊಳ್ಳುವ ಕಿಚ್ಚು ಮಾತ್ರ ಅವರಲ್ಲಿ ಅಂಟಿಕೊಂಡಂತೆ ಕಂಡುಬರಲಿಲ್ಲ. 'ನಡೆದಿದೆ ಜಗ, ಜಂಗಮವಿದೆ'ಂದು ಸುಮ್ಮನಾಗಿ ಬಿಡುವದು ಅವರ ಸ್ವಭಾವಗುಣ! ತನ್ನ ಕಷ್ಟದಲ್ಲಿ ಹೆರರ ಕಷ್ಟವನ್ನು ಕಂಡುಕೊಳ್ಳು ವವರು ವಿರಳ. ಬೇಂದ್ರೆಯವರು ಹಾಗಿರಲಿಲ್ಲ. ತಮ್ಮ ಕಷ್ಟದಲ್ಲಿಯೂ ಇಬ್ಬರು ಅನಾಥ ಹೆಂಗಸರಿಗೆ ಸಹಾಯನೀಡುತ್ತ, ನನಗೆ ಒಪ್ಪಿಸಿದುವನ್ನು ನಾನು ಮರೆತಿಲ್ಲ; ಇಂದು ಅವರಿಬ್ಬರೂ ಹುಬ್ಬಳ್ಳಿಯಲ್ಲಿ ಶಿಕ್ಷಕಿಯರಾಗಿದ್ದಾರೆ. ಅವರು ಬೇಂದ್ರೆಯವರ ಹಂಗಿನ ಹೊರೆಯನ್ನು ಆತ್ಮೀಯವಾಗಿ ಆಗಿಂದಾಗ್ಗೆ ಅಂದು- ಕೊಳ್ಳುತ್ತಿದ್ದಾರೆ. ಮಾತೊಂದು ಮಾತ್ರ ನನಗೆ ಮರೆಯದ ಹಾಗಿದೆ. ಬೇಂದ್ರೆ ಯವರು ಧಾರವಾಡದ ಧನ್ಯ ವಾತಾವರಣದಲ್ಲಿ ಧ್ಯಾನಗೊಂಡು ಬೆಳೆದು ಬೆಳಗಿ ಸಾಹಿತ್ಯಸೃಷ್ಟಿಯಲ್ಲಿ ಧಾರವಾಡಕ್ಕೊಂದು ಸ್ಥಾನಮಾನವನ್ನು ತಂದುಕೊಟ್ಟು ಅಲ್ಲಿ ಎದ್ದು ಕಾಣುವ ನಾಲ್ಕಾರು ವ್ಯಕ್ತಿಗಳಲ್ಲಿ ಒಬ್ಬರಾಗಿರುವಾಗ,— ಧ್ಯೇಯ ಕ್ಕಾಗಿ ದೇಹವನ್ನು ಮುಡುಪಿಟ್ಟಾಗ ಕರ್ನಾಟಕದಲ್ಲಿಯ ಅದರಲ್ಲಿಯೂ ಧಾರವಾಡದಲ್ಲಿಯ ಯಾವುದೊಂದು ಶಿಕ್ಷಣ ಸಂಸ್ಥೆಯಾಗಲೀ, ಮತ್ತಾವು ದಾಗಲೀ ಅವರಿಗೆ ಅವಕಾಶ ಕಲ್ಪಿಸಿಕೊಡದಿದ್ದುದು ಅತ್ಯಂತ ದುರ್ದೈವದ

ಸಂಗತಿಯೆಂಬುದು ಇಲ್ಲಿ ಸಾರಿ ಸುಡಿಯದೆ ಇರಲಾರೆ. ಈ ಮಾತು ಎಷ್ಟೋ ಸಣ್ಣದೊಡ್ಡವರ ಮುಂದೆ ಎತ್ತಿ ಆಡಿದ್ದೇನೆ. ಅಷ್ಟೇ ಅಲ್ಲ; ಕರ್ನಾಟಕವು ಬೇಂದ್ರೆಯವರಿಗೆ ಕೃತಜ್ಞವಿಲ್ಲ; ಕೃತಘ್ನವಿದೆ ಎಂಬ ಶಬ್ದಗಳೂ ಸಹ ನನ್ನ ಬಾಯಿಂದ ಹೊರಡದೇ ಇರಲಿಲ್ಲ. ಆದರೂ ಧಾರವಾಡವು ಅವರ ೫೦ನೆಯ ಹುಟ್ಟುಹಬ್ಬದ ಸತ್ಕಾರ ಸಮಿತಿಯೊಂದನ್ನು ಸ್ಥಾಪಿಸಿ ಅವರನ್ನು ಗೌರವಿಸುವುದಕ್ಕಾಗಿ ಶ್ರಮಿಸುತ್ತಿದ್ದುದನ್ನು ಕಂಡು ಸಮಾಧಾನವಾಗಿದೆ.

ಕೊನೆಗೊಮ್ಮೆ ಅವರಿಗೆ ಸಿಗಬಹುದಾದ ಸ್ಥಾನ ಮಾನ ಸಿಕ್ಕಿದೆ. ಆದರೆ ಸಂಸಾರದಲ್ಲಿ ಅವರಿಗೆ ಸುಖವಾಗಲಿಲ್ಲ. ಸೊಲ್ಲಾಪುರದಲ್ಲಿ ಪ್ರಾಧ್ಯಾಪಕರಾದ ಕೆಲವು ತಿಂಗಳುಗಳಲ್ಲಿಯೇ ಅವರ ಚಿಕ್ಕದೊಡ್ಡ ಎರಡು ಮಕ್ಕಳು ವಿಷಮ ಜ್ವರಕ್ಕೆ ಆಹುತಿಯಾದರು. ಹಾಗೂ ಒಡಲುರಿಯ ಹಣತೆಯೊಂದನ್ನು ಬಿಟ್ಟು ಹೋದರು. ಅವರ ಕೈಗೆ ಬಂದು ಕಾರ್ಯದರ್ಶಿಯಂತೆ ಇದ್ದ ಅವರ ಮನೆ ಕೆಲಸವನ್ನೆಲ್ಲ ನಿರ್ವಹಿಸುತ್ತಿದ್ದ–ಇಂಟರ ಸಾಯಿನ್ಸದಲ್ಲಿ ಓದುತ್ತಿದ್ದ ಅದೇ ನನಗೆ ಮೇಘದೂತವನ್ನು ಕಾಣಿಕೆಯಾಗಿ ಕೊಟ್ಟ ಅವರ ಮುದ್ದಾದ ಮಗು ರಾಮಚಂದ್ರನ ನೆನಪಾದಾಗಲೆಲ್ಲ ಇಂಟರ ಸಾಯಿನ್ಸಿನಲ್ಲಿ ಓದುತ್ತಿದ್ದ ವಿಷಮ ಜ್ವರಕ್ಕೆ ಆಹುತಿಯಾದ ನನ್ನದೊಂದು ಮುದ್ದು ಮಗು ಅರವಿಂದನ ನೆನಪಾಗುತ್ತಿದೆ. ಅಸ್ತು.

ಕೊನೆಯದಾಗಿ ಹೇಳಬಯಸುವೆ. ಪರಮಾತ್ಮನು ಕವಿ, ಯೋಗಿ, ಹಾಗೂ ದೀನರಲ್ಲಿ ಪ್ರತ್ಯಕ್ಷನಾಗುವನೆಂದು ಪ್ರತೀತಿ. ಬೇಂದ್ರೆಯವರು ಕವಿ ಶ್ರೇಷ್ಠರಾಗಿಯೇ ಇದ್ದಾರೆ. ಅಲ್ಲದೆ ಯೋಗಿರಾಜ ಅರವಿಂದರ ಯೌಗಿಕ ದೃಷ್ಟಿಯಲ್ಲಿ ತನ್ಮಯರಾಗಿದ್ದಾರೆ. ಅದೂ ಅಲ್ಲದೆ ದೀನ ಹೃದಯದ ದೈವತವೂ ಆಗಿದ್ದಾರೆ. ಈ ಮುಬ್ಬಗೆಯ ದೃಷ್ಟಿಕೋಣಗಳಿಂದ ಮುಕ್ಕಣ್ಣನಾಗಿ 'ಕುಣಿಯೋಣ ಬಾರ, ಕುಣಿಯೋಣ ಬಾ' ಎಂಬ ಪದ್ಯಪರಂಪರೆಯನ್ನು ಪದುಳದಿಂದ ರಚಿಸಿ ಕುಣಿಕುಣಿದು ಕನ್ನಡ ನಾಡಿನಲ್ಲಿ ಕವಿ ನಟರಾಜನಾಗಿ ನಾಟ್ಯಗೈಯಲೆಂದು ಹೃತ್ಪೂರ್ವಕವಾಗಿ ಹಾರೈಸಿ ನನ್ನದೊಂದು ಮಿಂಚಿನ ಮಳೆ ಮುತ್ತನ್ನೋ, ಹೊಳಪಿನ ಹೂವನ್ನೋ ಅವರ ೫೦ನೆಯ ಹುಟ್ಟುಹಬ್ಬದ ಮಾಲೆಗೆ ಸೇರಿಸಿ ಬಿಡುವೆ.

ಓಂ ಶಾಂತಿಃ ಶಾಂತಿಃ ಶಾಂತಿಃ

# ‘ ಗೆಳೆಯರ ಗುಂಪಿ ’ನ ಕನಸು

ಶ್ರೀ. ವಿ. ಕೃ. ಗೋಕಾಕ, ವೀಸನಗರ

೧

‘ ತ್ರಿವೇಣಿ ’ಯ ಮಾನ್ಯ ಸಂಪಾದಕರು ‘ ಗೆಳೆಯರ ಗುಂಪಿ ’ನ ಬಗ್ಗೆ ಒಂದು ಲೇಖನವನ್ನು ಬರೆದು ಕಳಿಸಬೇಕೆಂದು ನನ್ನನ್ನು ಕೇಳಿದಾಗ ನಾನು (ಅದರ ಒಬ್ಬ ಸದಸ್ಯ) ಆ ವಿಷಯವಾಗಿ ಸಾಕಷ್ಟು ವಿಚಾರ ಮಾಡಿದೆ. ನಮ್ಮ ಸೂಜ್ಞ ಸಂಪಾದಕರ ಲಕ್ಷ್ಯವನ್ನು ತನ್ನ ಕಡೆಗೆ ಸೆಳೆದುಕೊಳ್ಳಬೇಕಾದರೆ ‘ ಗುಂಪು ’ ಯಾವ ಅಂಥ ಮಹತ್ಕಾರ್ಯವನ್ನು ಮಾಡಿರಬಹುದು ? ಈಗ ನನ್ನ ಹಿಂದಿನ ನೆನಹುಗಳು ಒಂದೊಂದಾಗಿ ಬೆಳಕಿಗೆ ಬರಹತ್ತಿದವು. ಕರ್ನಾಟಕದ ಪುನರುಜ್ಜೀವನದ ಒಂದು ಒಳ್ಳೇ ನಿರ್ಣಾಯಕ ಕಾಲದಲ್ಲಿ ‘ ಗುಂಪು ’ ತನ್ನ ಕಾರ್ಯವನ್ನಾರಂಭಿಸಿತು. ೧೯೨೨ರಿಂದಲೇ ಅದು ಬೇರೆ ಬೇರೆ ರೀತಿಯಲ್ಲಿ ತನ್ನ ಚಟುವಟಿಕೆಯನ್ನು ಸುಪ್ರಮಾಣದಲ್ಲಿ ಸಾಗಿಸುತ್ತ ಬಂದಿತ್ತು. ಉತ್ತರ ಕರ್ನಾಟಕದ ತರುಣರಲ್ಲಿ ಕನ್ನಡ ಸಂಸ್ಕೃತಿ ಮತ್ತು ಸಾಹಿತ್ಯದ ಬಗ್ಗೆ ಅಚಲವಾದ ಪ್ರೀತಿಯು ಹುಟ್ಟಿದ್ದಕ್ಕೆ ಹೆಚ್ಚಾಗಿ ‘ ಗುಂಪಿ ’ನ ಪ್ರಯತ್ನವೇ ಕಾರಣವೆಂದು ಹೇಳಬಹುದು. ೧೯೨೮ರಲ್ಲಿ ವಿಜಾಪುರದಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಕಾಲಕ್ಕೆ ಮೊದಲನೆಯ ಸಾರೆ ಸಾಹಿತ್ಯ ದೃಷ್ಟಿಯಿಂದ ಅದಕ್ಕೆ ಪ್ರಾಶಸ್ತ್ಯ ದೊರೆಯಿತು. ‘ ಗುಂಪಿ ’ನ ಕಡೆಯಿಂದ ಎರಡು ವರುಷಗಳ ವರೆಗೆ ಹೊರಡುತ್ತಿದ್ದ ‘ ಸ್ವಧರ್ಮ ’ ಪತ್ರಿಕೆಯು ಜನರಿಗೆ ಅದರ ಸಾಹಿತ್ಯಸೇವೆಯ ರೀತಿ-ನೀತಿ ಮತ್ತು ಸಹಾಯ–ಸಂಪತ್ತಿನ ಬಗ್ಗೆ ಸಾಕಷ್ಟು ಪರಿಚಯ ಮಾಡಿಕೊಟ್ಟಿತ್ತು. ಆಮೇಲೆ ‘ ಗುಂಪು ’ ಪ್ರಾಂತದ ಪ್ರಮುಖ ಪತ್ರಿಕೆಯಾದ ‘ ಜಯಕರ್ನಾಟಕ ’ವನ್ನು ಹೊರಡಿಸುವ ಭಾರ ವಹಿಸಿತು. ಈ ಮಾಸಿಕ ಮತ್ತು ಅದರ ಹೆಸರಿನ ಗ್ರಂಥಮಾಲೆಯ ಮೂಲಕ ಅದು ಕನ್ನಡ ಜಾನಪದ ಸಾಹಿತ್ಯದ ಪುನರುಜ್ಜೀವನ ಕಾರ್ಯವನ್ನು ಸಫಲಗೊಳಿಸುವದರಲ್ಲಿ ನೆರವಾಯಿತು. ಮಹಾನವಮಿ, ಪಂಪೋತ್ಸವ, ವಿದ್ಯಾರಣ್ಯೋತ್ಸವ, ಶಾಂತಕವಿ ತಿಥಿ ಮುಂತಾದ ಉತ್ಸವಗಳನ್ನು ಆಚರಣೆಯಲ್ಲಿ ತಂದಿತು. ಈಗ ಇವುಗಳಲ್ಲಿ ಕೆಲವನ್ನು ಇಡೀ ನಾಡು ಆಚರಿಸುತ್ತಿದೆ; ಮತ್ತು ಇವುಗಳಲ್ಲಿ ಕೆಲವು ಉತ್ಸವಗಳನ್ನಂತೂ ‘ ಗುಂಪಿಗರು ’ ತಾವೇ ಭಾಷಣಕಾರರಾಗಿಯೂ

ಶ್ರೋತೃಗಳಾಗಿಯೂ ಆಚರಿಸುವ ಪ್ರಸಂಗಗಳು ಎಷ್ಟೋ ಸಾರೆ ಒದಗಿದವು. ಇನ್ನೊಂದು ವಿಶೇಷ ಸಂಗತಿಯೆಂದರೆ ‘ಗುಂಪಿ’ನ ಸದಸ್ಯ ಸಂಖ್ಯೆಯು ಕರ್ನಾಟಕದ ಎಲ್ಲ ಭಾಗಗಳನ್ನು ಪ್ರತಿನಿಧಿಸುತ್ತಿದ್ದಿತು. ಧಾರವಾಡ ಅದರ ಕೇಂದ್ರ. ವಿಜಾಪುರದಲ್ಲಿಯೂ ಅದರ ಒಂದು ಉಪಕೇಂದ್ರವನ್ನು ಸ್ಥಾಪಿಸಲಾಯಿತು. ಅದರಲ್ಲಿ ಮೈಸೂರು ಮತ್ತು ಹೈದರಾಬಾದಿನ ಜನರು ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಉತ್ತರ ಕರ್ನಾಟಕದಿಂದ ಶಾಂತಿನಿಕೇತನಕ್ಕೆ ಹೋದವರಲ್ಲಿ ‘ಗುಂಪಿ’ನ ನಾಲ್ಕು ಮಂದಿ ಗೆಳೆಯರೇ ಮೊದಲಿಗರು. ೧೯೨೪ರಲ್ಲಿ ಅನಂತಪುರದೊಳಗೆ ಸಮಿತಿಯೊಂದನ್ನು ಸ್ಥಾಪಿಸಿ, ‘ಗುಂಪಿ’ನ ಗೆಳೆಯರು ಬರೆದ ಒಂದು ಕವನ ಸಂಗ್ರಹವನ್ನು ಅದಕ್ಕೆ ಕೊಟ್ಟು. ಉತ್ತಮ ಕವನಗಳಾವುವೆಂಬುದನ್ನು ನಿರ್ಣಯಿಸಿ ಬಹುಮಾನ ಕೊಡುವ ಅಧಿಕಾರವನ್ನು ಅದಕ್ಕೆ ಒಪ್ಪಿಸಲಾಯಿತು. ಮತ್ತು ‘ಹಕ್ಕಿ ಹಾರುತಿದೆ’ ಎಂಬ ಸಂಗ್ರಹವನ್ನು ‘ಗುಂಪಿ’ನ ಸುಮಾರು ಇಪ್ಪತ್ತಾರು ಗೆಳೆಯರ ಕವನಗಳ ಮಾದರಿಯಾಗಿ ಪ್ರಕಟಿಸಲಾಯಿತು.

ಅದರ ಕೆಲವು ಹಿರಿಯ ಸದಸ್ಯರು ಇಂದು ಪ್ರಸಿದ್ಧ ಸಾಹಿತಿಗಳಾಗಿದ್ದಾರೆ. ೧೯೩೦ರಲ್ಲಿ ಮೈಸೂರಿನಲ್ಲಿ ಜರುಗಿದ ಕವಿ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದ ಶ್ರೀ. ಬೇಂದ್ರೆಯವರು ನವಕರ್ನಾಟಕದ ಅತ್ಯುತ್ತಮ ಕವಿಗಳಲ್ಲೊಬ್ಬರಾಗಿದ್ದಾರೆ ಶ್ರೀ. ಸಾಲಿಯವರು ಇನ್ನೊಬ್ಬ ವಿಶಿಷ್ಟತರದ ಕವಿಗಳು. ‘ಆನಂದಕಂದ’ರು ಪ್ರಖ್ಯಾತ ಕವಿಗಳೂ ಆಗಿದ್ದಾರೆ. ಮತ್ತು ಕೃಷ್ಣಕುಮಾರರ ಸಣ್ಣಕತೆಗಳು ಎಲ್ಲ ಕನ್ನಡಿಗರ ಮೆಚ್ಚುಗೆಗೆ ಪಾತ್ರವಾಗಿವೆ. ಕವಿತೆ, ಕಾದಂಬರಿ, ಮತ್ತು ವಿಮರ್ಶಾರಂಗಗಳಲ್ಲಿ ಶ್ರೀಮಾನರಾದ ಕೊಣ್ಣೂರ, ಖಾನೋಳಕರ, ಸಂಗಮ (ಶಾಂತಿನಿಕೇತನದ ಕಲಾವಿದರು), ಮುಗಳಿ ಮುಂತಾದವರ ಕಾರ್ಯವು ಗಮನಾರ್ಹವಾಗಿದೆ. ‘ನನ್ನ ನಲ್ಲ’ದ ಚೆನ್ನಮಲ್ಲರು ಇತಿಹಾಸ-ಸಂಶೋಧನೆಗೆ ತಮ್ಮ ಕಾಣಿಕೆಯನ್ನರ್ಪಿಸಿದ್ದಾರೆ. ಮತ್ತು ಅವರ ‘ಮಧುರ ಗೀತೆ’ ‘ಗುಂಪಿ’ನ ಕೆಲವೊಂದು ಉದ್ದೇಶಗಳನ್ನು ಚಿತ್ರಿಸುವಂಥ ಮಹತ್ವವಾದ ಕೃತಿಯಾಗಿದೆ.

ಇಷ್ಟೆಲ್ಲ ಕಾರ್ಯವನ್ನು ಸಾಧಿಸಿದ ಮೇಲೆ ‘ಗುಂಪು’ ಕನ್ನಡಿಗರಲ್ಲಿ ಕುತೂಹಲವನ್ನು ಹೆಚ್ಚಿಸಿ, ಅವರು ತನ್ನ ವಿಷಯವಾಗಿ ಹೆಚ್ಚಿನ

ಮಾಹಿತಿಯನ್ನು ಪಡೆಯುವಂತೆ ಪ್ರೇರೇಪಿಸುವದೂ ಸಹಜವಾಗಿದೆ. ಅದರ ಇನ್ನೊಂದು ಸಹಜವಾಗಿ ಬೆರಗುಗೊಳಿಸುವಂಥ ಸ್ಥಿತಿಯು ಈ ಕುತೂಹಲ ವನ್ನು ಇನ್ನಿಷ್ಟು ಹೆಚ್ಚಿಸಿತು: ' ಗುಂಪಿ 'ಗೆ ಘಟನೆಯೆಂಬುದೇ ಇರಲಿಲ್ಲ. ಅದು, ಕೆಲವು ಗೆಳೆಯರು ತಮ್ಮ ಆದರ್ಶದ ಬೆಳಕಿನಲ್ಲಿ ಮುಂದುವರಿಯಲು ಮಾಡಿಕೊಂಡಂಥ ವ್ಯವಸ್ಥಾರಹಿತವಾದ, ರಜಿಸ್ಟರ್ ಆಗದೇ ಇದ್ದಂಥ ಒಂದು ಸಂಘ. ಈ ಸಂಘದಲ್ಲಿ ಸೇರಬಯಸುವ ಕೆಲವು ಜನರು ಇದರ ಪ್ರವೇಶಧನ ಎಷ್ಟಿದೆಯೆಂದು ಕೇಳಿದರು ! ' ಗುಂಪು ' ಪ್ರವೇಶಧನದ ಬಗ್ಗೆ ಕನಸಿನಲ್ಲಿಯೂ ಯೋಚಿಸಿರಲಿಲ್ಲ. ಯಾವ ಒಂದು ಆದರ್ಶವನ್ನು ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಸಾಧಿಸಲು ಅದು ಯತ್ನಿಸುತ್ತಿದ್ದಿತೋ ಅದೇ ಆದರ್ಶದ ಹೆಸರನ್ನಿಟ್ಟುಕೊಂಡು ತನ್ನ ಕಾರ್ಯವನ್ನು ಕೈಕೊಂಡಿತ್ತು. ಅದು ಸಾಹಿತ್ಯರಂಗದಲ್ಲಿ ಮಾಡುತ್ತಿದ್ದ ಕಾರ್ಯದಿಂದ ಆಕರ್ಷಿಸಲ್ಪಟ್ಟ ಜನರೂ ಅದರ ದುಃಸಾಧ್ಯವಾದ ಧ್ಯೇಯದ ಕಡೆಗೆ ಕಡೆಗಣ್ಣಿನಿಂದ ನೋಡುವ ಪ್ರಸಂಗ ಬಂದಿತು. ಅದರ ಸದಸ್ಯ ಸಂಖ್ಯೆಯೇ ಅಸ್ಥಿರವಾದದ್ದೆಂಬುದು ಅವರಿಗೆ ತಿಳಿಯಿತು. ಆದರೆ, ಒಂದು ವೇಳೆ ಇಬ್ಬರು ಕೂಡಿದರೂ ಅದೊಂದು ಗುಂಪೇ ಎಂಬುದು ' ಗುಂಪಿ 'ನ ತತ್ವ.

ಈ ರೀತಿ ' ಗುಂಪು ' ಒಂದು ಮನಮೋಹಕ ಹೆಸರಾಗಿದೆ. ಸುವಾಸನೆ ಯಂತೆ ಗಾಳಿಯಲ್ಲಿ ಹರಡಿದ್ದರೂ ಅದೃಶ್ಯವಾಗಿದೆ. ಅದೊಂದು ವ್ಯವಸ್ಥಾ ರಹಿತ ಸಂಸ್ಥೆಯಾಗಿದ್ದರೂ ತನ್ನ ಅವ್ಯಕ್ತವಾದ ಪ್ರಭಾವವನ್ನು ಬೀರದೇ ಬಿಟ್ಟಿಲ್ಲ. ಕಪಾಟಿನಿಂದ ನೀವು ಹೊರತೆಗೆಯುವ ಬಟ್ಟೆಗಳನ್ನೆಲ್ಲಾ ' ಪುನಗಿನ ಕೈಚೀಲದಂತೆ ' ಗಮಗಮಿಸುವಂತೆ ಮಾಡುತ್ತದೆ. ಆದ್ದರಿಂದ, ತಮ್ಮ ವಾಚಕರಿಗೆ ' ಗುಂಪಿ 'ನ ಸ್ವರೂಪ ಮತ್ತು ಕಾರ್ಯದ ಬಗ್ಗೆ ಪರಿಚಯ ಮಾಡಿ ಕೊಡಲು ನಮ್ಮ ಸಂಪಾದಕರು ಇಚ್ಛಿಪಡುವದು ನ್ಯಾಯವೇ ಆಗಿದೆ. ಆದರೆ ' ಗುಂಪು ' ನೆರವೇರಿಸಿರುವ ಕಾರ್ಯದ ಬಗ್ಗೆ ನಾನು ಅಷ್ಟೇನೂ ನಿರ್ಧಾರ ವಾಗಿ ಹೇಳಲಾರೆ. ಇನ್ನೂ ಸಾಧನಾ ಮಾರ್ಗದಲ್ಲಿಯೇ ಇದ್ದ ಒಂದು ಸಂಸ್ಥೆಯ ವಸ್ತುಸ್ಥಿತಿಯನ್ನು ಹೊರಗೆಡಹುವದು ಅಪ್ರಾಸಂಗಿಕವೆಂದು ನಾನು ಬಲ್ಲೆ. ಆದರೆ ಮನಸ್ಸಾಕ್ಷಿಯಲ್ಲಿರಬೇಕಾದ ಸಂಯಮನ ಮತ್ತು ಸ್ವಾತಂತ್ರ್ಯದ ಸಂಪೂರ್ಣ ಮಹತ್ವವನ್ನರಿತವನು ಮನಬಿಚ್ಚಿ ಮಾತನಾಡುವು ನೇನೂ ತಪ್ಪಲ್ಲ.

೨

ಮೊದಲು ಕೆಲವು ನಿಜಸಂಗತಿಗಳನ್ನು ಹೇಳಬಯಸುತ್ತೇನೆ. ಹೀಗೆ ಮಾಡುವುದರ ಉದ್ದೇಶ ಮುಂದಿನ ವಿವರಣೆಗೆ ಬಣ್ಣಕೊಡಲೆಂದಲ್ಲ, ಸಾಹಿತ್ಯಕ್ಕೆ ಸಂಬಂಧಿಸಿದ ಒಂದು ವಸ್ತುವನ್ನು ಕುರಿತು ಹೇಗೆ ಅಭ್ಯಾಸ ಮಾಡಬೇಕೆಂಬುದಿನ್ನು ಸೂಚಿಸುವದಕ್ಕಾಗಿ. ಹೀಗೆ ಮಾಡುವುದರಿಂದ ಇನ್ನೊಂದು ಪ್ರಯೋಜನವೆಂದರೆ ಒಂದು ನೂತನವಾದ ಸಾಹಿತ್ಯ ಕಾರ್ಯವು ಎಂಥ ಪರಿಸ್ಥಿತಿಗಳಲ್ಲಿ ಜನ್ಮತಾಳುತ್ತದೆಂಬುದರ ಬಗ್ಗೆ ಒಂದು ಸಾಮಾನ್ಯ ಕಲ್ಪನೆಯನ್ನು ಒದಗಿಸಿದಂತಾಗುತ್ತದೆ.

ವ್ಯಕ್ತಿತ್ವವನ್ನು ವ್ಯಕ್ತಪಡಿಸುವದೇ ಸಾಹಿತ್ಯ ಎಂಬುದೊಂದು ಸಾಮಾನ್ಯ ಅಭಿಪ್ರಾಯ. ಇದಲ್ಲದೆ, ಸಾಹಿತ್ಯವು ತನ್ನ ಪ್ರಗತಿಯ ಆರಂಭಾವಸ್ಥೆಯಲ್ಲಿ ಒಂದು ಜನಾಂಗದ ಆತ್ಮವನ್ನೇ ಚಿತ್ರಿಸುತ್ತದೆಂಬುದು ಸಾಮಾನ್ಯವಾಗಿ ಎಲ್ಲರೂ ಒಪ್ಪುತ್ತಿರುವ ಮಾತು. ಆದರೆ ಸಾಹಿತ್ಯ ನಿರ್ಮಾಣದ ಬಗ್ಗೆ ನೆನಪಿನಲ್ಲಿಡತಕ್ಕಂಥ ಇನ್ನೊಂದು ಸಂಗತಿಯೆಂದರೆ, ಹಳೆಯ ಸಾಹಿತ್ಯವು ಹೊಸ ಸಾಹಿತ್ಯಕ್ಕೆ ಎಡೆಮಾಡಿ ಕೊಡುವಾಗ, ದಿಗ್‌ದಿಗಂತವನ್ನು ಸುವರ್ಣಮಯವಾಗಿ ಮಾಡಬೇಕೆಂಬ ಕನಸನ್ನು, ಪರಸ್ಪರ ಸೌಹಾರ್ದದಿಂದ ಕೆಲಸದಲ್ಲಿ ತೊಡಗುವ ಒಂದು ಗುಂಪು ಎಷ್ಟು ಪರಿಣಾಮಕಾರಿಯಾಗಿಯೂ ಯಶಸ್ವಿಯಾಗಿಯೂ ನನಸಾಗಿ ಮಾಡಬಲ್ಲುದೋ ಅಷ್ಟು ಪರಿಣಾಮಕಾರಿಯಾಗಿ ಒಬ್ಬ ವ್ಯಕ್ತಿ, ಅವನು ಎಷ್ಟೇ ಪ್ರತಿಭಾಶಾಲಿಯಾಗಿರಲಿ, ಮಾಡಲಾರ. ಆ ಗುಂಪಿನ ಜನರು ತಮ್ಮಲ್ಲೊಬ್ಬನನ್ನು ಮುಂದಾಳನ್ನಾಗಿ ಮಾಡಿಕೊಂಡಿರಬಹುದು. ಆದರೆ ಆ ಗುಂಪು ಯಾವಾಗಲೂ ಸೋದರರ ಗುಂಪೇ. ಇಂಥ ಒಂದು ಗುಂಪು ಒಮ್ಮೆ ' ಸಾಕ್ರೆಟೀಸನ ಚಪ್ಪರದಲ್ಲಿ ' ಸತ್ಯಶೋಧನೆಯ ಉಚ್ಚ ಧ್ಯೇಯವನ್ನಿಟ್ಟುಕೊಂಡು ಕೂಡಿತು. ಇಂಥದೇ ಒಂದು ಶೋಧಕರ ಸಮೂಹವು ೧೨ನೇ ಶತಮಾನದ ಕರ್ನಾಟಕದಲ್ಲಿ ಬಸವಣ್ಣ ಮತ್ತು ಅಲ್ಲಮಪ್ರಭುಗಳ ನೇತೃತ್ವದಲ್ಲಿ ಅನುಭವವುಂಟಪದೊಳಗೆ ಕೂಡುತ್ತಿದ್ದಿತು. ಆದರೆ ಇಲ್ಲಿ ನಾವು ಬರಿಯ ಸಾಹಿತ್ಯಸೇವೆಯ ಧ್ಯೇಯವನ್ನಿಟ್ಟುಕೊಂಡು ಕಾರ್ಯೋನ್ಮುಖವಾಗಿರುವಂಥ ಗುಂಪುಗಳ ವಿಷಯವಾಗಿ ವಿಚಾರ ಮಾಡಬೇಕಾಗಿದೆ. ಈಗ ನಮಗೆ ಎಲಿಜಬೆತ್ ರಾಣಿಯ ಕಾಲದ ಯೂನಿವರ್ಸಿಟಿ ವಿಟ್ಸ್‌ರ

ನೆನಪಾಗುತ್ತದೆ. ಆಗಿನ ಕಾಲದ ನಾಟಕಗಳ ಮಹತ್ವವನ್ನು ಸಮರ್ಥಿಸಿದವರಲ್ಲಿ ಅವರೇ ಮೊದಲಿಗರು. ಮುಂದೆ ಇಂಗ್ಲಿಷ ಕವಿತಾ ಸಾಹಿತ್ಯದಲ್ಲಿ ಲೇಕ್ ಸ್ಕೂಲ್ ಎಂಬ ಒಂದು ಪಂಥವಿದ್ದಿತು. ಒಂದು ಹೊಸ ಬಗೆಯ ಕಲ್ಪನಾ ಕಾವ್ಯಸೃಷ್ಟಿಯೇ ಅದರ ಉದ್ದೇಶ. ಆಮೇಲೆ Pre-Raphaelites ಎಂಬವರು ಒದರು ಮತ್ತು ಇಂದು ನಾವು Irish Revival ಎಂಬ ಒಂದು ಹೊಸ ಚಳವಳಿಯು ಜನ್ಮತಾಳಿ ಪ್ರಗತಿ ಹೊಂದಿದಂಥ ಕಾಲದಲ್ಲಿದ್ದೇವೆ. ಕವಿ ಈಟ್ಸನೇ ಇದರ ಪ್ರತಿನಿಧಿ.

ಇಂಥ ಮಿತ್ರಮಂಡಳಿಗಳಲ್ಲಿ ಇನ್ನೊಂದು ಸಂಗತಿಯನ್ನು ನಾವು ನೋಡಬಹುದು: ಅವರು ಕಾಣುವ ಕನಸು ಅಷ್ಟು ದಿನ ಬಾಳಲಾರದು ಅದು ತನ್ನ ಜಿಂದಿಗಿ ಸಮೇತ ಮೆಲ್ಲಗೆ ಮಾಯವಾಗುತ್ತದೆ ಇಂಥ ಒಂದು ಗುಂಪು ಯಾವ ಒಂದು ಆಧ್ಯಾತ್ಮಿಕ ಕಲ್ಪನೆಯಿಂದ ತಾನು ಆಕರ್ಷಿಸಲ್ಪಟ್ಟಿದೆಯೋ ಅದೇ ಕಲ್ಪನೆಯ ಸಾಕಾರತ್ವವನ್ನು ಪ್ರತಿಪಾದಿಸುವಂತೆ ಕಂಡುಬರುತ್ತದೆ. ಆದರೆ ಪ್ಲೇಟೋನ ಸಂಭಾಷಣೆಗಳಲ್ಲದೆ ಸಾಕ್ರೆಟೀಸ್ ಸಂಘದ ಇನ್ನಾವ ಗುರುತೂ ಉಳಿದಿಲ್ಲ ಬಸವಣ್ಣನ ಪಂಥವು ಸುದೈವಿಯೆಂದು ಹೇಳಬಹುದು. ಏಕೆಂದರೆ, ಅದು ತನ್ನ ಹಿಂದೆ ಒಂದು ದೊಡ್ಡ ವಚನ ಸಾಹಿತ್ಯವನ್ನು ಬಿಟ್ಟುಹೋಗಿರುವದಲ್ಲದೆ ಒಂದು ಧಾರ್ಮಿಕ ಸಂಸ್ಥೆಯನ್ನೂ ಸ್ಥಾಪಿಸಿತು. ಆದರೆ ಕಲ್ಪನಾಸಾಹಿತ್ಯ ಪರಂಪರೆಯ ಮೂಲಪುರುಷರಾದ ವರ್ಡ್ಸ್‌ವರ್ಥ್ ಮತ್ತು ಕೋಲರಿಡ್ಜರಲ್ಲಿಯೇ ಭಿನ್ನಾಭಿಪ್ರಾಯವಿದ್ದಿತು. Pre-Raphaelitesರು ಮೊಲವನ್ನೆಬ್ಬಿಸಿದ ಮೇಲೆ ಬೇರೆ ಬೇರೆ ಹಾದಿ ಹಿಡಿದರು. ಮೋಹನಿರಸನವು W. B. Yeatsನನ್ನು ಮುತ್ತಿದೆ.

ಭಾರತೀಯ ಪುನರುಜ್ಜೀವನವು ಬಹುಶಃ ಅನೇಕ ಸಾಹಿತ್ಯ ಸಂಸ್ಥೆಗಳನ್ನು ಹಿಂದುಸ್ತಾನದಲ್ಲೆಲ್ಲ ನಿರ್ಮಿಸಿತು. ಕರ್ನಾಟಕದಲ್ಲಿ ' ಗೆಳೆಯರ ಗುಂಪು ' ಉದ್ಭವಿಸಿತು. ಈ ' ಗುಂಪಿ 'ನ ಧ್ಯೇಯ ಮತ್ತು ಅದರ ಸ್ಥಿತಿ-ಗತಿಯ ಪರಿಚಯ ಮಾಡಿಕೊಡುವದೇ ಈ ಲೇಖನದ ಉದ್ದೇಶ.

೩

' ಗುಂಪಿ 'ನ ಬಗ್ಗೆ ಆಗಬಹುದಾದ ತಪ್ಪು ತಿಳುವಳಿಕೆಯನ್ನು ಮೊದಲು ದೂರಮಾಡಬಯಸುತ್ತೇನೆ. ಮೇಲೆ ವಿವರಿಸಿದ ಮಹಾಕಾರ್ಯಗಳ

ಹೊಂದಿಟ್ಟಿಯಲ್ಲಿ ‘ ಗುಂಪ ’ನ್ನೂ ಸೇರಿಸಲು ನಾನು ಬಯಸುವದಿಲ್ಲ. ಅದು ಸಲ್ಲಿಸಿದ ಸಾಹಿತ್ಯ ಮತ್ತು ಆಧ್ಯಾತ್ಮಿಕ ಸೇವೆಯು ಹೊರತು ಇನ್ನಾವುದಕ್ಕೂ ಅದರ ಸಂಬಂಧವನ್ನು ಹಚ್ಚಬಯಸುವುದಿಲ್ಲ. ಅದರ ಪ್ರಯೋಗ ಇನ್ನೂ ಮುಗಿದಿಲ್ಲ. ಪರಿಣಾಮಗಳನ್ನು ಕುರಿತು ಬೆಲೆ ಕಟ್ಟಲು ವಾಚಕರು ಸರ್ವ ಸ್ವತಂತ್ರರು. ಇದಲ್ಲದೆ ಮೇಲೆ ಹೇಳಿದ ಚಟುವಟಿಕೆಯ ಕೀರ್ತಿ ಹೆಚ್ಚಾಗಿ ‘ ಗುಂಪಿ ’ಗೇ ಸಲ್ಲತಕ್ಕುದೆಂದೂ ನನ್ನ ಅಭಿಪ್ರಾಯವಲ್ಲ ಶೋಭಾಯಮಾನ ವಾದ ಭಾರತೀಯ ಪುನರುಜ್ಜೀವನದ ಆ ರಭಸದ ರೀತಿಯೇ ಆ ಚಟುವಟಿಕೆಗೆ ಮುಖ್ಯ ಕಾರಣ. ಅಲ್ಲಿಂದ ಕರ್ನಾಟಕದ ಸಾಹಿತಿಗಳು ‘ ಗುಂಪಿ ’ನ ಹಿರಿಯ ಸದಸ್ಯರೊಂದಿಗೆ ಕೂಡಿಕೊಂಡು ಕನ್ನಡ ಸೇವೆಯನ್ನು ವಿಚಾರಪೂರ್ವಕವಾಗಿ ಕೈಕೊಂಡರು ಉತ್ತರ ಕರ್ನಾಟಕವು ಶ್ರೀಮಾನರಾದ ಕಾದಂಬರಿಕಾರ ಗಳಗನಾಥರು, ಹುಯಿಲಗೋಳ ಅವರು, ನವೀನ ನಾಟಕಕಾರ ಆರ್. ವಿ. ಜಾಗಿರದಾರರು, ಕುರಡಿಯವರು ಮುಂತಾದ ಮಹನೀಯರಿಗೆ ಅತ್ಯಂತ ಋಣಿಯಾಗಿದೆ.

ಆದರೆ, ಈ ಲೇಖನದ ಮೊದಲನೇ ಭಾಗದಲ್ಲಿ ವಿವರಿಸಿರುವ ಕಾರ್ಯ ವಲ್ಲದೆ ‘ ಗುಂಪು ’ ಇನ್ನೆರಡು ಅಪೂರ್ವವಾದ ಕೆಲಸಗಳನ್ನು ಮಾಡಿರುವು ದನ್ನು ನಾವು ಮರೆಯುವಂತಿಲ್ಲ. ಮೊದಲನೆಯದಾಗಿ, ಇಂದು ಕರ್ನಾಟಕದ ತುಂಬೆಲ್ಲ ಕಂಡುಬರುತ್ತಿರುವ ಸಾಹಿತ್ಯಸಂಘಗಳ ಹುಟ್ಟುವಿಕೆಗೆ ‘ ಗುಂಪೇ ’ ಮಾರ್ಗದರ್ಶಕವಾಯಿತು. ಅದಕ್ಕಿಂತ ಮೊದಲು ಸಾರ್ವಜನಿಕ ಸಂಸ್ಥೆಗಳ ಮೂಲಕವಾಗಲೀ ವೈಯಕ್ತಿಕವಾಗಿಯಾಗಲೀ ಕಾರ್ಯ ನಡೆಯುತ್ತಿದ್ದಿತು. ಆದರೆ, ಒಂದು ಸಂಸ್ಥೆಯಮೂಲಕವಾಗಿಯಾಗಲೀ ಅಥವಾ ಒಂದು ಪದ್ಧತಿ ಪ್ರಕಾರವಾಗಿ ಕೂಡದೆ, ಕೇವಲ ಮಿತ್ರಭಾವನೆಯಿಂದ, ಯಾವ ಸಂಪ್ರ ದಾಯಕ್ಕೂ ಒಳಗಾಗದೆ ಕೆಲವು ಗೆಳೆಯರು ಕೂಡಿ ಕೆಲಸ ಮಾಡುವದು ಶಕ್ಯ ವಿದೆಯೆಂಬುದನ್ನು ‘ ಗುಂಪು ’ ಜನತೆಗೆ ತೋರಿಸಿಕೊಟ್ಟಿತು. ‘ ಕನ್ನಡಿಗರ ಕೂಟ ’ ಮುಂತಾದ ಸಂಸ್ಥೆಗಳು ಹುಟ್ಟುವುದಕ್ಕೆ ‘ ಗುಂಪೇ ’ ಕಾರಣ ವಾಯಿತು. ಎರಡನೆಯದಾಗಿ, ‘ ಗುಂಪು ’ ಆಧುನಿಕ ಕನ್ನಡ ಸಾಹಿತ್ಯದ ಮೇಲೆ ತನ್ನ ಪ್ರಭಾವವನ್ನು ಬೀರದೆ ಬಿಡಲಿಲ್ಲ ಅದು ಸ್ವತಂತ್ರವಾಗಿದ್ದು-ಕೊಂಡು ಕಳೆದ ಹತ್ತು-ಹನ್ನೆರಡು ವರುಷದ ಸಾಹಿತ್ಯ ನಿರ್ಮಾಣಕ್ಕೆ ಒಂದು ಹೊಸ ಮೆರುಗನ್ನು ಕೊಟ್ಟಿದೆ.

ಒಂದು ಪ್ರಶ್ನೆ ಮಾತ್ರ ಹಾಗೆಯೇ ಉಳಿಯುತ್ತದೆ : 'ಗುಂಪು' ಸಾಧಿಸಲು ಹೊರಟ ಕಾರ್ಯ ಇದೇಯೇನು ? ಈಗ ನಮಗೆ ದೈವದ ವ್ಯಂಗ್ಯ ವರ್ತನೆಯು ಕಂಡುಬರುತ್ತದೆ. 'ಗುಂಪು' ಪೂರ್ಣಗೊಳಿಸಬೇಕೆಂದು ಇಚ್ಛಿಸುತ್ತಿದ್ದುದು ಇಂಥ ಕಾರ್ಯವಲ್ಲ. ಮಹತ್ವಾಕಾಂಕ್ಷಿಗಳಾದ ನಾಲ್ಕು ಜನರು ಗೆಳೆಯರಂತೆ ಕೂಡಿಕೊಂಡಿರಬಹುದೆಂಬ ಭರವಸೆಯೇ ಅದಕ್ಕೆ ಆಧಾರ. 'ಒಂದೇ ಒರೆಯಲ್ಲಿ ಎರಡು ಖಡ್ಗಗಳು ಸೇರಲಾರವು' ಎಂದು ಒಂದು ಕನ್ನಡ ನಾಣ್ಣುಡಿಯಿದೆ. ಆದರೆ, ಎರಡು ಖಡ್ಗಗಳು ಕೂಡಿಕೊಂಡಿರುವದು ಅಶಕ್ಯವಾದರ ಆಗಲಿ. ಮಹತ್ವಾಕಾಂಕ್ಷಿಗಳಾದ ಹಲವು ವ್ಯಕ್ತಿಗಳು ಗೆಳೆಯರಂತೆ ಕೂಡಿರಬಹುದೆಂಬ ಮಾತನ್ನು ಸಿದ್ಧ ಮಾಡಿ ತೋರಿಸುವದೇ 'ಗುಂಪಿ'ನ ಪ್ರಯತ್ನವಾಗಿದ್ದಿತು. 'ಗುಂಪಿಗ'ರೆಲ್ಲರೂ ಕರ್ನಾಟಕದ ಸಾಹಿತ್ಯ ಮತ್ತು ಆಧ್ಯಾತ್ಮಿಕ ಪುನರುಜ್ಜೀವನದಲ್ಲಿ ಆಸಕ್ತಿಯುಳ್ಳವರಾಗಿದ್ದುದು ಆಕಸ್ಮಿಕವೇ ಸರಿ. ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ಒಂದು ಸರ್ವಾನ್ವಯಿ ಮೈತ್ರಿ ಭಾವನೆಯಿಂದ 'ಗುಂಪಿಗ'ರೆಲ್ಲರೂ ಕೂಡಿಕೊಂಡಿದ್ದರೆಂಬುದಕ್ಕೆ ಅದರಲ್ಲಿದ್ದ ಸಾಹಿತ್ಯದಲ್ಲಿ ಅಭಿರುಚಿಯಿಲ್ಲದವರೂ ಕಲಾವಿದರೂ ಮತ್ತು ವಿಧಾಯಕ ಕಾರ್ಯಕರ್ತರೇ ಸಾಕ್ಷಿ.

'ಗುಂಪು' ಸಂಯುಕ್ತ ಜೀವನದ ಒಂದು ಗಮನಾರ್ಹವಾದ ಮೆಟ್ಟಿಲನ್ನು ಮುಟ್ಟಿದಾಗ ತನ್ನ ಉದ್ದೇಶವನ್ನು ತಕ್ಕಮಟ್ಟಿಗೆ ಸಾಧಿಸಿತ್ತೆಂದು ಧೈರ್ಯವಾಗಿ ಹೇಳಬಹುದು. ಆದರೆ ಅದರಲ್ಲಿದ್ದ ಸಾಹಿತ್ಯಜ್ಞಾನವುಳ್ಳವರೂ ಸಂಸ್ಥೆಗಳನ್ನು ಕಟ್ಟುವ ಜಾಣ್ಮೆಯುಳ್ಳವರೂ ಬಹಳ ಸಾವಕಾಶವಾಗಿಯೂ ಅವ್ಯಕ್ತವಾಗಿಯೂ ಪ್ರಸಿದ್ಧಿಗೆ ಬಂದರು. ಮತ್ತು ಭೌತಿಕ ಕಾರಣಗಳು ನಮ್ಮ ಕನಸನ್ನು ನನಸನ್ನಾಗಿ ಮಾಡಲು ಬಹಳ ಅಡ್ಡಿಯನ್ನುಂಟುಮಾಡಿದವು

೪

ಸುಮಾರು ೧೯೨೧ರಲ್ಲಿ ಶ್ರೀ. ಬೇಂದ್ರೆಯವರು, ಧಾರವಾಡದ ವ್ಹಿಕ್ಟೋರಿಯಾ ಹಾಯುಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದಾಗ, ಈ ಒಂದು ಮಿತ್ರತ್ವದ ಆದರ್ಶವನ್ನಿಟ್ಟುಕೊಂಡು ಪ್ರಯೋಗ ನಡೆಸಲು ಮನಸ್ಸುಮಾಡಿದರು. ಈ ವಿಷಯವಾಗಿ ಅವರು ಮೊದಲೇ ಸಾಕಷ್ಟು ವಿಚಾರ ಮಾಡಿದ್ದರು. ವಿವಿಧ ರುಚಿಯುಳ್ಳ ವ್ಯಕ್ತಿಗಳೊಡನೆ ಕೂಡಿಕೊಂಡು ಈ ತಮ್ಮ ಉದ್ದೇಶ

ಸಾಧನೆಗಾಗಿ ಪ್ರಯತ್ನ ಮಾಡಿದ್ದರು. ಆದೇ ರೀತಿ ಈಗ ಅವರು ಒಂದೇ ತರದ ಪ್ರಕೃತಿಯ ಮತ್ತು ಜೀವನಾಭ್ಯಾಸದ ಕೆಲವು ಗೆಳೆಯರನ್ನು ಕೂಡಿ ಹಾಕಿ ತಮ್ಮ ಶೋಧನೆಯನ್ನು ಆರಂಭಿಸಿದರು.

ಇನ್ನೊಂದು ವಿಚಾರವು ಅವರಿಗೆ ನಿಚ್ಚಳವಾಗಿ ಹೊಳೆಯಿತು : ಶಾಲೆಯಲ್ಲಿ ಕಲಿಯುವ ವಿದ್ಯಾರ್ಥಿಗಳು ಉತ್ತಮರೀತಿಯ ಗೆಳೆಯರಾಗಬಹುದೆಂಬುದೇ ಆ ವಿಚಾರ ಅವರು ಒಂದು ಕಡೆ ಹೀಗೆ ಬರೆದರು :

> " Mine is but a flower's wish
> To leave some seeds behind, "

ಮತ್ತು ಎಳೆ ಮನಸ್ಸುಗಳ ನೈರ್ಮಲ್ಯವು ಈ ದಾರಿಯಲ್ಲಿ ಅವರಿಗೆ ಸಹಾಯಕನಾಯಿತು ಇದೇ ರೀತಿ ಅವರು ಆ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯದ ಬಗ್ಗೆ ಆದರವನ್ನೂ ಗೌರವವನ್ನೂ ಹುಟ್ಟಿಸಿದರು. ತಮ್ಮಂತೆ ಅವರನ್ನು ಅರವಿಂದರ ಮತ್ತು ಠಾಕೂರರ ಆಧ್ಯಾತ್ಮಿಕ ಪದ್ಧತಿಯಲ್ಲಿ ಆಸಕ್ತಿಯುಳ್ಳವರನ್ನಾಗಿ ಮಾಡಿದರು. ಸಂಭಾಷಣೆ--ಕೊನೆಯಿಲ್ಲದ ಸುಮಧುರ ಸಂಭಾಷಣೆ ನಡೆದೇ ನಡೆಯುತ್ತಿತ್ತು ಬಹುಶಃ ಆ ಸಂಭಾಷಣೆಯು ಜನರಿಗೆ ಏನೂ ಅರ್ಥವಿಲ್ಲದ್ದಾಗಿ ಕಂಡಿರಬಹುದು ಆದರೆ ಅದೇ ಸಂಭಾಷಣೆಯು ಇಂದು ಪ್ರಸಿದ್ಧ ಕನ್ನಡ ಸಾಹಿತಿಗಳಾಗಿರುವ ತರುಣ 'ಗುಂಪಿಗರ' ಜೀವನವನ್ನೇ ರೂಪುಗೊಳಿಸಿದೆಯೆಂಬುದನ್ನು ಮರೆಯಲಾಗದು. ಆ ಸಂಭಾಷಣೆಯಲ್ಲಿ ಹೂಗಳಿಂದ ಮೊದಲುಮಾಡಿ ತಾರೆಗಳ ವರೆಗಿನ ಎಲ್ಲ ವಿಷಯಗಳೂ ಸಮಾವೇಶವಾಗಿರುತ್ತಿದ್ದವು.

ಇನ್ನು 'ಗುಂಪಿಗರ' ಸಂಖ್ಯೆ, ಅವರ ಬಾಂಧವ್ಯದ ರೀತಿ ಮುಂತಾದವುಗಳ ಬಗ್ಗೆ ವಿವೇಚಿಸುವದು ಅನಗತ್ಯ. ಆ ಅಖಂಡವಾದ ಬಾಂಧವ್ಯವು 'ಗುಂಪ'ನ್ನು 'ಅಭಿನ್ನ ಅಮೃತಧಾರೆಯನ್ನಾಗಿ' ಮಾಡಿತು. ಒಟ್ಟಿನಲ್ಲಿ ಹೇಳಬೇಕಾದರೆ ಶ್ರೀ. ಬೇಂದ್ರೆಯವರ ಕೈಯಲ್ಲಿ ಚುಕ್ಕಾಣಿಯನ್ನು ಕೊಟ್ಟು ಸಂಭಾಷಣೆಯ ಸಾಗರದಲ್ಲಿ ಪ್ರಯಾಣ ಬೆಳೆಸುವದೇ ಎಲ್ಲರ ಅಭಿಲಾಷೆಯಾಗಿದ್ದಿತು. ಯಾವುದೇ ಒಂದು ಗೆಳೆಯರ ಸಂಘವನ್ನು ಸ್ಥಾಪಿಸಬೇಕೆಂಬ ಇಚ್ಛೆ ಇನ್ನೂ ಯಾರ ಮನಸ್ಸಿನಲ್ಲಿಯೂ ಹುಟ್ಟಿರಲಿಲ್ಲ. ಒಂದು ಕಡೆ ಎಲ್ಲರೂ ಕಲೆಯುತ್ತಿದ್ದರು; ಮತ್ತು ಬೇಕಾಗಿದ್ದಾದರೂ ಇಷ್ಟೇ. ಚರ್ಚೆ ಮಾಡುವದು

ಮತ್ತು ಅದರ ಬೆಳಕಿನಲ್ಲಿ ಸಾಗುವದು ಜೀವನದ ಗುರಿಯಾಯಿತು. ವಿವಿಧ ರೀತಿಯ ಆಕಾಂಕ್ಷೆಗಳುಳ್ಳ ವ್ಯಕ್ತಿಗಳನ್ನು–ಸಾಹಿತಿಗಳನ್ನು, ಆಧ್ಯಾತ್ಮಿಗಳನ್ನು, ರಾಷ್ಟ್ರೀಯರನ್ನು ಮತ್ತು ವಿಧಾಯಕ ಕಾರ್ಯಕರ್ತರನ್ನು - ಈ ಸ್ವಯಂಪ್ರೇರಿತ ಗೆಳೆತನವು ಒಂದುಗೂಡಿಸಿತ್ತು.

ಈಗ ಒಂದು ವೈಯಕ್ತಿಕ ವಿಷಯಾಂತರವನ್ನು ಮಾಡಬಯಸುತ್ತೇನಾದ್ದರಿಂದ ವಾಚಕರು ನನ್ನನ್ನು ಕ್ಷಮಿಸುವರೆಂದು ನಂಬಿದ್ದೇನೆ. ಈ ವಿಷಯಾಂತರವು ವಾಚಕರನ್ನು ವಿಷಯದ ಅಂತರಾಳದಲ್ಲಿ ತಂದು ನಿಲ್ಲಿಸುವದು. ಶ್ರೀ. ಬೇಂದ್ರೆಯವರ ಸುಪ್ರಸಿದ್ಧ ವಿದ್ವತ್ತು, ಮೃದುಸ್ವಭಾವ ಮತ್ತು ಸೂಕ್ಷ್ಮವಾದ ನಿರ್ಣಯಶಕ್ತಿ ಇವುಗಳನ್ನು ಮನಗಂಡು ಧಾರವಾಡದ ಕರ್ನಾಟಕ ಕಾಲೇಜಿನ ಎಷ್ಟೋ ಉತ್ಸಾಹಶಾಲಿಗಳಾದ ವಿದ್ಯಾರ್ಥಿಗಳು ಅವರ ಕಡೆಗೆ ಆಕರ್ಷಿಸಲ್ಪಟ್ಟರು. ಎಷ್ಟೋ ಜನರು ಅವರ ಗೆಳೆಯರಾಗಿ ನಿಂತರು. ಮತ್ತು ಸಂತೋಷದಿಂದ ' ಗುಂಪಿಗ 'ರಾದರು. ಆಗ್ಗೆ ' ಗುಂಪಿಗ 'ನೆನಿಸಿಕೊಳ್ಳುವುದೊಂದು ದೊಡ್ಡ ಸಾಧನೆಯೇ ಆಗಿದ್ದಿತು. ತಾವೆಲ್ಲರೂ ಒಂದೇ ರೀತಿಯ ವಿಚಾರದವರಾಗಿದ್ದರೆಂದೇ ' ಗುಂಪಿ 'ನಲ್ಲಿ ಒಂದುಗೂಡಲು ಸಾಧ್ಯವಾಯಿತೆಂಬುದು ಅವರಿಗೆ ಆಮೇಲೆ ಗೊತ್ತಾಯಿತು.

ಈ ಕಾಲೇಜು ವಿದ್ಯಾರ್ಥಿಗಳಲ್ಲಿ ನಾನೂ ಒಬ್ಬ. ೧೯೨೫ರಲ್ಲಿ ಮ್ಯಾಟ್ರಿಕ್ ಪಾಸಾಗಿ ಕರ್ನಾಟಕ ಕಾಲೇಜನ್ನು ಸೇರಿದೆ. ಆಗಲೇ ಇಂಗ್ಲಿಷಿನಲ್ಲಿ ಕವನಗಳನ್ನು ಬರೆಯಲು ಪ್ರಾರಂಭಿಸಿದ್ದು ಎಷ್ಟೋ ನಿಷ್ಪ್ರಯೋಜಕ ಸಾಹಿತ್ಯವನ್ನು ಹುಟ್ಟಿಸಿದ್ದೆ. ಆದರೆ ಅಲ್ಲಲ್ಲಿ ಕೆಲವು ಉತ್ತಮ ಸಾಲುಗಳೂ ತಲೆಯೆತ್ತಿದ್ದವು ನಾನು ಬೆಳಕಿಗಾಗಿ, ಹೆಚ್ಚು ಹೆಚ್ಚು ಬೆಳಕಿಗಾಗಿ ಚಡಪಡಿಸುತ್ತಿದ್ದೆ. ನಮ್ಮ ಕಾಲೇಜಿನ ಪ್ರೊಫೆಸರರನ್ನು ಭೆಟ್ಟಿಯಾದೆ. ಆದರೆ ನನ್ನನ್ನು ತೃಪ್ತಿಗೊಳಿಸಲು ಅವರಿಂದ ಆಗಲಿಲ್ಲ ಹೀಗಾಗಿ ನಾನು ಕತ್ತಲೆಯಲ್ಲಿಯೇ ತಡವರಿಸಹತ್ತಿದೆ. ಆಗ ನನ್ನ ಸುದೈವದ ಬಾಗಿಲು ತೆರೆಯಿತು.

ನಾನು ಇರುತ್ತಿದ್ದುದು A—ಅವರ ಸಂಗಡ. ನನಗೆ ಆಪ್ತಮಿತ್ರತ್ವದ ಮೂಲಕ ಅವರ ಪರಿಚಯವಾಗಿದ್ದಿತು. R. B. A.—ಅವರು ಶ್ರೀ. ಬೇಂದ್ರೆಯವರ ಕೈಕೆಳಗೆ ಓದಿದವರೂ ಮತ್ತು ' ಗುಂಪಿಗ 'ರೂ ಆಗಿದ್ದರು. ಆಗ ಅವರು ಕಾಲೇಜ ವಿದ್ಯಾರ್ಥಿಗಳು. ನನ್ನ ಮತ್ತು ಅವರ ಪರಿಚಯವು

ಗೆಳೆತನದಲ್ಲಿ ಮಾರ್ಪಟ್ಟಿತು. ನಾವು ಸಂಜೆ ಹೊತ್ತು ತಿರುಗಾಡಲಿಕ್ಕೆಹೋದಾಗ 'ಗುಂಪಿ'ನ ಮಾತೇ ಮಾತು. ಆಗ 'ಗುಂಪು' ಸಾಹಿತ್ಯರಂಗದಲ್ಲಿ ಸಂಪಾದಿಸಿದ ಕೀರ್ತಿಯನ್ನು ಬೇಕಾದಷ್ಟು ಕೇಳುತ್ತಿದ್ದೆ ಆದರೆ A—ಅವರು ಅದರ ಸದಸ್ಯರೆಂಬುದು ನನಗೆ ಗೊತ್ತೇ ಇರಲಿಲ್ಲ ಈ ರೀತಿ 'ಗುಂಪಿ'ನ ಪ್ರಭಾವವು ನನ್ನ ಮನಸ್ಸನ್ನು ಅವ್ಯಕ್ತವಾಗಿ ಆಕ್ರಮಿಸಹತ್ತಿತು. ಮತ್ತು A—ಅವರು ಜೀವನದಲ್ಲಿ ಮೊದಲನೇ ಸಾರೆ ನನ್ನನ್ನು ನಾನು ತಿಳಿದುಕೊಳ್ಳುವಂತೆ ಮಾಡಿದರು.

ಈ ನಡುವೆ ಧಾರವಾಡದ ತರುಣ ಸಾಹಿತ್ಯ ಸಂಘಗಳು ಶ್ರೀ. ಬೇಂದ್ರೆಯವರ ಶ್ಲಾಘನೆಯಿಂದ ನಿನದಿಸುತ್ತಿದ್ದವು. ನನ್ನ ಕವನಗಳನ್ನು T—ಮತ್ತು B—ಅವರಿಗೆ ತೋರಿಸಲು, ಅವರು ನನಗೆ ಶ್ರೀ. ಬೇಂದ್ರೆಯವರನ್ನು ಕಾಣಲು ಹೇಳಿದರು. ಇನ್ನೂ ಎಷ್ಟೋ ಜನ ಇದರಂತೆಯೇ ಅಭಿಪ್ರಾಯಪಟ್ಟರು. ಈ ಬೇಂದ್ರೆಯವರು ಯಾರೆಂದು ನನಗೆ ಆಶ್ಚರ್ಯ! ಒಂದೆರಡು ಸಾರೆ ಅವರನ್ನು ಬೀದಿಗಳಲ್ಲಿ ಹೋಗುವಾಗ ನೋಡಿದ್ದೆ. ಆದರೆ ನನ್ನಷ್ಟಕ್ಕೆ ನಾನೇ ಅವರ ಸಂಗಡ ಮಾತನಾಡಲು ಧೈರ್ಯವಾಗಲಿಲ್ಲ. ನನ್ನ ಇಂಗಿತವನ್ನು A—ಅವರಿಗೆ ತಿಳಿಸಿದೆ ಧಾರವಾಡದಲ್ಲಿದ್ದು ಎಷ್ಟೋ ತಿಂಗಳಾದ ಮೇಲೆ, ನನ್ನ ಮನಸ್ಸು ಒಂದು ಹದಕ್ಕೆ ಬಂದಿದೆಯೆಂದು ತಿಳಿದು, A—ಯವರು ನನ್ನನ್ನು ಬೇಂದ್ರೆಯವರ ಬಳಿಗೆ ಕರೆದುಕೊಂಡು ಹೋದರು.

ನಾವು ಅವರನ್ನು ಕಂಡದ್ದು ಒಂದು ಒಳ್ಳೇ ಸಂಜೆಯ ಹೊತ್ತು. ಅವರು B—ಅವರ ಮನೆಯಲ್ಲಿದ್ದರು. A—ಅವರು ನನ್ನ ಪರಿಚಯ ಮಾಡಿಕೊಟ್ಟ ಮೇಲೆ ನನ್ನ ಕವನಗಳನ್ನು ಓದಿದೆ. ಬೇಂದ್ರೆಯವರು ಅವುಗಳನ್ನು ಶಾಂತರೀತಿಯಿಂದ ಕೇಳಿದ್ದಲ್ಲದೆ ಅವುಗಳ ಬಗ್ಗೆ ತಮ್ಮ ಒಳ್ಳೇ ಅಭಿಪ್ರಾಯವನ್ನೂ ವ್ಯಕ್ತ ಮಾಡಿದರು. ನನ್ನ ಓದುವಿಕೆಯು ಸಂಪೂರ್ಣವಾದನಂತರ ತಾವು ಮಾತನಾಡಲು ಪ್ರಾರಂಭಿಸಿದರು. ಮಾತುಕತೆ ಸುಮಾರು ಮೂರು ಗಂಟೆಗಳಿಗಿಂತ ಹೆಚ್ಚೇ ನಡೆಯಿತು. ರಾತ್ರಿ ಊಟದ ಹೊತ್ತು ಮೀರಿ ಹೋಗಿದ್ದರಿಂದ ಶ್ರೀಮತಿ ಬೇಂದ್ರೆಯವರಿಗೆ ದಾರಿ ಕಾದೂ ಕಾದೂ ಸಾಕಾಗಿತ್ತು. ಆದರೆ ಬೇಂದ್ರೆಯವರ ಪ್ರತಿಭೆಯು, ತನ್ನ ಗುಣದಂತೆ, ಊಟತೋಟಗಳನ್ನು ಮೀರಿ ನೆಟ್ಟಗೆ ತಾರೆಗಳ ಕಡೆಗೆ ನೆಗೆದಿತ್ತು. ನನ್ನ ಆತ್ಮವು

ಅವರ ತತ್ವಾನ್ವೇಷಣೆಯು ನೀರಿಯಿಗೆಯಲ್ಲಿ ನೇತಾಡುತ್ತಿದ್ದಿತು. ನಾವು ಅಲ್ಲಿಂದ ಎದ್ದು ಹೊರಡುವಾಗ ನಾನು ತೀರ ಬದಲಾಯಿಸಿಬಿಟ್ಟಿದ್ದೆ. ನನ್ನ ಆತ್ಮ ಈ ಭೂಮಿಯಿಂದ ದೂರವಾದ ಮೇಲೂ ಸಹ ಅಂದಿನ ಆ ಮಾತುಕತೆಯನ್ನು ಮರೆಯದೆಂದು ನನಗೆನಿಸುತ್ತದೆ.

ಇದು ಮತ್ತು ಇದಾದ ಮೇಲಿನ ಬೇಂದ್ರೆಯವರ ಸಂಗಡ ಆದ ನನ್ನ ಮಾತುಕತೆಗಳು ನನ್ನ ಮುಂದಿನ ಜೀವನವ್ಯಾಪ್ತಿಯನ್ನೇ ರೂಪುಗೊಳಿಸಿದವು. ನಾನು ಜೀವನದ ಝುರಿಯಂತೆಯೇ ಹರಿದುಹೋಗುವವನಾಗದೆ, ಅದರ ರಹಸ್ಯಗಳನ್ನು ಕುರಿತು ಧೇನಿಸುವಂಥವನಾದೆ. ನನ್ನ ಆತ್ಮವನ್ನು ಒಂದು ಸಲ ವಾದರೂ ತಣಿಸುವಂಥ ಕಾವ್ಯವನ್ನು ಬರೆಯಹತ್ತಿದೆ. ನನ್ನ ಕವಿತೆಗಳನ್ನೇ ನಾನು ಸೂಕ್ಷ್ಮವಾಗಿ ವಿಮರ್ಶಿಸತೊಡಗಿದೆ. ಮತ್ತು ಬೇರೆ ಇನ್ನಾವ ವಿಮರ್ಶಕ ನಿಗಾದದರೂ ನಾನು ಅಂಜುತ್ತಿದ್ದರೆ ಅದು ಬೇಂದ್ರೆಯವರಿಗೆ. ಸಾಹಿತ್ಯ ರಂಗ ದಲ್ಲಿ ವಿಶಿಷ್ಟವಾದ ಯೋಗ್ಯತೆಯನ್ನು ಪಡೆಯಲು ಅವಶ್ಯಕವಾದ ಆ ಒಂದು ಸಾಹಿತ್ಯ–ವಿಮರ್ಶೆಯ ಮೇಲಿನ ಹಿಡಿತವನ್ನು ಸಂಪಾದಿಸಿದೆ. ಒಹಳ ತಡ ವಾಗಿಯಾದರೂ ಅಂತೂ ಕಡೆಗೆ, ಇಂಗ್ಲಿಷಿನಲ್ಲಿ ಕವಿತೆ ಬರೆಯಬೇಕೆಂಬ ನನ್ನ ಮೋಹವನ್ನು ನಿವಾರಿಸುವದರಲ್ಲಿ ಶ್ರೀ. ಬೇಂದ್ರೆಯವರು ಯಶಸ್ವಿಯಾದರು. ಅವರು ನನ್ನನ್ನು ನನ್ನ ಮಾತೃಭಾಷೆಯ ಸಾಹಿತ್ಯಾಭ್ಯಾಸವನ್ನು ಮಾಡು ವಂತೆಯೂ ಮಾತೃಭಾಷೆಯಲ್ಲಿ ಬರೆಯುವಂತೆಯೂ ಪ್ರೇರೇಪಿಸಿದರು. ಅವರು ಈ ರೀತಿ ನನಗೆ ಮಾರ್ಗದರ್ಶಕರು ಆಗಿರದಿದ್ದರೆ ನನ್ನ ಕಾವ್ಯ ಪ್ರತಿಭೆಯು ಇಂಡೋ-ಇಂಗ್ಲಿಷ ಕವಿತೆಯ ಅರಣ್ಯದಲ್ಲಿಯೇ ಅಳಿದು ಹೋಗುತ್ತಿತ್ತೆಂದು ಖಂಡಿತವಾಗಿ ಹೇಳಬಲ್ಲೆ.

ಈ ಎಲ್ಲ ಘಟನೆಯಲ್ಲಿ A—ಅವರ ಕೈವಾಡವು ಅಷ್ಟಿಷ್ಟಲ್ಲ. ಅವರ ಮತ್ತು ನನ್ನ ಸಂಬಂಧವು ಗೆಳೆತನದಿಂದ ಪ್ರಾರಂಭವಾಯಿತು. ನನ್ನ ಚಿಕ್ಕ ವಯಸ್ಸಿನಲ್ಲಿ ನಾನು ಶ್ರೀ. ಬೇಂದ್ರೆಯವರ ಶಿಷ್ಯನಾಗಿದ್ದೆ. ಆಮೇಲೆ ನಾನು ಪ್ರೌಢದೆಶೆಗೆ ಬಂದಾಗ ಈ ನಮ್ಮ ಗುರು–ಶಿಷ್ಯ ಸಂಬಂಧವು ಗೆಳೆತನದಲ್ಲಿ ಮಾರ್ಪಟ್ಟಿತು

ಈ ಬೆಳವಣಿಗೆಯಲ್ಲಿ ಇನ್ನೊಂದು ವಿಶೇಷ ಸಂಗತಿ ಜರುಗಿತು. ' ಗುಂಪು ' ' ಜಯ ಕರ್ನಾಟಕ 'ದ ಕಾರ್ಯವನ್ನು ಕೈಕೊಂಡಾಗ ನಾನು

ಪದವೀಧರನಾಗಿದ್ದೆ. ಮೈಸೂರ ಮಹಾರಾಜಾ ಕಾಲೇಜಿನ ಕೆಲವು ತರುಣ ಕವಿಗಳ ಕೃತಿಗಳನ್ನೊಳಗೊಂಡ ' ತಳಿರು ' ಎಂಬ ಕವನಸಂಗ್ರಹವೊಂದು ವಿಮರ್ಶೆಗಾಗಿ ಬಂದಿತು. ಶ್ರೀ. ಬೇಂದ್ರೆಯವರು ವ್ಯಕ್ತಿಗಳಲ್ಲಿರುವ ಶಕ್ತಿಗಳನ್ನು ಕಂಡುಹಿಡಿದು ಅವುಗಳನ್ನು ಒಳ್ಳೇ ದಾರಿಯಲ್ಲಿ ವಿನಿಯೋಗವಾಗುವ ಹಾಗೆ ಮಾಡುವುದರಲ್ಲಿ ಚಾಣಾಕ್ಷರಾದ ಕಾರಣ, ನನ್ನನ್ನು ಆ ಪುಸ್ತಕದ ವಿಮರ್ಶೆ ಮಾಡಲು ಕೇಳಿದರು. ಇದರ ಪರಿಣಾಮವಾಗಿ ಆದರ ವಿಮರ್ಶೆ ಮತ್ತು ಅದೇ ರೀತಿಯ ಇತರ ವಿಮರ್ಶೆಗಳನ್ನೊಳಗೊಂಡ ಉದ್ದ ಲೇಖನಗಳು ಹೊರ ಬಿದ್ದವು. ಆ ಲೇಖನಗಳನ್ನು ಕೆಲವು ಜನರು ಹೊಗಳಿದರು, ಹಲವು ಜನರು ತೆಗಳಿದರು. ಅಂತೂ ನಾನು ವಿಮರ್ಶೆಯಲ್ಲಿ ಕೈಹಾಕಬಹುದೆಂದು ತಿಳಿದು ಅವರು ಆದರ ಸದುಪಯೋಗವಾಗಲು ಬಯಸುತ್ತಿದ್ದರು.

ಶ್ರೀ. ಬೇಂದ್ರೆಯವರು ನನ್ನನ್ನು, ನಾನು ಕವಿತೆ ಬರೆಯುತ್ತಿದ್ದೆನೆಂದಲ್ಲ, A—ಅವರ ಗೆಳೆಯನೆಂದು, ತಮ್ಮ ಮಂಡಳಿಯಲ್ಲಿ ಸೇರಿಸಿಕೊಂಡದ್ದರಿಂದ ನನ್ನ ಬೆಳವಣಿಗೆಯು ವೇಗವಾಗಿ ನಡೆಯಲಿಕ್ಕೆ ಆಸ್ಪದವಾಯಿತು. ನನಗೆ ಉಳಿದೆಲ್ಲ ' ಗುಂಪಿಗರ ' ಪರಿಚಯವಾಗಿ ನಾವೆಲ್ಲ ಗೆಳೆಯರಾದೆವು. ನಾನು ಹೆಚ್ಚು ಸ್ವತಂತ್ರವಾದ, ಹೆಚ್ಚು ವಿಶಾಲವಾದ ವಾತಾವರಣದಲ್ಲಿ ಉಸಿರಾಡಿಸ ಹತ್ತಿದೆ. ಎಲ್ಲರೂ ಸಂಪೂರ್ಣವಾಗಿ ಮೂಲತತ್ವಗಳನ್ನು ಒಪ್ಪದಿದ್ದರೂ ಮತ್ತು ವಿವಿಧ ಕಾರ್ಯರಂಗಗಳ ಬಗ್ಗೆ ಭಿನ್ನಾಭಿಪ್ರಾಯವಿದ್ದರೂ ಒಂದೇ ತರದ ವಿಚಾರವುಳ್ಳ ಸುಮಾರು ನಲವತ್ತು ಜನರ (ಅಸ್ಥಿರವಾದ ಸಂಖ್ಯೆ) ಜೀವದ ಗೆಳೆಯನಾಗಿರುವದೊಂದು ಅತಿ ವಿರಳವಾದ ಸುಸಂಧಿ. ಸಣ್ಣ ಸಣ್ಣ ಸಂಘಗಳು ಅಕ್ರಮವಾಗಿ ' ಗುಂಪಿ 'ನಲ್ಲಿ ಏರ್ಪಟ್ಟಿದ್ದರಿಂದ ಗೆಳೆತನವು ಇನ್ನಿಷ್ಟು ವಿಶಾಲವಾಗಿ ಹಬ್ಬಲು ಅವಕಾಶವಾಯಿತು. Flecker ಒಂದು ಸಾರೆ ಹೀಗೆ ಹೇಳಿದ: ಕಾವ್ಯದ ಕೆಲಸವು ಬರೇ ಆತ್ಮಗಳನ್ನುಳಿಸುವದಲ್ಲ; ಆದರೆ ಅವುಗಳನ್ನು ಉಳಿಯಲಿಕ್ಕೆ ಯೋಗ್ಯವಾಗಿ ಮಾಡುವದು. ' ಗುಂಪು ' ಬಹುಶಃ ನನ್ನ ಆತ್ಮವನ್ನುಳಿಸಿದೆ; ಆದರೆ ಅದು ಉಳಿಯಲು ಯೋಗ್ಯವಾಗುವ ಹಾಗಂತೂ ನಿಜವಾಗಿಯೂ ಮಾಡಿದೆ.

ನಾನು ಈ ಪ್ರಕರಣದಲ್ಲಿ ಅರೆಮನಸ್ಸಿನಿಂದ ನನ್ನ ವೈಯಕ್ತಿಕ ಜೀವನದ ಬಗ್ಗೆ ಬರೆದಿರುವದಕ್ಕೆ ಕಾರಣವೇನೆಂದರೆ, ಇದರಿಂದ ' ಗುಂಪು ' ಮಾಡಿದ

ಕಾರ್ಯದ ಒಂದು ಒಳನೋಟವನ್ನು ಅರಿತುಕೊಳ್ಳಲು ವಾಚಕರಿಗೆ ಹೆಚ್ಚು ಸುಲಭವಾಗುವದೆಂದು ವಿವಿಧ ವ್ಯಕ್ತಿಗಳ ವಿಶಿಷ್ಟವಾದ ಪರಿಸ್ಥಿತಿಗಳನ್ನನು ಲಕ್ಷಿಸಿ ನೋಡಿದರೆ, ನಾನು ಇದುವರೆಗೆ ಒತ್ತಿ ಹೇಳಿದ ಮಾತಿಗೆ ನನ್ನ ಗೆಳೆಯರೇ ಸಾಕ್ಷಿಯಾಗುವರೆಂಬುದರಲ್ಲಿ ನನಗೇನೂ ಸಂಶಯವಿಲ್ಲ.

೫

ಆದರೆ ಬರಬರುತ್ತ ಕೆಲವು ಮಹತ್ವಾಕಾಂಕ್ಷಿಗಳಾದ ಸದಸ್ಯರಿಗೆ ‘ ಗುಂಪಿ ’ನ ಈ ಮೂಲಭೂತವಾದ ಆದರೆ ಘಟನಾರಹಿತವಾದ ಜೀವನದ ಬಗ್ಗೆ ಅತೃಪ್ತಿಯುಂಟಾಯಿತು. ಈ ಒಣ ಮಾತುಕತೆ, ಗೆಳೆತನಗಳಿಗೆ ಅವರೊಂದು ವಾಸ್ತವಿಕವಾದ ರೂಪವನ್ನು ಕೊಡಲು ಬಯಸುತ್ತಿದ್ದರು. ಒಂದು ವೇಳೆ ನಮ್ಮ ಆದರ್ಶವು ಗೆಳೆತನವೇ ಆಗಿದ್ದರೆ ಅದನ್ನು ಸಂಪೂರ್ಣವಾಗಿ ಅನುಭವಿಸಬಾರದೇಕೆ ? ಈ ದಿಶೆಯಲ್ಲಿ ಇಂದಿಲ್ಲ ನಾಳೆಯಾದರೂ ಪ್ರಯತ್ನ ಮಾಡಲೇಬೇಕಾಗಿತ್ತು. ಈ ಒಂದು ಉದ್ದೇಶ ಸಾಧನೆಗಾಗಿ ‘ ಗುಂಪಿ ’ ನಲ್ಲಿದ್ದ ಕೆಲವು ಸಾಹಿತ್ಯನಿರ್ಮಾಣಶಕ್ತಿಯುಳ್ಳವರ ಮತ್ತು ವಿಧಾಯಕ ಕಾರ್ಯ ಮಾಡುವ ಯೋಗ್ಯತೆಯುಳ್ಳವರ ಸಹಾಯವನ್ನು ಪಡೆಯಬೇಕೆಂದು ವಿಚಾರ ಮಾಡಲಾಯಿತು. ಕಡೆಗೆ ‘ ಗುಂಪಿ ’ನ ವತಿಯಿಂದ ‘ ಜಯಕರ್ನಾಟಕ ’ ವನ್ನು ಪ್ರಾರಂಭಿಸಬೇಕೆಂದು ನಿರ್ಣಯಿಸಲಾಯಿತು

ಈ ನಿರ್ಣಯಕ್ಕಿಂತ ಮೊದಲೇ, ಎಲ್ಲ ‘ ಗುಂಪಿಗರ ’ ಆಸ್ತಿಗಳನ್ನು ಒಂದು ಕಡೆ ಕೂಡಿಸಿ. ಎಲ್ಲರ ಸಲುವಾಗಿ ಒಂದು ವಸತಿಗೃಹವನ್ನೇರ್ಪಡಿಸಿ, ಆಗಾಗ್ಗೆ ನಡೆಯುತ್ತಿದ್ದ ಸಂಭಾಷಣೆಗಳಿಗೆ ಮತ್ತು ಈ ಗೆಳೆತನಕ್ಕೆ ಒಂದು ಜೀವಕಳೆ ಕೊಡಬೇಕೆಂಬ ಪ್ರಯತ್ನ ನಡೆದಿತ್ತು. ಈ ರೀತಿ ಮಾಡುವದು ಅತ್ಯಾವಶ್ಯಕವಾಗಿತ್ತು. ಏಕೆಂದರೆ, ‘ ಗುಂಪಿ ’ನ ಸದಸ್ಯರಾಗಿದ್ದ ವಿದ್ಯಾರ್ಥಿಗಳು ತಮ್ಮ ಅಭ್ಯಾಸವನ್ನು ಶೀಘ್ರದಲ್ಲಿಯೇ ಮುಗಿಸಿ ಮುಂದೆ ವ್ಯಾವಹಾರಿಕ ಜೀವನದಲ್ಲಿ ಕಾಲಿಡುವವರಾಗಿದ್ದರು. ಈ ಸದಸ್ಯರು, ಮಾದರಿಯ ಒಂದು ಮಾಧ್ಯಮಿಕ ಶಾಲೆಯನ್ನಾಗಲೀ ಅಥವಾ ಒಂದು ಪತ್ರಿಕೆಯನ್ನಾಗಲೀ ನಡೆಸುತ್ತ ತಮ್ಮ ಜೀವನವನ್ನು ಸಾಗಿಸಬೇಕಾಗಿತ್ತು. ಆದರೆ ಇದರಲ್ಲೆಲ್ಲ ಮುಖ್ಯವಾದದ್ದೆಂದರೆ ಒಂದು ದೊಡ್ಡ ಮನೆಯಲ್ಲಿ ಎಲ್ಲರೂ ಕೂಡಿರುವದು, ಕೂಡಿ ಊಟ ಮಾಡುವದು, ಮತ್ತು ಎಲ್ಲಕ್ಕೂ ಹೆಚ್ಚಾಗಿ ಪ್ರತಿಯೊಬ್ಬ ಸದಸ್ಯನು

ತನ್ನ ಜೀವನದ ಉಸಿರೆಂದು ತಿಳಿದ ಆ ಸಂಭಾಷಣೆ ಮತ್ತು ಗೆಳೆತನದ ಉಚ್ಚ ಧ್ಯೇಯವನ್ನು ಪುಷ್ಟಿಗೊಳಿಸುವದು. ಆದರೆ, ಜೀವನದಲ್ಲಿ ಉದ್ಭವಿಸುವ ಅತಿ ಜಟಿಲವಾದ ಅಡೆತಡೆಗಳ ಕಾರಣವಾಗಿ ಈ ಆಕಾಂಕ್ಷೆಯು ಕಾರ್ಯರೂಪ ಕ್ಕಿಳಿಯಲಿಲ್ಲ. 'ಜಯಕರ್ನಾಟಕ'ವನ್ನು ಒಂದು ಸಂಸ್ಥೆಯಲ್ಲಿ ಮಾರ್ಪಡಿಸ ಬೇಕೆಂಬ ಅಭಿಲಾಷೆಯು ನಿಷ್ಫಲವಾದುದು ಇದೇ ಕಾರಣವಾಗಿ, ಇಂದು 'ಗುಂಪು' ತಾನು ಪ್ರಾರಂಭವಾದಾಗಿನ ಸ್ಥಿತಿಯಲ್ಲಿಯೇ ಇದೆ—ಒಂದು ವ್ಯವಸ್ಥಾರಹಿತ ಸಂಸ್ಥೆಯಾಗಿದೆ; ಅದರ ಸದಸ್ಯರು ಚೆಲ್ಲಾಪಿಲ್ಲಿಯಾಗಿದ್ದಾರೆ. ಆದರೆ ಅದರ ಸತ್ವವು ಮಾತ್ರ ವಿಚಿತ್ರವಾದದ್ದು: ಒಂದಿಬ್ಬರು ಸದಸ್ಯರು ಕಲೆಯುವದೊಂದೇ ತಡ ಅದು ತನ್ನ ಕೆಲಸ ಪ್ರಾರಂಭಿಸುತ್ತದೆ! ಮತ್ತು ಪ್ರತಿಯೊಬ್ಬ ವ್ಯಕ್ತಿಯು, ದೈವವು ಆತನನ್ನು ಯಾವ ಸ್ಥಿತಿಯಲ್ಲಾದರೂ ಬಿಟ್ಟರೂ, ತನ್ನದೊಂದು ಹೊಸ 'ಜಗತ್ತನ್ನು' ಸೃಷ್ಟಿಸಿಕೊಂಡಿದ್ದಾನೆ. 'ಗುಂಪಿಗರು' ತಮ್ಮ ಜೀವನೋಪಾಯವನ್ನು ಸಾಗಿಸಲು ಬೇರೆ ಬೇರೆ ಹಾದಿಯಲ್ಲಿ ನಡೆದಿರುವ ಕಾರಣ, ಈ ಸಂಭಾಷಣೆಯೂ ಚದರಿದುದಾಗಿಯೂ, ಅಷ್ಟು ಸಾಮೂಹಿಕವಲ್ಲದ್ದಾಗಿಯೂ ಆಗಿದೆ.

ಆದರೆ, ಯಾವುದೇ ತರದ ಒಂದು ವಿಧಾಯಕ ಕಾರ್ಯವನ್ನು ನಡೆಸ ಬೇಕೆಂಬ ಉತ್ಕಟೇಚ್ಛೆಯುಳ್ಳವರು 'ಗುಂಪಿ'ನಲ್ಲಿ ಸಣ್ಣ ಸಣ್ಣ ಆದರೆ ವ್ಯವಸ್ಥಿತವಾದ ಕಾರ್ಯರಂಗಗಳನ್ನೇರ್ಪಡಿಸಿಕೊಂಡಿದ್ದಾರೆ. ಕೆಲವು ಜನ ಉತ್ಸಾಹಿಗಳಿಗೆ 'ಜಯಕರ್ನಾಟಕ' ಕಾರ್ಯರಂಗವಾಗಿದೆ. ಇತರರು 'ಮನೋಹರ ಗ್ರಂಥಮಾಲೆ'ಯನ್ನು ಪ್ರಾರಂಭಿಸಿದ್ದಾರೆ. ಈ ಎಲ್ಲ ವಿಧಾಯಕ ಪ್ರಯತ್ನಗಳಿಗೆ 'ಗುಂಪೇ' ಹಿನ್ನೆಲೆಯೆಂದು ಬೇರೆ ಹೇಳಬೇಕಾಗಿಲ್ಲ.

೬

ಈ ರೀತಿಯಾಗಿ 'ಗುಂಪಿಗರ' ಗೆಳೆತನವು ಸಾಕಾರ ರೂಪವನ್ನು ತಾಳಲು ಇನ್ನೂ ಒಪ್ಪಿಕೊಂಡಿಲ್ಲ. ಬಹುಶಃ ಅದು ತನ್ನ ಶೋಧಕನಿಗೆ ಆಗಾಗ್ಗ ಒಂದೊಂದು ದರ್ಶನವನ್ನು ದಯಪಾಲಿಸುತ್ತ, ಅವನ ಹಿಡಿತದಿಂದ ತಪ್ಪಿಸಿಕೊಳ್ಳುವಂಥ ಒಂದು ಕನಸಾಗಿಯೇ ಉಳಿಯಬಹುದು. ಆದರೆ 'ಗುಂಪಿ'ನ ಸಾಹಿತ್ಯಾಭಿರುಚಿಯುಳ್ಳ ಸದಸ್ಯರ ಮೇಲೆ ಅದರ ರಚನಾತ್ಮಕ ವಾದ ಪರಿಣಾಮವು ಬಹಳೇ ಫಲಕಾರಿಯಾಗಿದೆ. ಅವರ ಕೃತಿಗಳು ಎಷ್ಟೋ

ಅಪೂರ್ವವಾದ ಲಕ್ಷಣಗಳಿಂದ ಕೂಡಿದ್ದ ಕಾರಣ ಅವುಗಳನ್ನಿಲ್ಲಿ ಕಾಣಿಸುವದು ಯೋಗ್ಯವಾಗಿದೆ.

ಕರ್ನಾಟಕದ ಇತರ ಪ್ರಸಿದ್ಧ ಲೇಖಕರಂತೆ ಇವರೂ ಸಾಹಿತ್ಯದ ಪ್ರೌಢವಾದ ಅಂಗಗಳಲ್ಲಿ ಕೆಲಸಮಾಡಿದ್ದಾರೆ. ಕವಿತೆ, ಕಾದಂಬರಿ, ನಾಟಕ, ಪ್ರಬಂಧ, ವಿಮರ್ಶೆ, 'ವಿಖ್ಯಾಪನೆಗಳು' ಮತ್ತು ಇನ್ನಿತರ ವಿಷ್ಟೋ ಸಾಹಿತ್ಯಾಂಗಗಳಲ್ಲಿ ತಮ್ಮ ಕೈಚಳಕವನ್ನು ತೋರಿಸಿದ್ದಾರೆ. ಬಡತನ, ರಾಷ್ಟ್ರೀಯತೆ, ಸೌಂದರ್ಯ, ಮತ್ತು ಭೀಕರತೆಗಳನ್ನು ಚಿತ್ರಿಸುವಂಥ ಕಾವ್ಯವು ಬಹುಶಃ ಕರ್ನಾಟಕದ ಇತರ ಎಲ್ಲ ಕವಿಗಳ ಕಾವ್ಯಕ್ಕಿಂತಲೂ ಹೆಚ್ಚು ಸ್ಫೂರ್ತಿಯುಕ್ತವಾಗಿ, ಶ್ರೀ. ಬೇಂದ್ರೆಯವರ ಲೆಕ್ಕಣಿಕೆಯಿಂದ ಹೊರಬಿದ್ದಿದೆ. ಅವರು ಆಧ್ಯಾತ್ಮಿಕ ಪುನರುಜ್ಜೀವನದ ದಾರಿಯನ್ನು ಬಹಳ ಉತ್ಸುಕತೆಯಿಂದ ನೋಡುತ್ತಿದ್ದರೂ ಕಾಲನ ಕ್ರೂರ ಕೃತ್ಯವನ್ನು ಎಂದಿಗೂ ಮರೆಯಲಾರರು; ಪ್ರಳಯಾಂತಕವಾದ ರಕ್ತಪಾತವು ವಿಜಯನಗರದಂಥ ತೇಜೋಪುಂಜ ಸಾಮ್ರಾಜ್ಯವನ್ನೂ ನುಂಗಿ ನೀರು ಕುಡಿಯಬಹುದು:

ಹಾಳುಗಳ ಹೊರವೊಳಗೆ ಹಾಳುಗಳ ಸಾಲುಗಳು
ಬೀಳುಗಳ ಬದಿಬದಿಗೆ ಬೀಳುಗಳ ಬಾಳುಗಳು
ಕಾಳರಕ್ಕಸನ ಕಡೆಕೂಳು—ಬಾಳಕವಾದ
ನಾಡ ನಡುಮನೆಯ ಕಂಡೆ

'ಕಾಲಪಕ್ಷಿ'ಯನ್ನು ಕುರಿತು ಬರೆದ ಕವನದಲ್ಲಿ ಶ್ರೀ ಬೇಂದ್ರೆಯವರು ಎಂಥ ವಿಶಾಲ ದೃಷ್ಟಿಯ ಕವಿಗಳೆಂಬುದು ಕಂಡುಬರುತ್ತದೆ. ಜನಪದಸಾಹಿತ್ಯದ ಪುನರುಜ್ಜೀವನವು 'ಗರಿ'ಗರ' ಮತ್ತು ಅದರಲ್ಲಿಯೂ ವಿಶೇಷವಾಗಿ ಶ್ರೀ ಬೇಂದ್ರೆಯವರ ಕೃತಿಗಳ ಮೇಲೆ ಎಂದಿಗೂ ಅಳಿಯದಂಥ ಪರಿಣಾಮವನ್ನು ಬೀರಿದೆ. ಶ್ರೀ. ಬೇಂದ್ರೆಯವರು ಸೊಗಸಾಗಿ ಉಪಯೋಗಿಸುವ ಆಕರ್ಷಕವಾದ ಆ ಹಳ್ಳಿಯ ದಾಟಿಗಳನ್ನೂ, ಜನಸಾಮಾನ್ಯರ ಹೃದಯಾಂತರಾಳದಿಂದ ಹೊರಟ ಆ ಭಾಷೆಯನ್ನೂ ನೋಡಿದರೆ, ಅವರು ಆಧುನಿಕ ಕನ್ನಡ ಕಾವ್ಯಲೋಕದಲ್ಲಿ 'ಉತ್ತರದ ಮಾಂತ್ರಿಕ'ರೆಂದು ಧೈರ್ಯವಾಗಿ ಹೇಳಬಹುದು. ಇದು, ಬಿಷಪ್ ಪರ್ಸಿಯು ತಾನು ಸಂಗ್ರಹಿಸಿದ 'Reliques' ನಿಂದ ತಾನೇ ಸ್ಫೂರ್ತಿ ಪಡೆದಂತಾಯಿತು.

'ಆನಂದಕಂದ'ರ ಶಿಶುಗೀತೆಗಳು ತಮ್ಮದೇ ಆದ ರಮಣೀಯತೆ ಯಿಂದ ಕೂಡಿವೆ. ಮತ್ತು ಅವುಗಳು ಶ್ರೀ. ಬೇಂದ್ರೆಯವರ 'ಕರುಳಿನ ವಚನ'ಗಳಿಗೆ ಪೂರಕವಾಗಿವೆ. ಕೆಲವು 'ಗುಂಪಿಗರ' ತಾತ್ವಿಕ ಕವನಗಳಲ್ಲಿ ಇನ್ನೊಂದು ವಿಶಿಷ್ಟವಾದ ಸ್ವರವು ಧ್ವನಿತವಾಗಿದೆ ಶ್ರೀ. ಬೇಂದ್ರೆಯವರು ಈ ದಿಶೆಯಲ್ಲಿ ಕೆಲವು ಕಾಲ ಕೆಲಸ ಮಾಡಿದರು. ಆದರೆ, ವಾಸ್ತವಿಕತೆಯನ್ನು ತಿಳಿಯಬೇಕೆಂಬ ಅವರ ಉತ್ಕಟೇಚ್ಛೆಯನ್ನು ಹೆಚ್ಚು ಕಾಲದ ವರೆಗೆ ಈ ಕನಸಿನ ಮನೆಯಲ್ಲಿ ಬಂಧಿಸಿಡುವದು ಶಕ್ಯವಿದ್ದಿಲ್ಲ. ಈ ದಿಶೆಯಲ್ಲಿ 'ನನ್ನ ನಲ್ಲ'ದ ಚೆನ್ನಮಲ್ಲರು ವಿಶಿಷ್ಟ ರೀತಿಯ ಸಾಧಕರಾಗಿದ್ದಾರೆ. ಅಂಥ ಕವಿತೆ ಯನ್ನು ಮೆಚ್ಚುವವರಿಗೆ ಅದರ ಮಹತ್ವವು ಅಷ್ಟಿಷ್ಟಲ್ಲ. ಕಾಲ್ಪನಿಕವಾದ ಧ್ಯಾನಕ್ಕೆ ಜಗತ್ತಿನ ಸಪ್ತವರ್ಣಗಳನ್ನು ವಶಪಡಿಸಿಕೊಳ್ಳುವದು ಅಸಾಧ್ಯ ವಾಗಬಹುದು; ಆದರೆ ಅನಂತತೆಯ ಶುಭ್ರಕಾಂತಿಯ ಹೃದಯದಲ್ಲಿ ಅದು ಸದಾ ವಾಸವಾಗಿರುತ್ತದೆ.

ಗೆಳೆತನವನ್ನು ಚಿತ್ರಿಸುವಂಥ 'ಗುಂಪಿಗರ' ಎಷ್ಟೋ ಕವನಗಳು ಇಂದು ಅಪ್ರಕಾಶಿತವಾಗಿ ಉಳಿದಿವೆ. 'ಗುಂಪಿ'ನ ವಾತಾವರಣದ ಪರಿ ಣಾಮವು ಯಾರ ಮೇಲೆ ಆಗಿಲ್ಲವೋ ಅವರು ಇಂಥ ಕವನಗಳನ್ನು ಬರೆ ಯುವದು ಶಕ್ಯವಿಲ್ಲ. ಎರಡು ಕೃತಿಗಳು ಬೆಳಕಿಗೆ ಬಂದಿವೆ,—ಚೆನ್ನಮಲ್ಲರ 'ಮಧುರ ಗೀತೆ' ಮತ್ತು ಬೆಳಗಾಂವಕರ ಅವರ 'ಭಾವದೇವಿ'

ಎಷ್ಟೋ ಜನ 'ಗುಂಪಿಗ'ರನ್ನು ಪ್ರೇರೇಪಿಸುವ ಒಂದೇ ಒಂದಾದ ವಿಶ್ವಾಸವನ್ನು ಚೆನ್ನಮಲ್ಲರು ತಮ್ಮ 'ಮೌನ ಕೋಕಿಲೆ'ಯಲ್ಲಿ ಬಹಳ ಸ್ವಾರಸ್ಯವಾಗಿ ವ್ಯಕ್ತಪಡಿಸಿದ್ದಾರೆ

ಮನುಷ್ಯನು, ಸತತೋದ್ಯೋಗವುಳ್ಳ ಜೀವನ-ನಿರ್ಮಾಣವು ಕಲಾ ನಿರ್ಮಾಣಕ್ಕಿಂತ ಹೆಚ್ಚು ಅವಶ್ಯಕವಾದುದೆಂಬ ನೈಜವನ್ನು ಅರಿತುಕೊಳ್ಳು ವದರಲ್ಲಿ ತಪ್ಪು ಹೆಜ್ಜೆಯನ್ನಿಡುತ್ತಾನೆ. ಶೋಧಕನ ದೃಷ್ಟಿಯು ಕಲೋಪಾಸಕನ ದೃಷ್ಟಿಗೆ ಪೂರಕವಾಗಿರಬೇಕು. ಜೀವನಯಾತ್ರೆಯು ಕಲಾಮಂದಿರದಿಂದ ಚೈತನ್ಯಭವನದ ವರೆಗೆ, ಮತ್ತು ಆಮೇಲೆ ರಹಸ್ಯದಾಗಸಕ್ಕೆ ಚೈತನ್ಯಕ್ಕಾಗಿ, ಹೆಚ್ಚಿನ ಚೈತನ್ಯಕ್ಕಾಗಿ. ಈ ಹಾತೊರೆಯುವಿಕೆಯೇ 'ಗುಂಪಿ'ನ ತತ್ವ ಬೋಧನೆಯ ತಿರುಳೆಂದು ನನಗನಿಸುತ್ತದೆ. 'ನನ್ನ ನಲ್ಲ' ಮತ್ತು ಬೇಂದ್ರೆ

ಯವರ ' ಬಾಳ ಕರವಾಳ ' ಇವುಗಳು ತಪ್ಪದೆ ಜೀವನ-ತತ್ವವನ್ನು ಪುಷ್ಟೀಕರಿಸುತ್ತವೆ.

ಇದೊಂದು, ಮಹಾಕಾವ್ಯದ ಪರ್ವದ ಆರಂಭದಲ್ಲಿ ತಲೆಯೆತ್ತುವಂಥ ಕಥಾಸಾರ ನಾನು ಇದುವರೆಗೆ ಹೇಳಿದುದರಲ್ಲಿ ಸತ್ಯದಷ್ಟು ವಾಸ್ತವಿಕವಾಗಿಯೂ ಸ್ಪಷ್ಟವಾಗಿಯೂ ಹೇಳಿದ್ದೇನೆ. ಇನ್ನು ನ್ಯಾಯಬುದ್ಧಿಯಷ್ಟು ನಿಸ್ಸಂಕೋಚವಾಗಿಯೂ ನಿಷ್ಪಕ್ಷಪಾತವಾಗಿಯೂ ವಿಚಾರಿಸುವದು ವಾಚಕರನ್ನೇ ಕೂಡಿದೆ

**ಅನುವಾದಕರು : ನರಸಿಂಹ ಮುದರಕಲ್, ಹೈದರಾಬಾದ (ದಕ್ಷಿಣ)**

[ ಜುಲೈ ೧೯೩೩ರಲ್ಲಿ ಬರೆದ ಲೇಖನ. ]

---

# ಅಣ್ಣನ ಕಾರ್ಯ

**' ಮಧುರಚೆನ್ನ ', ಹಲಸಂಗಿ**

ನಾಡಿನ ನಾಡಿಯನ್ನು ಹಿಡಿದು ಅದರ ಜೀವಜೀವಾಳವನ್ನು ತಮ್ಮ ಹಾಡಿನಲ್ಲಿಯೂ ಪಾಡಿನಲ್ಲಿಯೂ, ವೈಯಕ್ತಿಕವಾಗಿಯೂ ಸಾಂಘಿಕವಾಗಿಯೂ ಪಡಿಮೂಡಿಸಿ ನಾಡಿನ ಮೇಲ್ಮೆಯನ್ನು ಸಾಧಿಸಲು ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಹವಣಿಸಿದವರು ಅಣ್ಣ ಬೇಂದ್ರೆಯವರು.

' ಜೈನವಾಙ್ಮಯ ಮಧುವೆ ವಚನ ಬ್ರಹ್ಮನ ವಧುವೆ, ಮುದ್ದು ವಿಠಲಗೆ ಮಾರಿಕೊಂಡ ದಾಸಿ ' ಎಂದು ಕನ್ನಡ ಕಾವ್ಯದೇವಿಯ ಸನಾತನ ರಹಸ್ಯವನ್ನು ಸಾಕ್ಷಾತ್ಕರಿಸಿಕೊಂಡು ' ಶರಣರ ದಾಸರ ಕರುಣೆ ಕಿರಣಿಸುವಂತೆ ಕೂಗುವಿಯಾ ಹೇಳು ಕೋಗಿಲೆ ' ಎಂದು ಅಂಬಿಕಾತನಯನ ನಂಬುಗೆಗಿಂಬಾದ ನಿಜಗುಣದಲಿ ಬೆರೆತ (ತಮ್ಮ ಕಾವ್ಯ) ಕೋಗಿಲೆಗೆ ಕೇಳಿದರು ಈ ಅಣ್ಣ.

' ಮಾನ್ಯ ವಾಲ್ಮೀಕಿಯಂತೆ ಧನ್ಯ ಶುಕನೊಲು ಹಾಡು ಪುಣ್ಯಕಾವ್ಯವು

ಹಾಡೆ? ಕೋಗಿಲೆ ! ' ಎಂದು ಆದಿಕಾಲದಿಂದ ನಮ್ಮ ನಾಡು-ನಾಡುಗಳ ನರ-ನರದಲ್ಲಿ ನೆರೆಯಾಗಿ ಹರಿಯುತ್ತಿರುವ ಭಾರತದ ಹಿರಿಗುರಿಯನ್ನು ಸಾಧಿಸಲು ಹೊರಟರು ತಮ್ಮ ಕವಿತೆಯಲ್ಲಿ, ಕೃತಿಯಲ್ಲಿ; ವೈಯಕ್ತಿಕವಾಗಿ, ಸಾಂಘಿಕವಾಗಿ.

ಬಿತ್ತಿದರೆ ಬಿತ್ತುವುದು ಮುಕ್ಕು ಚಿಕ್ಕೆಯ ಕಾಳು, ಮುತ್ತು ರತುನವ ಬಿತ್ತಿ ಮಾಡದಿರು ಹೊಲ ಹಾಳು; ಜೀವವನು ಚಾಚಿ ಮುಗಿಲಂಗಳಕೆ ಹಚ್ಚಿ, ದೇವನೊಡನುಡಿವಂತೆ ಮಾಡು ಮೆಚ್ಚಿ; ಏಳು ಮಲಗಿದೆಯೇಕೆ ಶರಣನಾಡೇ! ಎಂದು ತಮಗೆ ಸನಾತನ ಕಾವ್ಯದೇವಿ ಸಂದೇಶ ಬೀರಿದಳೆಂದು ಭಾವಿಸಿದರು ಈ ಅಣ್ಣ.

ಆದುದರಿಂದ ಅಂದಿನಿಂದಲೂ ಅಣ್ಣ,

' ಆದಯರಿದ್ದವರೆಲ್ಲ ಸದಯರಾಗುವಂತೆ,
' ವ್ಯೋಮ ಮಂಡಲ ಸುಖಧಾಮವಾಗುವಂತೆ
' ಶರಣರ ದಾಸರ ಕರುಣೆ ಕಿರಣಿಸುವಂತೆ
' ತನ್ನ ತನವನ್ನರಿತು ಭಿನ್ನ ಭಾವವ ಮರೆತು ಕನ್ನಡನಾಡ ಚೆನ್ನರೇಳುವಂತೆ '

ಹಾಡಿನಲ್ಲಿ ನಡೆಯಲ್ಲಿ ನುಡಿಯಲ್ಲಿ ತಮ್ಮೊಬ್ಬರ ಮಟ್ಟಿಗಲ್ಲದೆ ಗುಂಪುಕಟ್ಟಿಕೊಂಡು ತಮ್ಮ ವಾಣಿಯನ್ನು ಗದ್ಯದಲ್ಲಿ ಪದ್ಯದಲ್ಲಿ, ಮಾತಿನಲ್ಲಿ ಕೃತಿಯಲ್ಲಿ ಪಡಿಮೂಡಿಸುತ್ತ ಬಂದರು.

ಅವರ ಈ ಮಾತಿಗೆ ಸಾಕ್ಷಿಯಾಗಿ ಅವರದೇ ಒಂದು ಪತ್ರದ ಕೆಲವಂಶವನ್ನು ಇದರಡಿಯಲ್ಲಿ ಕೊಟ್ಟು ಅವರ ಗುರಿಯನ್ನೂ ಅದನ್ನು ನೆರವೇರಿಸುವ ಬಗೆಗೆ ಎಂದಿನಿಂದಲೂ ಅವರಿಗಿದ್ದ ಹಿರಿ ಹಂಬಲವನ್ನೂ ಮನಗಾಣಿಸಿ ಕೊಡುವೆನು.

ಸಿಕಂದ್ರಾಬಾದ
ಶ್ರೀ ವ. ೩೦. ರಕ್ತಾಕ್ಷಿ
( ೨—೬—೧೯೨೪? )

" ಒಲವಿನೊಲವೆ, ನಮ್ಮ ಗುಂಪಿಗೀಗ ಸಂದಿನ ದಿವಸಗಳು ಬಂದಿರುವವು. ನಾನು ಬಲ್ಲೆ, ' ಗೆಲವಿಹುದು '! ಆದರೆ? ಆದರೇನು? ' ದೇವನಲ್ಲಿ ನಿವೃತ್ತಿ ' ಇದೊಂದೇ ಉಪಾಯ! ....... ...ಭೋಗಲಂಪಟವಾದ ಕನ್ನಡ ನಾಡನ್ನು ಬಸವ ಅಲ್ಲಮಾದಿ ಕಾರಣಿಕರು ' ದೇವನಲ್ಲಿ ನಿವೃತ್ತ 'ರಾಗಿ

ಆಮೇಲೆ ದೇವನಿಂದ ಪ್ರವೃತ್ತರಾಗಿ ಉದ್ಧರಿಸಿದರು ಒಕ್ಕಟ್ಟಿಲ್ಲದೆ ಇಕ್ಕಟ್ಟಿನಲ್ಲಿ ಬಿದ್ದಿದ್ದ ಕಾರ್ಯ ಪರಾಙ್ಮುಖ ಕರ್ನಾಟಕವನ್ನು ಧುರಂಧರ ಮಾಡಲು ಮಧ್ವ ವಿದ್ಯಾರಣ್ಯಾದಿಗಳು ಆ ಮಾರ್ಗವನ್ನೇ ಅನುಸರಿಸಿದರು. ವ್ಯವಹಾರಲೋಲುಪರಾದ ಕನ್ನಡಿಗರನ್ನು ದಾಸಕೂಟದವರು ಮತ್ತೆ ಅದೇ ರೀತಿಯಿಂದ ಮೇಲಕ್ಕೆತ್ತಿದ್ದರು. ಹೀಗೆ ೧೩-೧೪-೧೬ ಶತಮಾನಗಳಲ್ಲಿ ಮೂರು ಸಲದ ಧರ್ಮಗ್ಲಾನಿಯನ್ನು ಕರ್ನಾಟಕದ ಸೀಮಾ ಪುರುಷರು ಕನ್ನಡದವ್ವನ ಪವಾಡ ಪುರುಷರು ಹೀಗೆ ಹೋಗಲಾಡಿಸಿದರು. ೧೮ನೆಯ ಶತಮಾನದಲ್ಲಿ ಚಿಕದೇವರಾಯನು ಅಂಥದೇ ಒಂದು ಪ್ರಯತ್ನ ಮಾಡಿದನು. ಅದು ಅಷ್ಟು ಫಲಕಾರಿಯಾಗಲಿಲ್ಲ ... ...ಮತ್ತೂ ಲೀಲೆಯ ರಂಗಸ್ಥಳವು ಮಹಾರಾಷ್ಟ್ರಕ್ಕೆ ಹೋಯಿತು. ಇದು ೨೦ನೆಯ ಶತಮಾನ. ಈ ಸಲ ನಾವು ಇಮ್ಮಡಿ ಹುರುಪಿನಿಂದ ಶುದ್ಧ ಪ್ರೇರಣೆಯ ಮಂದಾಕಿನಿಯನ್ನು ಭೂಲೋಕಕ್ಕೆ ಭಾಗೀರಥಿಯಾಗಿ ತರಲಿಕ್ಕೆ ಬೇಕು. ಇದಕ್ಕೆ ದೇವನಲ್ಲಿ ನಿವೃತ್ತಿಯು ಸಂಪೂರ್ಣವಾಗಲಿಕ್ಕೆ ಬೇಕು. ಆಮೇಲೆ ಅಪೂರ್ವ ಪ್ರವೃತ್ತಿ, ಅಪೂರ್ವ ಲೀಲೆ. ಹೀಗೆ ನಾವು ನಿವೃತ್ತಿ ಪ್ರವೃತ್ತಿಗಳ ಸವ್ಯಸಾಚಿತ್ವದಿಂದ ಧನುರ್ಧರರಾಗುತ್ತಲೆ ನಮ್ಮಲ್ಲಿಯೇ ಅಲ್ಲವೇ ಯೋಗೇಶ್ವರ ? ಆಮೇಲೆ ಶ್ರೀಯೂ ವಿಜಯವೂ ವಶ್ಯೆಯಂತೆ ಬೆಂಬತ್ತಿ ಬರುವವು. ಜೀವ ಬಂಧುವೆ, ಇದು ನಮ್ಮಿಂದಾದೀತೆ ? .... ...ಈ ನಿವೃತ್ತಿಯ ಪ್ರತಿಷ್ಠೆಯನ್ನು ಮಾಡೋಣ ! ಇದಕ್ಕಾದರೂ ಅವನ ಕೃಪೆ ಬೇಕು ! ಸತಿಯು ಭಿಲ್ಲತಿಯಾಗಿ ಪತಿಯಾದ ಪರಮೇಶ್ವರನನ್ನು ನರ್ತನ ಮಾಡಿ ಗೆದ್ದಳಂತೆ 'ದೇವನು ಭಕ್ತಿಲಂಪಟನೆಂದು' ಭಕ್ತರು ಒಳಗುಟ್ಟು ಹೇಳಿರುವರು. ಒಲವೇ, ಈ ಭಕ್ತಿಯನ್ನು ಕಲಿಸುವ ಕಲಾವಿದರಾದ ಸಂತರ ಭೆಟ್ಟಿಯಾದೀತೇ ? ಗೆಳೆಯರ ಗುಂಪು ಈ ಭಕ್ತಿಯ ಅಗ್ನಿಹೋತ್ರದ ವೇದಿಕೆಯಾಗಬೇಕು. ಆಗ ದೇವನು ಪ್ರತ್ಯಕ್ಷನಾಗಿ ಬಂದು ಹೇಳಿದ್ದೇ ನಮ್ಮ ಕಾರ್ಯ. ಒಲವೇ, ಈ ಜನ್ಮದಲ್ಲಿ ನಮ್ಮಿಂದಿದು ಆದೀತೇ ? ಬಿಡು ಯಾವ ಜನ್ಮದಲ್ಲಾದರೂ ಆ ಜನ್ಮವೇ ಧನ್ಯ ! ಆ ಜನ್ಮವೇ ಧನ್ಯ ! ..........

"ನಾನೆಲ್ಲ ಗೆಳೆಯರಿಗೆ ಬೇಡಿಕೊಳ್ಳುವುದಿಷ್ಟೆ—ಯಾರಾದರೂ ಈ ನಿವೃತ್ತಿ ಪಥದಲ್ಲಿ ಅತ್ಯುತ್ಕಟ ತೀವ್ರತೆಯಿಂದ ಮುಂದುವರಿಯಿರಿ; ಮತ್ತೆ ಹಿಂದುಳಿದವರನ್ನು ಹೊರಗೆಳೆಯಿರಿ. ಯಾಕೆ ? ನಾವು ಗುಂಪೆಂದು ... .......

ನಾವು ಪಾತ್ರವಾಡಬೇಕಾದ ಲೀಲೆಯು ನಮಗೆ ಸುತ್ತುಮುತ್ತಲೂ, ಮೇಲು ಕೆಳಗೂ, ಒಳಗು ಹೊರಗೂ ಕಾಣುತ್ತಿಲ್ಲ ನಮ್ಮದೂ ಲೀಲಾ ಸೂತ್ರಧಾರಿ ಯದೂ ಬೆಟ್ಟಿಯಾಗಿಲ್ಲ. ನಮ್ಮ ಪಾತ್ರದ ವೇಷಭಾಷೆಯ ತಿಳಿಯರಿವು ನಮ ಗಿನ್ನೂ ಆಗಿಲ್ಲ. ಇದೇ ಬಂದ ಬಿಗಿ. ನಿವೃತ್ತಿಯ ಕಡೆಮೆಟ್ಟಿಗೆ ಮುಟ್ಟುವ ವರೆಗೆ ಈ ತಿಳಿಯರಿವು ಆಗುವಂತಿಲ್ಲ. ಈ ಪೂರ್ವದಲ್ಲಿ ನಮ್ಮಲ್ಲಿ ಆವಿರ್ಭವಿ ಸಿದ ಶಕ್ತಿಯೆಂದರೆ ಈ ಭಕ್ತಿಲಂಪಟನಾದ ಭಗವಂತನು ಕಣ್ಣು ಚಿವುಟಲು ನಮ್ಮಲ್ಲುಂಟಾದ ವಿಲಾಸ ವಿಭವೋನ್ಮಾದದ ಝಳುಕು. ಅವನು ಕಣ್ಸನ್ನೆ ಮಾಡಿ ಹೋಗಿದ್ದಾನೆ. ಇದು ನಮಗೆ ಗೊತ್ತು, ಅವನಿಗೆ ಗೊತ್ತು. ಹಗಲಿರುಳು ಅವನನ್ನೇ ಹುಡುಕಿ, ಕಂಡು ಕೂಡುವ ವರೆಗೆ ನಾವು ದಣಿವಾರಿಸಿಕೊಳ್ಳಲಾ ಗದು. ನಮ್ಮ ಗುಂಪಿಗೆ ಗುಂಪನ್ನೆಲ್ಲ ಆವರಿಸಿದ ಚಿಂತೆಯು ಆ ವಿರಹದ ಬಾಹ್ಯ ಚಿಹ್ನವಾಗಿದೆ. ಹರಿಹರನ ಪಂಪಾಶತಕವನ್ನೋದಿರುವಿಯಲ್ಲವೇ ? ಆ ವ್ಯಾಕುಲತೆ ನಮ್ಮಲ್ಲಿ ಬೇಕು. ಬಸವನ ವಚನದಲ್ಲಿಯ ವ್ಯಾಕುಲತೆ ನಮ್ಮಲ್ಲಿ ಬೇಕು. ವಾಸುದೇವಾ ! ವಿಠಲಾ ! ಒಡೆಯಾ ! ಇತ್ತ ನೋಡೋ ! ! ಎಂದು ಆರ್ತತೆಯಿಂದ ಒದರಿದ ದಾಸರಾಯರ ವ್ಯಾಕುಲತೆ ಬೇಕು. ಈ ವ್ಯಾಕುಲತೆ ಯನ್ನು ಯಾರಾದರೂ ನನ್ನಲ್ಲುಂಟುಮಾಡಿದರೆ ಅವರ ದಾಸಾನುದಾಸನು ನಾನಾಗುವೆನು. ಯಾಕೆ ? ಭಗವಂತನ ಹೊರತು ಈ ವ್ಯಾಕುಲತೆಯನ್ನುಂಟು ಮಾಡುವ ಶಕ್ತಿ ಯಾರಲ್ಲಿಯೂ ಇಲ್ಲವೆಂದು............ಪ್ರತಿಯೊಂದು ಜೀವವು ಗರ್ಭಿತವಾಗಿ ಅವತಾರಿಯಾಗಿದೆ. ಅದರ ಒಂಬತ್ತು ತಿಂಗಳನ್ನು ತುಂಬಿಸು ವದೇ ಯೋಗ. ಅಂದಿನಿಂದಲೇ ಕಾರ್ಯಕ್ಕೆ ಪ್ರಾರಂಭ, ಜೀವನದ ಆರಂಭ. 'ಅಮರಸ್ಯ ಪುತ್ರಾಃ' ಎಂದು ಶ್ರುತಿಯು ಸಂಬೋಧಿಸಿದ್ದು ಅಂಥವರಿಗೆ. ಈ ಸಂಬೋಧನವು ಮುಗಿಲ ಮಲ್ಲಿಗೆಯಂದದ ಕುಸುರಿನ ಮಾತಲ್ಲ. ಅಂಥ ಜೀವನವಿದೆ. ಅದನ್ನು ಕಂಡು ಫಲವಿಲ್ಲ, ಉಂಡು ಫಲವಿದೆ ಜಗಜ್ಜೈತ್ರ ಸಾಮ್ರಾಟರೂ ದಿಗಂತಕೀರ್ತಿಯ ಕವಿಗಳೂ ಕಲಾವಿದರೂ ಅವಿದಿತ ಕೀರ್ತಿಯ ಸಂತ ಸಜ್ಜನರೂ ಹೆಚ್ಚುಕಡಿಮೆ ಆ ಜೀವನವನ್ನುಂಡವರಾಗಿ ದ್ದಾರೆ. ಶ್ರೀ. ಅರವಿಂದರೂ, ರವೀಂದ್ರರೂ, ಮಹಾತ್ಮರೂ ಆ ಮಾಲೆಯೊಳ ಗಿನವರು. ವಿವೇಕಾನಂದರೂ ರಾಮಕೃಷ್ಣರೂ ಆ ಮಾಲೆಯೊಳಗಿನವರು.... ........ಇದು **ಪಡೆಯುವುದು** ಅಂದರೆ **ಹಡೆಯುವುದು**. ಹಡೆಯುವದೆಂದರೆ ಯಾವ ಭಾಗಕ್ಕೆ ಯಾವ ವ್ಯಥೆಗಳಿಗೆ ಯಾತನೆಗಳಿಗೆ ಈಡಾಗುವದೆಂಬುದನ್ನು

ನೀನು ಕೇಳಿ ಬಲ್ಲೆ. ಹೆಂಗಳಿಗೆ ಅದು ಮರಣ, ಅಥವಾ ಹೊಸ ಆನಂದದ ಜೀವನ. ಪಡೆಯುವದೂ, ಪಡೆದಪ್ಪನಾಗುವದೂ ಇದಕ್ಕಿಂತ ಸಾವಿರ ಪಟ್ಟು ಹೆಚ್ಚಿನ ಭಾರಕ್ಕೂ ಯಾತನೆಗೂ ಈಡಾಗುವದು. ಆದರೆ ದೇಹಧರಿಸಲೆ ಆ ಮರಣ ಕುತ್ತಿನೊಳಗಿಂದ ಪಾರಾಗುವದು ಎಂದರೆ ಇದೇ ಜನ್ಮದಲ್ಲಿ ಜೀವನ್ಮುಕ್ತನಾಗುವದು.......... ಎಲ್ಲ ಗೆಳೆಯರನ್ನೂ ಒಮ್ಮೆ ಕೂಡಿಸಿ ಅವರಿಗೆ ಕೇಳು : ಕ್ಷುರಧಾರೆಯ ಮೇಲೆ ನಡೆಯುವಿರೇನೆಂದು.

ನಿನ್ನೊಲವಿನ
—ದತ್ತ "

---

# ಕವಿ ಬೇಂದ್ರೆ

**ಪ. ವೆಂಕೋಬಾಚಾರ್ಯ ಬಿ. ಎ.; ಬಿ. ಟಿ. ಹುಬ್ಬಳ್ಳಿ**

ನಿನ್ನನರಿಯಲು ಅರಿತುಕೊಳ್ಳುವ ಮನವು ಬೇಕದು ಸತ್ಯದಿ
ಓದಿ ಹಾಡಲು ಅಮಿತ ಆಳದ ತಿಳಿವು ಬೇಕದು ನಿತ್ಯದಿ
ಕಾಗಿ ಕುಣಿತದಿ ಕಂಡೆ ನೀನೀ ಜಗದ ಕುಣಿತದ ಮೇಳವ
'ಬೆಳಗಿ'ನಲಿ ನೀಕಾಂಬೆ ಬಾಳಿನ 'ಶಾಂತಿರಸದಾ ಪ್ರೀತಿ'ಯ
'ಪಾಡಿ'ನಲಿ ತೋರಿರುವೆ ತಂದೆಯ ಪುತ್ರ ಶೋಕದ ಚಿತ್ರವ
ಹುಡುಕುತಿರುವೆಯೊ ಸುಖದ ಹಾದಿಯ ದುಃಖದಲಿ 'ಆನಂದ'ವ
ನಿನ್ನ 'ಮನದನ್ನೆ'ಯಲಿ ಹೇಳುವೆ ಬಚ್ಚಿ ಮನದೊಳಮಾತನು
'ಸಖಿಯಗೀತ'ದಿ ಸಾರುತಿರುವೆಯೊ ಅಮರ ಪ್ರೇಮದ ಹಾದಿಯ.

ಸ್ಫೂರ್ತಿದಾಯಕ ಕವಿತೆ ನಿನ್ನದು ಮೋಡಿಗಾರನೆ ಬೇಂದ್ರೆಯೇ
ಏನು ಝುರಿಯದು, ಏನು ಸೊಗಸದು. ನಿನ್ನ ಕವನದ ರೀತಿಯೇ
ಏರುತಿರುವೆಯೊ ಯಾರು ಸೇರದ ಕೀರ್ತಿ ಲೋಕದ ಮೆಟ್ಟಿಲ
ಹಾರುತಿರುವೆಯೊ, ನಿನ್ನ ಭಾವದಿ ಹಕ್ಕಿಯಂದದಿ ಗಗನವ
ಕಾಣಲಾಗದ ಸುಖಕೆ ತಾನರವಿಂದ ಪೂಜೆಯೆ ದಾರಿಯು
ಆವರ ಪಾಠವೇ ಆಗುತಿಹುದದು ಶಾಂತಿದುರ್ಗದ ಹಾದಿಯು.

---

# ನಾನೂ ಶ್ರೀ. ಬೇಂದ್ರೆ ಅವರೂ

ಶ್ರೀ. ಸಿಂಪಿ ಲಿಂಗಣ್ಣ, ಹಲಸಂಗಿ

'ನಾನೂ ಶ್ರೀ. ಬೇಂದ್ರೆ ಅವರೂ?' ಇದೇನಿದು? ನಾನು ಯಾರು, ಅವರು ಯಾರು? ನಾನೆಲ್ಲಿ, ಅವರೆಲ್ಲಿ? ಅವರ ವಿದ್ವತ್ತೆ, ಪ್ರತಿಭೆ, ಕಾವ್ಯ, ಯೋಗ, ಕೀರ್ತಿ ಇವುಗಳಿಂದ ಸಮನ್ವಯಗೊಂಡ ವ್ಯಕ್ತಿಗೂ, ಇವಾವವೂ ಇಲ್ಲದ ವ್ಯಕ್ತಿಗೂ ಇನ್ನೆಲ್ಲಿಯ ಸಂಬಂಧ? ಅವರದು ಸರ್ವೋಚ್ಚ ಶಿಕ್ಷಣದಿಂದ ಸುಸಂಸ್ಕೃತವಾದ ಜೀವನ, ನಗರವಾಸ, ಜಗತ್ತಿನೊಳಗಿನ ಸರ್ವಜ್ಞಾನಗಳ-ವಿಚಾರಗಳ ನೆಲೆ ನೋಡಬಲ್ಲ ಬುದ್ಧಿಯ ವಿಶಾಲೋನ್ನತಿ. ಮಾತಿನ ಮೋಡಿ, ಆಳುವವರನ್ನೂ ನಗಿಸುವ ಹಾಸ್ಯಗಾರಿಕೆ ಇವು ಒಬ್ಬುಳಿಗೂಡಿದ ಶ್ರೀ. ಬೇಂದ್ರೆ ಅವರೆಲ್ಲಿ? 'ಕುಗ್ರಾಮ ವಾಸ-ಕುಲಹೀನ ಸೇವೆ' ಎಂಬ ಮಾತಿಗೆ ಸಾಟಿಯಾದಂಥ ಪರಿಸ್ಥಿತಿಯುಳ್ಳ ನಾನೆಲ್ಲಿ? ನನ್ನ-ಅವರ ಸಂಬಂಧ ಹೇಳಹೊರಡುವದೆಂದರೆ, ನೆಲ ಮುಗಿಲುಗಳನ್ನು ಹೋಲಿಯಬಹುದೆನ್ನುವವನ ರೀತಿ. ಸರ್ವಜ್ಞ ಕವಿಯಂಥ ವ್ಯವಹಾರಕುಶಲರಾರಾದರೂ ಆ ಮಾತು ಕೇಳಿ, ಇದೊಂದು 'ಮೂರ್ಖರ ಪದ್ಧತಿ'ಯೆಂದು, 'ಹೋಲಿಯಬಹುದು, ಹೋಲಿಯಬಹುದು' ಎಂದು ಹೇಳಿ ತಮ್ಮ ಬುದ್ಧಿವಂತಿಕೆಯನ್ನು ಕಾಯ್ದುಕೊಳ್ಳಬಹುದು. ಆದರೆ ನಿಜವಾಗಿಯೂ ಅವನ್ನು ಹೋಲಿಯಲಾಸಲ್ಲ ದೊಡ್ಡವರ ಹಾಗೂ ಸುಸ್ಥಿತಿಯಲ್ಲಿದ್ದವರ ಸಂಬಂಧವನ್ನು ಜೋಡಿಸಲಿಕ್ಕೆ ಬಹು ಜನರು ಮುಂದೆ ಬರುವದುಂಟು; ಆದರೆ 'ಬಡತನದಲ್ಲಿ, ಅರಮನೆಯ ಬಾಗಿಲಲ್ಲಿ, ಮರಣ ಕಾಲದಲ್ಲಿ' ಆ ಸಂಬಂಧದ ಪರೀಕ್ಷೆಯಾಗುತ್ತಿರುವದಂತೆ. ಆ ಪರೀಕ್ಷೆಯನ್ನು ಎದುರಿಸುವ ಧೈರ್ಯವೂ ನನಗಿಲ್ಲವಾದುದರಿಂದ, ಅವರ ಸಂಬಂಧವನ್ನು ಹೇಳಿಕೊಳ್ಳುವದಕ್ಕೆ ಇಷ್ಟು ಸಂಕೋಚ. ಅವರೊಂದು ಉನ್ನತ ಶಿಖರ; ನಾನೊಂದು ತಳದ ದರಿ. ಶತಾಂಶವೊಂದಾದರೆ ಶೂನ್ಯಾಂಶವಿನ್ನೊಂದು ಶತಾಂಶಕ್ಕೆ ಶೂನ್ಯಾಂಶವೇ ಆರಂಭವಾಗುವದರಿಂದ ಅದೂ ಒಂದು ತೆರದ ಸಂಬಂಧವೇ ಎನ್ನಬೇಕಾಗುವದು. ಅಂಥ ಸಂಬಂಧವು ಮಾತ್ರ ನಮ್ಮದು.

ಈ ಸಂಬಂಧವು ಬೆಟ್ಟದ ನೆಲ್ಲಿ, ಸಮುದ್ರದ ಉಪ್ಪಿನಂತೆ ದೈವಾಯತ ವಾದದ್ದು; ಅಗಾಧವಾದದ್ದು. ಶ್ರೀ. ಬೇಂದ್ರೆ ಅವರನ್ನು ನಾನು ಕೇಳಿ,

ಒಂದೆರಡು ವರುಷಗಳಾದ ಮೇಲೆ ಅವರನ್ನು ಕಣ್ಣಾರೆ ಕಂಡಿದ್ದು. ಈ ಮಾತಿಗೆ ಇಪ್ಪತ್ತು ವರುಷಗಳು ಕಾಲನ ಸುರುಳಿಯಲ್ಲಿ ಸುತ್ತಿಹೋಗಿವೆ. ಇಷ್ಟು ದೀರ್ಘ ಕಾಲ ಕಳೆದಿದ್ದರೂ ಸಹ ಅವರ ನನ್ನ ಸಂಬಂಧವುಂಟೆಂದು ಹೇಳ ಬಲ್ಲೆನೇ ಹೊರತು, 'ಯಾವ ಸಂಬಂಧ, ಎಂಥ ಸಂಬಂಧ' ಎಂದರೆ, ಮಾರು ನುಡಿಯಲಿಕ್ಕೆ ಬಾಯಿಯಿಲ್ಲ. ಈ ದೀರ್ಘ ಸಂಬಂಧದಲ್ಲಿ ಸಹ ಅವರು ನನಗೆ ಗುರುಗಳಾಗಲಿ, ಗೆಳೆಯನಾಗಲಿ, ಅಣ್ಣಂದಿರಾಗಲಿ ಆಗಿಲ್ಲವೆಂದು ಹೇಳ ಲಿಕ್ಕೆ ವಿಷಾದವು ಆಗುವದಿಲ್ಲ. ಯಾಕಂದರೆ, 'ವರ್ಣಮಾತ್ರ ಗುರು' ಎಂದಿರುವ ಮಾತ್ರಕ್ಕೆ ಅವರ ಶಿಷ್ಯಪದವಿಗೇರುವದು ಅನುಚಿತ. ನಾವು ಸಮಾನಶೀಲರಲ್ಲವೆಂದು ಮೊದಲೇ ಹೇಳಿರುವೆ. ಆದ್ದರಿಂದ ಅವರ ಮಿತ್ರ ಸ್ಥಾನವನ್ನು ಆಕ್ರಮಿಸುವದೂ ಸಮುಂಜಸವಾಗಲಾರದು. ಅವರ ನನ್ನ 'ಬೆನ್ನಬಳಿ ವಿಶಾಲವೃಕ್ಷ ಬೆಳೆದಿ'ಲ್ಲವಾದುದರಿಂದ ಅಂಥವರ ತಮ್ಮನೆಂದು-ಕೊಳ್ಳಲಿಕ್ಕೂ ಆಗದು. ಇದೇನು? 'ಅಪ್ಪನಿಗೆ ಅಪ್ಪಾ ಅನ್ನಬೇಕಾದರೆ ಒಪ್ಪೊತ್ತಿನ ಕೂಲಿ ಬೇಡುವ' ಸ್ವಭಾವವೇ ನನ್ನದು? ಅದೂ ಅಲ್ಲ. ಹಾಗಾ ದರೆ ಏನು?

'ಶ್ರೀ. ಬೇಂದ್ರೆ ಅವರೂ ನಾನೂ ಮನುಷ್ಯ ಮಾತ್ರರು, ಜಾತಿ ಕೂಡಿತು; ಗಂಡಗಂಡಸರು, ಗೋತ್ರ ಗಿಟ್ಟಿತು; ಇಬ್ಬರೂ ಕನ್ನಡಿಗರು, ನಾಡ ಬಂಧುಗಳಾದೆವು' ಎಂಬ ತೀರ ವಿಶಾಲ ಇಲ್ಲವೆ, ವಿಶ್ವಾತೀತ ಭಾವನೆಯೂ ನನ್ನಲ್ಲಿಲ್ಲ. ಆದರೆ ಕನ್ನಡ ತಾಯಿಯ ವಿರಾಟ್ ಸ್ವರೂಪದ ಹಲವು ಮುಖ ಗಳಲ್ಲಿ ಶ್ರೀ. ಬೇಂದ್ರೆ ಅವರೂ ಒಂದು ಮುಖ. ಇಲ್ಲಿ, ಆ ವಿರಾಟ್ ಸ್ವರೂಪ ವನ್ನು ಕಾಣುವ ದೃಷ್ಟಿ ನನಗಿದೆಯೆಂದು ಹೇಳಿದಂತಾಗಲಿಲ್ಲ. ಪ್ರಶಾಂತವಾದ ಕಲ್ಪನಾ ಚಕ್ಷುವಿನ ಆ ಕಾಣ್ಕೆಗೆ ಬುದ್ಧಿಯು ಒಪ್ಪಿತವಿದೆ; ಹೃದಯದ ಸಮ್ಮತಿ ಯಿದೆ ಆದುದರಿಂದ ಶ್ರೀ ಬೇಂದ್ರೆ ಅವರು ಕನ್ನಡ ತಾಯಿಯ ಮುಖಗಳಲ್ಲಿ ಒಂದು ಮುಖ ಅಂತೆಯೇ ಕನ್ನಡ ತಾಯಿಯು ಆ ಮುಖದಿಂದ ತನ್ನ ಹಲವು ಹಾಡುಗಳನ್ನು ಹಾಡಿಸಿದ್ದಾಳೆ; ಹಲವು ಮಾತುಗಳನ್ನು ಆಡಿಸಿ ದ್ದಾಳೆ; ಕೆಲವು ಕೃತಿಗಳನ್ನು ಮಾಡಿಸಿದ್ದಾಳೆ. ಅಂತೂ ಅವರ ಹೃದಯವು, ಅವರ ಮುಖವು ಕನ್ನಡ ತಾಯಿ ಬಳಸುವ ಕೊಳಲು, ವೀಣೆ, ಕಿನ್ನರಿಯೆಂದು ಹೇಳಬಹುದು ಕನ್ನಡಮ್ಮನ 'ಆ ಸಾವಿರ ಬಾಯಿಗಳಲ್ಲಿ ನನ್ನದೊಂದು;

ಆದೇ ನನ್ನ ಧನ್ಯತೆ' ಎಂದು ಶ್ರೀ. ಬೇಂದ್ರೆ ಅವರೂ ಒಂದೆರಡು ಕಡೆಗೆ ಹೇಳಿಕೊಂಡದ್ದುಂಟು. ಕನ್ನಡಮ್ಮನ ತನಯರೆಂದು ನಾವು ಹೇಳಿಕೊಳ್ಳುವದಕ್ಕೂ, 'ಇವ ನಮ್ಮವ, ಇವ ನಮ್ಮವ' ಎಂದು ಹೇಳಿಸಿಕೊಳ್ಳುವದಕ್ಕೂ ಅರ್ಥಭೇದವು ತುಸು ಕಂಡರೂ ಅಂತರವು ಬೇಕಾಪಷ್ಟಿದೆ. ಶ್ರೀರಾಮಕೃಷ್ಣರು ಹೇಳುವ ಬೆಕ್ಕಿನ ಮರಿ-ಮಂಗನ ಮರಿಗಳ ಕಥೆಗಳಲ್ಲಿ ಕಂಡುಬರುವ ಭಕ್ತಿಯ ಭಿನ್ನತೆಯಂತೆ. ಆದಿರಲಿ. ಶ್ರೀ. ಬೇಂದ್ರೆ ಅವರು ಕನ್ನಡ ಅಂಬಿಕೆಯ ತನಯರಾದ ದತ್ತರು; ಅಂಬಿಕಾತನಯದತ್ತರು. ಅವರು ಕನ್ನಡಮ್ಮನ ಮುಖ; ಆಕೆ ನುಡಿಸುವ ಕೊಳಲು; ಮಿಡಸುವ ವೀಣೆ; ಆ ಮುಖವು ಕನ್ನಡಮ್ಮನ ಕಾಣ್ಕೆ. ಆ ಕೊಳಲು ಬಾಳ ತುಂಬಿಸುವ ತುಂಬಿ; ವೀಣೆ ಹೃದಯ ತುಳುಕಿಸುವ ಹಿಗ್ಗು.

ಕನ್ನಡ ತಾಯಿಯು ಕನ್ನಡಿಗರಿಗಾಗಿ ಹಲವರಿಂದ ಹಾಡಿಸಿದಂತೆ, ಅವರಿಂದಲೂ ಹಾಡಿಸಿದ್ದಾಳೆ. ಅವುಗಳಲ್ಲಿ ನನಗಾಗಿ ಹಾಡಿಸಿದವುಗಳಂತಿರುವ ನನ್ನ ಹಾಡುಗಳೇ ಆಗಿ ಎಷ್ಟೋ ಇವೆ. ನನ್ನ ಹಾಡು ಹಾಡುವ--ನನ್ನ ಹಾಡು ಹದಗೊಳಿಸುವ ಆ ಮುಖವು ಅಂದರೆ, ಅಂಬಿಕಾತನಯದತ್ತರು ಕನ್ನಡ ನಾಡಿನಂತೆ ನನ್ನ ವಸ್ತುವೇ ಸರಿ. 'ನಿನ್ನ ವಸ್ತುವಂ ನೋಡು। ಮಮತೆಯ ಮಾಡು। ಸಲೆ ಕಾಪಾಡು ಗೆಳೆಯಾ' ಎನ್ನುವ ಶಾಂತಕವಿಗಳ ಆಪ್ತವಚನವನ್ನನುಸರಿಸಿ, ಆ ನನ್ನ ವಸ್ತುವಾದ ಅವರನ್ನು ಮಮ-ತೆಯಿಂದ ಕಾಣುತ್ತೇನೆ; ಅವರ ಸಂಬಂಧವನ್ನು ಕಾಪಾಡಿಕೊಂಡು ಬಂದಿದ್ದೇನೆ.

ಹಾಗೆ ಮಾಡುವುದಕ್ಕೆ ಕಾರಣವೇನು? ಅದು ತಿಳಿಯಬೇಕಾದರೆ, ನಾನು ಕಂಡುಕೊಂಡ ಆ ವಸ್ತುವಿನ ಗುಣಗಳನ್ನು ಸ್ಮರಿಸತಕ್ಕದ್ದು. ಅದನ್ನು ಶಾಂತಕವಿಗಳ ಮಾತಿನಲ್ಲಿ ಹೀಗೆ ಹೇಳಲಿಕ್ಕಾಗುತ್ತದೆ —

ಅದು—'ಆತ್ಮಸ್ಫೂರ್ತಿಯ ತೇಜ; ಜ್ಞಾನದ ಬೀಜ; ಜೀವದ ರಾಜ.' ಅದರಿಂದ 'ಬರುವದು ಕಳೆಮೊಗದಲ್ಲಿ; ಧೃತಿ ಮನದಲ್ಲಿ; ಬಲ ಮೈಯಲ್ಲಿ.' ಇಂಥ ಪ್ರಭಾವಶಾಲಿಯಾದ ವಸ್ತುವಿಗೆ ಸನ್ಮಾನಪೂರ್ವಕವಾಗಿ 'ತಮ್ಮವ'ನೆಂದು ಹೊಂದುಗೊಳಿಸುವದಾಗಲಿ, ಒಂದುಗೂಡಿಸುವದಾಗಲಿ ಅಭಿಮಾನದ ಮಾತಲ್ಲದಿನ್ನೇನು? ಹಾಗೆ ಮಾಡುವುದರಿಂದ ಅವರ ಅಂತರಂಗದ ಅನಿಸಿಕೆಗಳೂ, ತೊಡಕುಗಳೂ, ಜೀವನದ ಗುರಿ-ನಿರಿಗಳೂ 'ತಮ್ಮವ'ರಿಗೆ ತಮ್ಮವಾಗಲಾರವೇ?

‘ ನಿನ್ನ ಮನನ। ದಿಂದ ತನನ! ವೆನುತಿದೆ ತನು ಪಾವನಾ ’ ಎಂಬ ಅನಿಸಿಕೆ ಸನ್ನದಾದಂತೆ,

‘ ನಿದ್ದೆಗೊಮ್ಮೆ ನಿತ್ಯ ಮರಣ। ಎದ್ದ ಸಲ ನವೀನ ಜನನ। ನಮಗೆ ಏಕೆ ಬಾರದೋ ? ’ ಎಂಬ ತೊಡಕೂ ನನ್ನದಾಗುತ್ತದೆ.

‘ ನೋಡನೋಡ್ತ ದಿನಮಾನ। ಆಡಆಡ್ತ ಆಯುಷ್ಯ। ನಡದsದ ನಡದsದ ನಡದsದ। ಕಾಣದ ಕಡಲ್ಹಾದಿ ಹಿಡದsದ ’ ಎಂದು ಅಶಾಶ್ವತವನ್ನು ಬಗೆದು, ‘ ಬಡ ನೂರು ವರುಷಾನ ಹರುಷದಿ ಕಳೆಯೋಣ ’ ಎನ್ನುತ್ತ ಕೈ ಹಿಡಿದ ಜೀವನದ ಜೊತೆ ಗಾರ್ತಿಯನ್ನು ಆಹ್ವಾನಿಸದೆ ಗತ್ಯಂತರವಿಲ್ಲ.

‘ ಹರಿದರು ನೆತ್ತರು। ಉಳ್ಳವರು ಸತ್ತರು। ಒಳ್ಳೆವರು ಅತ್ತರು। ಕುಣಿಯೋಣು ಬಾ ’

ಕುಣಿದು ಬೇಸತ್ತಾಗ—

‘ ನನ ಕೈಯ ಹಿಡಿದಾಕೆ ಅಳುನುಂಗಿ ನಗು ಒಮ್ಮೆ ನಾನೂನು ನಕ್ಕೇನ। ಇಲದಿರಕ ನಿನ ಅಳುವ ಹುಚ್ಚು ಹಳ್ಳದ ಕಳ್ಳ ಹುದಲಾಗ ಸಿಕ್ಕೇನ ’ ಎಂದು ಎಚ್ಚರಿಕೆ ಕೊಡಬೇಕಾಗುತ್ತದೆ.

‘ ಹುಸಿನಗುತ ಬಂದೇವ ನಸುನಗುತ ಬಾಳೋಣ
ತುಸು ನಗುತ ತೆರಳೋಣ
ಬಡತನ ಒಡೆತನ ಕಡೆತನಕುಳಿದಾವೇನ
ಎದೆಹಿಗ್ಗು ಕಡೆಮುಟ್ಟ
ಬಾಳಿನ ಕಡಲಾಗ ಅದನ ಮುಣಗಿಸಬ್ಯಾಡ
ಕಡಗೋಲು ಹಿಡಿಹುಟ್ಟ ’

ಎಂಬ ಸಲಹೆಯಿತ್ತು—

‘ ನಾನು ಬಡವಿ ಆತ ಬಡವ ಒಲವೆ ನಮ್ಮ ಬದುಕು
ಬಳಸಿಕೊಂಡೆವದನೆ ನಾವು ಅದಕು ಇದಕು ಎದಕು ’

ಎಂಬ ಪ್ರತಿಧ್ವನಿಯು ಪತ್ನಿಯ ಹೃದ್ಗುಹೆಯಿಂದ ಹೊರಡುವದನ್ನು ಕೇಳಿ, ಪತಿಯು ಧನ್ಯನಾಗಬೇಕೆನ್ನುತ್ತಾನೆ. ಆದ್ದರಿಂದಲೇ—

'ಸಿಡುಕಿರಲಿ ಮಿಡುಕಿರಲಿ। ಯಾವುದೇ ಒಡಕಿರಲಿ
ಅದರ ಸಪ್ಪಳವನ್ನು ಮಾಡಬೇಡ।
ಹಾಳು ರಾಗವ ಮತ್ತೆ ಹಾಡಬೇಡ।
ಅದಕಾಗಿ ಜೀವದುಸಿರೆತ್ತಬೇಡ'

ಇಷ್ಟಾಗಿಯೂ ಅದನ್ನು ಮರೆತರೆ, 'ಮಲಗಿರುವ ಹಾವನ್ನು ಕೆಣಕಬೇಡ। ಕಚ್ಚಿ ವಿಷ ಕಾರಿದರೆ ತಿಣಕಬೇಡ' ಎಂದು ಬೆದರಿಕೆ ಹಾಕಬೇಕಾಗುತ್ತದೆ.

'ನಿನ್ನ ದರ್ಶನದಿಂದ। ನಿನ್ನ ಸ್ಪರ್ಶನದಿಂದ। ನಿನ್ನ ಘರ್ಷಣದಿಂದ
ಕಳೆ ಬಂತು, ಬೆಳೆ ಬಂತು, ಬರಿ ಬೀಳು ಹೊಲಕೆ।
ನೀನೊಂದೆ ಇಲ್ಲೆನ್ನು। ಜಗದ ವೈ ಹಣ್‌ಹಣ್ಣು। ಅದರ ಎದೆ ಹುಣ್‌ಹುಣ್ಣು
ಅದು ಕೊರಗಿ ಸೊರಗುವದು ನೀನದರ ದೇವ'

ಎಂಬ ಕೃತಜ್ಞತೆಯನ್ನು ಸತಿಯಲ್ಲಿ ತೋರ್ಪಡಿಸುವ ಬುದ್ಧಿಯು ಹಳ್ಳಿಯ ಅಶಿಕ್ಷಿತ ಹೃದಯವನ್ನು ಆವರಿಸುವ ಗಾರುಡಿ ಆ ಮಾತಿನಲ್ಲಿ ಯಾತರಿಂದ ಬಂತು?

ಅಂಬಿಕಾತನಯದತ್ತರ ಹಾಡಿನ ಹೊನಲು, ತಾನು ಹೊಕ್ಕ ಹೃದಯವನ್ನು ತೊಳೆದು, ಅದರ ಕೊಳೆಯನ್ನೆಳೆದುಕೊಂಡು ಮಲಾಪಹಾರಿಯಂತೆ ಮುಂದುವರಿಯುವದು. ಕನ್ನಡದ ಸರ್ವಸ್ಥಾನಗಳನ್ನೂ, ಪರಿಸರಗಳನ್ನೂ ಅವರು 'ಪಾತರಗಿತ್ತಿ'ಯಂತೆ ಮುಟ್ಟಿ ಮುಟ್ಟಿ ನೋಡುವ ಸ್ವಭಾವದವರು; ಅದರ ಪರಿಣಾಮವಾಗಿ 'ಹುಲ್ಲುಗಾವಲದಾಗ। ಹಳ್ಳೀ ಹುಡುಗೀ ಹಾಂಗ। ಹುಡದಿ ಹುಡದಿ ಭಾಳ!' ಕೆರೆ ಸೂರೆಪಾನ। ದಲ್ಲಿ ಧೂಳಿ ಸ್ನಾನ!! ತುರಬ ತುಂಬಿ ತೋಟದಲ್ಲಿ ದಿನದ ಊಟ!! ಅಡವಿ ಮಲ್ಲಿಗಿ ಕಂಡು, ಅದರ ಕಂಪ ನುಂಡು, ಹುಲ್ಲು ಹೊಲಕ ಬಂದು, ಗುಬ್ಬಿ ಬೆಳಸಿ ತಿಂದು, ಮಾಲಿಂಗನ ಬಳ್ಳಿ—ತೂಗುಮಂಚದಲ್ಲಿ ತೂಗಿಕೊಂಡು ದಣಿಯುವರು.

ಕಷ್ಟವಿಲ್ಲದ ಮುಖದ ಕಳೆ; ಒಗೆಯಲಾರದ ಅರಿವೆಯ ಕೊಳೆ; ತಮ್ಮ ವಸ್ತು-ಪದಾರ್ಥಗಳಲ್ಲಿಯ ಅಸ್ತವ್ಯಸ್ತತೆ. ಇವೆಲ್ಲ ನನ್ನಂಥ ಹಳ್ಳಿಯವರಿಂದ ಅವರಿಗೆ ಸಹವಾಸದ ಫಲವಾಗಿ ಸಿಕ್ಕ ಉಡುಗೊರೆ! ಕಲ್ಲಕ್ಕ ಕಡಬು ಕೊಟ್ಟರೆ, ದ್ಯಾಮಕ್ಕ ದೋಸೆ ಕೊಡಬೇಡವೇ?

———

# ವಿಚಿತ್ರ ಬೇಂದ್ರೆಯವರು

**ಆಯುರ್ವೇದ ವಿದ್ವಾನ್ ಮ. ಗೋಪಾಲಕೃಷ್ಣರಾಯರು, ಧಾರವಾಡ**

## ೧ ಪ್ರಥಮ ಪ್ರಭಾವ

ಬೇಂದ್ರೆಯವರಿಗೆ ಮೊಟ್ಟಮೊದಲು ಕೊಟ್ಟ ವಿಶೇಷಣವೆಂದರೆ 'ವಿಚಿತ್ರ ಪುರುಷ' ಎಂದು. ನನಗೆ ಸರಿಯಾಗಿ ನೆನಪಿಲ್ಲ; ೧೯೧೮ನೇ ಇಸವಿಯೆಂದು ತೋರುತ್ತದೆ ಆಗ ನಾನು ವ್ಹಿಕ್ಟೋರಿಯಾ ಹೈಸ್ಕೂಲಿನಲ್ಲಿ ಇಂಗ್ರೇಜಿ ಎರಡನೆ ವರ್ಗದಲ್ಲಿ ಓದುತ್ತಿದ್ದೆ. ಬೇಂದ್ರೆಯವರು ಆದೇ ಬಿ. ಎ ಆಗಿ ಬಂದು ೩ನೆಯ ವರ್ಗದ ಶಿಕ್ಷಕರಾಗಿದ್ದರು. ಅವರು ಶಿಕ್ಷಕರಾಗಿ ಬಂದಾಗಿನಿಂದ ಮೂರನೆ ವರ್ಗದ ವಿದ್ಯಾರ್ಥಿಗಳಲ್ಲಿ ತುಂಬಾ ಚಟುವಟಿಕೆಗಳು ಚಿಗುರಿಕೊಂಡವು ಅವುಗಳಲ್ಲಿ ಪ್ರಾಮುಖ್ಯವಾಗಿ 'ಹಬ್ಬ-ಹುಣ್ಣಿವೆಗಳಲ್ಲಿ ತಮ್ಮ ವಿದ್ಯಾರ್ಥಿಗಳ ಸಭೆ ಸೇರಿಸಿ ಹಬ್ಬದ ವೈಶಿಷ್ಟ್ಯವನ್ನು ವಿವರಿಸುವುದು; ಮತ್ತು ಆ ಹಬ್ಬಗಳ ವಿಷಯದಲ್ಲಿ ಕವನ ಕಟ್ಟಿ ವಿದ್ಯಾರ್ಥಿಗಳಿಗೆ ಹಾಡಿ ತೋರಿಸುವುದು' ಇವು ಹೆಚ್ಚು ಪರಿಣಾಮಕಾರಕವಾಗಿದ್ದವು. ವ್ಹಿಕ್ಟೋರಿಯಾ ಹೈಸ್ಕೂಲಿನಲ್ಲಿ ಆಗ ಮೇಲಿನ ವರ್ಗದ ವಿದ್ಯಾರ್ಥಿಗಳಿಗಾದರೂ ಡಿಬೇಟಿಂಗ ಸಂಘವಿತ್ತೋ ಇಲ್ಲವೋ ನನಗೆ ತಿಳಿಯದು ಆಗ ನನ್ನ ವಯಸ್ಸು ಸುಮಾರು ೧೨ ವರ್ಷ. ನನ್ನ ಮನಸ್ಸಿಗೆ ಶಾಲೆಯ ಶಿಕ್ಷಣವೆಂಬುದು ಆಕಳಿಕೆಯನ್ನು ಹುಟ್ಟಿಸುವ ಒಣ ಪ್ರಸಂಗವಾಗಿತ್ತು. ನನ್ನ ವರ್ಗದಲ್ಲಿ ನಾನು ಒಳ್ಳೇ ಜಾಣ ವಿದ್ಯಾರ್ಥಿಯಾಗಿದ್ದರೂ ಜಗವೂ ಜೀವನವೂ ಹಾಡಿದ್ದನ್ನೇ ಹಾಡುವ ಕಿಸುವಾಯಿ ದಾಸನಂತೆ ಬೇಸರಿಕೆಯನ್ನು ಹುಟ್ಟಿಸುತ್ತಿದ್ದವು. ಇಂತಹ ಶುಷ್ಕ ವಾತಾವರಣದಲ್ಲಿ ತೂಕಡಿಸುತ್ತಿದ್ದಾಗ ಬೇಂದ್ರೆಯವರು ಬಂದು ತಮ್ಮ ಕಾವ್ಯ ಮಂದಾನಿಲನನ್ನು ಬೀರಿದರು ಒಳಗೇ ಮಿಸುಕಾಡುತ್ತಿದ್ದ ನನ್ನ ಕಾವ್ಯದ ಒಲವು ಕೊಂಚ ತಲೆಯೆತ್ತಿ ಮಿನುಗಲಾರಂಭಿಸಿತು. ಬರಿ ದರ್ಪದಿಂದ ಹುಡುಗರನ್ನು ಆಳುತ್ತಿದ್ದ ಮಿಕ್ಕ ಅಧ್ಯಾಪಕರಿಗಿಂತ, ತಮ್ಮ ಸೀರಾದ ದನಿಯಿಂದ ಕವಿತೆಗಳನ್ನು ಹಾಡುತ್ತ. ಬಾಲಕರಲ್ಲಿ ಮಲಗಿದ ವ್ಯಕ್ತಿತ್ವವನ್ನು ಅಲುಗಿಸಿದ ಬೇಂದ್ರೆಯವರು ನನಗೆ ಆಗ ಬಹು 'ವಿಚಿತ್ರ'ವಾಗಿ ತೋರಿದರು. ಆಗ ವ್ಹಿಕ್ಟೋರಿಯಾ ಹೈಸ್ಕೂಲಿನಲ್ಲಿ ಕೈಬರಹದ ಮಾಸ ಪತ್ರಿಕೆ

ಯೊಂದು ಪ್ರಕಟವಾಗುತ್ತಿತ್ತು. ಬೇಂದ್ರೆಯವರ ವಿಚಿತ್ರ ಪ್ರಭಾವದಿಂದ ನನ್ನಲ್ಲಿ ಸ್ಫೂರ್ತಿಗೊಂಡ ಸಾಹಿತ್ಯದ ಒಲವು ಆ ಕೈಬರಹದ ಪತ್ರಿಕೆಗೆ ಒಂದೆರಡು ಚಿಕ್ಕ ಕಥೆಗಳನ್ನು ಬರೆಯಿಸಿತು. ಆ ವಿಚಿತ್ರ ಪ್ರಭಾವವೇ ನನ್ನ ವರ್ಗದ ಗೆಳೆಯರನ್ನೆಲ್ಲ ಕಲೆಹಾಕಿ ಒಂದು ವಾದ ಸಂಘವನ್ನು ರೂಪುಗೊಳಿಸುವಂತೆ ಹುರಿದುಂಬಿಸಿತು ಆದರೂ ಬೇಂದ್ರೆಯವರ ವೈಯಕ್ತಿಕ ಪರಿಚಯವು– ಅವರು ಕಲಿಸುತ್ತಿದ್ದ ವರ್ಗದಲ್ಲಿ ನಾನಿಲ್ಲದುದರಿಂದ–ಆಗಲಿಲ್ಲ. ಮುಂದೆ ಕೆಲವೇ ತಿಂಗಳುಗಳಲ್ಲಿ ಕೆಲವು ವಿದ್ಯಾರ್ಥಿಗಳಿಗೂ ಕೆಲವು ಶಿಕ್ಷಕರಿಗೂ ಜಗಳವಲ್ಲದಿದ್ದರೂ ತೀಕ್ಷ್ಣವಾದ ಮತಭೇದವುಂಟಾದುದರಿಂದ ನೂರಾರು ವಿದ್ಯಾರ್ಥಿಗಳೊಡನೆ ನಾನೂ ವ್ಹಿಕ್ಟೋರಿಯಾ ಹೈಸ್ಕೂಲನ್ನು ಬಿಟ್ಟು ಹೊರಬಿದ್ದೆ. ಬೇಂದ್ರೆಯವರ ಪ್ರಥಮ ಪ್ರಭಾವದ ಕಾವು ನನ್ನಲ್ಲಿ ಕ್ಷಣಿಕವಾಗಿ ಆರಿತೆನ್ನಬಹುದು.

## ೨ ಕಾವ್ಯಬೀಜಾರೋಪಣ

೧೯೨೧ರಲ್ಲಿ ಭಾರತದಲ್ಲಿ ಮಹಾತ್ಮರ ಯಕ್ಷಿಣೀ ಪ್ರಭಾವದಿಂದ ಸಜೀವತೆಯು ಹರಿದಾಡುತ್ತಿತ್ತು. ನಾನು ಇಂಗ್ರೇಜಿ ಶಾಲೆಯನ್ನು ಬಿಟ್ಟು ರಾಷ್ಟ್ರೀಯ ಶಾಲೆಯನ್ನು ಸೇರಿ ದೇಶದ ಭವ್ಯವಾದ ಅಸಹಕಾರ-ರಾಗಕ್ಕೆ ನನ್ನ ಪುಟ್ಟ ಧ್ವನಿಯನ್ನೂ ಕೂಡಿಸಿದೆನು. ನಿಜವಾಗ ಕರ್ನಾಟಕದಲ್ಲಿ ಅದೊಂದು ನವಯುಗವೇ ತೆರೆಯಿತು. ಗುರುದೇವ ತಾರಾನಾಥಜಿಯವರು ಆಗ ತಾನೇ ಧಾರವಾಡಕ್ಕೆ ಬಂದು ಕನ್ನಡದ ವಕ್ತೃತ್ವವನ್ನು ಚಿಗುರಿಸಿದರು. ನಾಡಿನಲ್ಲೆಲ್ಲ ಕನ್ನಡ ಕವಿಗಳ ಕಿನ್ನರಿಯ ಇಂಪೆದ್ದಿತು. ಅದೇ ಕಾಲಕ್ಕೆ ಬೇಂದ್ರೆಯವರೂ ನಮ್ಮ ರಾಷ್ಟ್ರೀಯ ಶಾಲೆಗೆ ಬಂದು ಬಾಲಕರ ಕಾವ್ಯವೃತ್ತಿಯನ್ನು ಚೇತರಿಸಿ ಕೃತಿಯ ಪ್ರವೃತ್ತಿ ರಂಗಕ್ಕಿಳಿದರು. ಅವರ ಗೆಳೆತನದ ಆಕರ್ಷಣದಿಂದ ಆಗಲೇ 'ಗೆಳೆಯರ ಗುಂಪು' ಕಣಗಟ್ಟಿ ಕಳೆಗೊಳ್ಳುತ್ತಿದ್ದಿತು. ಆದರೂ ನಾನಿನ್ನೂ ಅವರ ವೈಯಕ್ತಿಕ ಪರಿಚಯವನ್ನು ಮಾಡಿಕೊಂಡಿರಲಿಲ್ಲ. ದೂರದಿಂದಲೇ ಅವರ ಬೆಳಕನ್ನು ಪಡೆದು ಸಾಹಿತ್ಯೋದ್ಯಾನದ ಅಂಚಿನಲ್ಲಿ ಸುಳಿದಾಡಹತ್ತಿದ್ದೆನು. ಕೆಲವು ತಿಂಗಳುಗಳ ವರೆಗೆ 'ಸತ್ಯ'ವೆಂಬ ಕೈಬರಹದ ಪತ್ರಿಕೆಯನ್ನು ನಾನೊಬ್ಬನೇ ಬರೆದು ರಾಷ್ಟ್ರೀಯ ಶಾಲೆಯಲ್ಲಿ ತೂಗಹಾಕುತ್ತಿದ್ದೆ ಅದರಲ್ಲಿ ನನ್ನ ಹೆಸರನ್ನೇ ಕಾಣಿಸುತ್ತಿರಲಿಲ್ಲ.

ನಂತರ 'ಸರ್ವಜ್ಞ' ಎಂಬ ಕೈಬರಹದ ವಾರಪತ್ರಿಕೆಯನ್ನು ಪ್ರಕಟಿಸ ಲಾರಂಭಿಸಿದೆ. ಬೇಂದ್ರೆಯವರ ಸಮೀಪ ವರ್ತುಲದಲ್ಲಿದ್ದ ಗೆಳೆಯರು 'ಕಾವ್ಯ ಸೇವೆ' ಎಂಬ ಕವಿತಾ ಪತ್ರಿಕೆಯನ್ನು ಪ್ರಕಟಿಸಲಾರಂಭಿಸಿದರು. ಆ ಪತ್ರಿಕೆಗೂ ನಾನು ಕವನಗಳನ್ನು ಬರೆದುಕೊಟ್ಟು ಆ ಹಿರಿ ಗೆಳೆಯರ (ಬೇಂದ್ರೆಯವರ) ಸಾನ್ನಿಧ್ಯವನ್ನು ಇನ್ನೂ ಹೆಚ್ಚಾಗಿ ಸಂಪಾದಿಸಿದೆ. ೧೯೩೩ರಲ್ಲಿ ಬೇಂದ್ರೆ ಯವರು ನಮ್ಮ ವರ್ಗಕ್ಕೆ ಕನ್ನಡದ ಅಧ್ಯಾಪಕರಾದರು. ಬಹು ದಿನದ ಹಾರೈ ಕೆಯು ಅಂದು ಪೂರೈಸಿತು. ಬೇಂದ್ರೆಯವರ ವ್ಯಕ್ತಿತ್ವ, ಗೆಳೆತನ, ಕವಿತ್ವ, ವಕ್ತೃತ್ವಗಳು ಪ್ರತ್ಯಕ್ಷವಾಗಿ ನನ್ನನ್ನು ಮುತ್ತಿದವು. ಜೈಮಿನಿಯು ನಮ್ಮ ಪಠ್ಯ ಪುಸ್ತಕವಾಗಿತ್ತು. ಅದನ್ನು ಕಲಿಸುವಾಗ ಬೇಂದ್ರೆಯವರು ರಸ, ಭಾವ, ಅಲಂಕಾರ, ಲಾಲಿತ್ಯಗಳ ವಿವರಣೆಯನ್ನು ಸೂರೆಗೈದು ಕಾವ್ಯಶಾಸ್ತ್ರವನ್ನೆ ಪಾರದರ್ಶಕವಾಗಿ ನಮ್ಮೆದುರು ಹಿಡಿದರು. ನಾನು ಆಗ ವಾರದಲ್ಲಿ ಎರಡು ನಿಬಂಧಗಳನ್ನು ತಪ್ಪದೆ ಬರೆದು ಅವರಿಗೆ ಓದಿ ತೋರಿಸುತ್ತಿದ್ದೆ. ಅವರು ಅವನ್ನು ಬೇಸರವಿಲ್ಲದೆ ಕೇಳಿ ಶೈಲಿಯ ಬಿಗುಹಿಗೂ ಭಾವದ ಬೆಳಕಿಗೂ ಅವಶ್ಯವೆನಿಸಿದ ಸಲಹೆಗಳನ್ನು ನೀಡುತ್ತಿದ್ದರು ನನ್ನ ನಿಬಂಧಗಳನ್ನು ಅವರು ಮೆಚ್ಚಿ 'ಭಲೆ' ಎನ್ನುತ್ತಿದ್ದರಲ್ಲದೆ 'ಗೋಪಾಲಕೃಷ್ಣನು ಹೀಗೆಯೇ ಬರೆ ಯುತ್ತ ಹೋದರೆ ರವೀಂದ್ರರ ಮಾದರಿಯ ಗದ್ಯ ಸಾಹಿತ್ಯವನ್ನು ಅರಳಿಸು ವುದು ನಿಶ್ಚಿತ' ಎಂದು ನನಗೆ ತಿಳಿಯದಂತೆ ಗೆಳೆಯರಲ್ಲಿ ಹೇಳಹತ್ತಿದರು. ಆಗ ಅವರ ಹೊಗಳಿಕೆಗೆ ನಾನು ಅರ್ಹನಾಗಿದ್ದೆನೋ ಇಲ್ಲವೋ ಹೇಳಲಾರೆ; ಆದರೆ ಅವರ ಸಂದೇಶದಂತೆ ಅಪಿಂತ ಸಾಹಿತ್ಯ ಸೇವೆಯನ್ನು ನಾನು ಮಾಡ ಲಾರದೆ ಹೋದೆನು. ಬಾಳಿನ ಭೀಕರವಾದ ತಿರುಗಣಿಗಳಲ್ಲಿ ಸುತ್ತಾಡಿ ಈಗ ತಾನೆ ಚೇತರಿಸಿಕೊಳ್ಳುತಿದ್ದೇನೆ. ಸದ್ಯಕ್ಕಂತೂ ರವೀಂದ್ರರ ಮೆಟ್ಟುಗಳನ್ನು ಒರೆಸುವಷ್ಟು ಕೂಡ ಯೋಗ್ಯತೆ ನನ್ನಲ್ಲಿಲ್ಲ. ಆದರೆ ಕಾವ್ಯದ ಬೀಜವೇನೋ ೧೯೩೩ರಲ್ಲಿಯೆ ಬೇಂದ್ರೆಯವರಿಂದ ನನ್ನಲ್ಲಿ ಬಿತ್ತಲ್ಪಟ್ಟಿತು. ಅವರ ಕೃಷಿಯನ್ನು ನಾನು ಮಾಡಬೇಕಾದಂತೆ ಮಾಡಲಿಲ್ಲ.

## ೩ ಅವರ ವ್ಯಕ್ತಿತ್ವ

ಮೊಗವು ಮನದ ಕೈಗನ್ನಡಿ ಎಂದು ಎನ್ನುವುದುಂಟು; ಮತ್ತು ಕೆಲವ ರಲ್ಲಿ ಆ ನುಡಿ ಸಾರ್ಥಕವಾಗಿರುವುದೂ ಉಂಟು. ಆದರೆ ಬೇಂದ್ರೆಯವರ ಬಗ್ಗೆ

ಆ ಮಾತು ನಿರರ್ಥಕ. ಅವರ ಕಣ್ಣಲ್ಲಿ ಒಂದು ತೀಕ್ಷ್ಣತೆಯುಂಟು. ಆದರೆ ಅವರ ಹಿತವು ಅವರ ಮೊಗದಲ್ಲಿ ಮೂಡಿಲ್ಲ. ಕಣ್ಣು 'ರವಿ ಕಾಣದ್ದನ್ನು ಕವಿ ಕಾಣುವ'ನೆಂಬುದನ್ನು ನೆನಪಿಸುವಂತಿವೆ. ಬಾಳ್ಗಾಡಿನ ಕಲ್ಲು ನೆಲವನ್ನು ಬಗಿದು ಚಿಗುರಿದ ಅವರ ರಸಜೀವನವು ನೊನೆಗೊಂಡು ಬೆಳೆಯುತ್ತ, ಬೆಳೆದಂತೆ ಅರಳುತ್ತ ನಡೆವುದು ಅವರ ಕಣ್ಣುಗಳಲ್ಲಿ ಸ್ಥಿರವಾಗಿ ನಿಂತಿದೆ ಆದರೆ ಅವರ ಬಗೆಯು ಬಾಳಿನ ಅಂದವನ್ನು ಕಣ್ಣು ಬೆಳಗುವ ಮೊದಲೆ ಅವರ ಮೈಬಾಳಿನ ತೊಡಕು ಮಿಡುಕುಗಳು ನೂರಾರು ಅವರ ಮೊಗದಲ್ಲಿ ಮೂಡಿ ಮನ ಸೆಳೆಯುವವು. ಏಕೆಂದರೆ ಅವರ ಕಣ್ಣಿಗೆ ವೃಥಾ ವರ್ಚಸ್ಸನ್ನು ವೆಚ್ಚಿಸುವ ಹಂಬಲವಿಲ್ಲ. ನಾವು ಅವರನ್ನು ಅವರ ವ್ಯಕ್ತಿತ್ವವನ್ನು ನೋಡಬೇಕೆಂದಿರುವಾಗ ಅವರ ಕಣ್ಣು ತೆರೆದಿದ್ದರೂ ಒಳಮುಖವಾಗಿ ಬಗೆಯ ಬಯಲಲ್ಲಿ ಅಲೆಯುತ್ತಿರುವುದು. ಇದೆಲ್ಲ ದೂರದ ನೋಟಕ್ಕೆ.

ಆದರೆ ಅವರನ್ನು ಒಮ್ಮೆ ಮಾತನಾಡಿಸಿ ನೋಡಬೇಕು. ಅವರ ಕನಸು ನೆನಸುಗಳೂ ಭಾವ ಭಾವನೆಗಳೂ ಗುರಿ ಪರಿಗಳೂ ಸಾವಿರ ಕಣ್ಣುಗಳೇ ಆಗಿ ನಮ್ಮನ್ನು ಸುತ್ತಿಬಿಡುವವು. ಮಾತನ್ನು ಒಡೆದು ವಿಷಯದ ವ್ಯಾಖ್ಯೆಯನ್ನು ಕಟ್ಟುವರು; ವ್ಯಾಖ್ಯೆಯನ್ನು ಕಡೆದು ತತ್ವದ ಬೆಣ್ಣೆಯನ್ನು ಎತ್ತುವರು ತತ್ವಕ್ಕೆ ಇತಿಹಾಸದ ಒಪ್ಪವಿಡುವರು; ಅನುಭವದ ಪುಷ್ಪವಿಡುವರು, ಯೋಗದ ಸುಡಿ ಸೇರಿಸುವರು; ಸಾಹಿತ್ಯದ ಗುಡಿ ಹಾರಿಸುವರು. ಆಗ ನೋಡಬೇಕು ಅವರ ವ್ಯಕ್ತಿತ್ವವನ್ನು; ಮಾತುಗಳಲ್ಲಿ ತಿಳಿಯುಂಟು; ಮೊಗದಲ್ಲಿ ಬೆಳಕುಂಟು; ಕಣ್ಣುಗಳಲ್ಲಿ ಬುದ್ಧಿ ಕುಣಿದಾಡುವುದು; ಅಂಗ ಭಂಗಿಗಳಲ್ಲಿ ಮೈಮರೆವು ಮೆರೆಯುವುದು—ಈ ವ್ಯಕ್ತಿತ್ವವು ನಮ್ಮ ಜನ್ಮಾಂತರಗಳಲ್ಲಿಯೂ ಮರೆಯದು.

ಸಮನ್ವಯವು ಬೇಂದ್ರೆಯವರ ರಸಜೀವನದ ಉಸಿರು. ಕಾವ್ಯದಲ್ಲಿಯೂ ಸರಿ, ಮಾತಿನಲ್ಲಿಯೂ ಸರಿ, ಗೆಳೆತನದಲ್ಲಿಯೂ ಸರಿ; ಅವರಿಗೆ ಬೇಡವಾದ ಶಾಸ್ತ್ರವಿಲ್ಲ; ಅವರಿಗೆ ಬೇಸರಿಸುವ ಕಲೆಯಿಲ್ಲ. ಗರಡಿ, ವೈದ್ಯ, ಚಿತ್ರ, ಗಾನ, ವಿಜ್ಞಾನಗಳೆಲ್ಲವರಲ್ಲೂ ಅವರಿಗೆ ಪ್ರವೇಶವುಂಟು ತಮ್ಮ ಕಾವ್ಯ ಕೃತಿಗಳಲ್ಲಿ ಅವೆಲ್ಲವುಗಳ ಪರಿಭಾಷೆಯನ್ನೂ ಬಳಸುವರು. ವೈದ್ಯಶಾಸ್ತ್ರದಲ್ಲಿಯ ತ್ರಿದೋಷ ಮೀಮಾಂಸೆಯನ್ನು ಸ್ಪಷ್ಟೀಕರಿಸುವುದಕ್ಕಾಗಿ ರಟ್ಟೀಹಳ್ಳಿಯಲ್ಲಿ ದಿವಂಗತ ನಾಗೇಶಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಪರಿಷತ್ತು ಸೇರಿದುದಕ್ಕೆ ಬೇಂದ್ರೆಯವರ

ಪ್ರಯತ್ನವೇ ಕಾರಣ. 'ಶಿಕ್ಷಣವೆಂದರೆ ಗುರುಗಳು ತಮ್ಮ ತಲೆಭಾರವನ್ನು ಶಿಷ್ಯನ ತಲೆಯ ಮೇಲೆ ಹೇರುವುದು' ಎಂಬ ಭಾವನೆಯು ಹಲವು ಶತಕಗಳಿಂದಲೂ ನಡೆದುಬಂದಿದೆ. ಆದರೆ ಶಿಷ್ಯನ ಒಲವನ್ನರಿತು ಅವನು ತನ್ನ ನೈಶಿಷ್ಟ್ಯದಿಂದಲೆ ಪರಿಪೂರ್ಣತೆಯನ್ನು ಪಡೆವಂತೆ ಸಲಹೆ, ಸಲಕರಣೆಗಳನ್ನೊದವಿಸುವುದೇ ಗುರುವಿನ ಮತ್ತು ಶಿಕ್ಷಣದ ಗುರಿ ಎಂಬುದು ಅತಿ ಪುರಾತನ ಮತ್ತು ಅತ್ಯಾಧುನಿಕ ಶಿಕ್ಷಣ ಶಾಸ್ತ್ರದ ತತ್ತ್ವವಾಗಿದೆ. ಈ ತತ್ತ್ವವನ್ನು ಅಕ್ಷರಶಃ ಮೈಗೂಡಿಸಿಕೊಂಡು ಕಾರ್ಯದಲ್ಲಿ ಬಹುಶಃ ಕೈಗೂಡಿಸಿದ ಹಿರಿಮೆಯು ಕನ್ನಡ ನಾಡಿನಲ್ಲಿ ಬೇಂದ್ರೆ ಮತ್ತು ತಾರಾನಾಥಜಿ ಇವರಿಬ್ಬರಿಗೇ ಸಲ್ಲುವುದು. ಬಗೆಯು ಅಥವಾ ನಡೆಯು ಯಾವುದೇ ತೊಡಕಿನಿಂದ ಮಿಡುಕುತ್ತಿರುವ ಗೆಳೆಯನು ಬಾಳಿನ ಯಾವ ಬಳಗಕ್ಕೇ ಸೇರಿರಲಿ; ಬೇಂದ್ರೆಯವರಲ್ಲಿ ಅವನನ್ನು ತಣಿಸುವ ತತ್ತ್ವವುಂಟು. ತಿದ್ದ ಲೆತ್ನಿಸುವ ಸತ್ತ್ವವುಂಟು. ಎಲ್ಲವನ್ನೂ ಬಲ್ಲೆನೆಂಬ ಗುಲ್ಲಿನಿಂದ ಅವರು ದೂರವಾಗಿದ್ದರೂ ಎಲ್ಲದರ ಸಾರವನ್ನು ಸವಿಯುವ ಹಸಿವು ಅವರಿಗುಂಟು; 'ಎಲ್ಲ'ಕ್ಕೂ ಒಪ್ಪುವಂತೆ ತಮ್ಮ ಮಾತು–ಹಾಡುಗಳನ್ನು ಹೆಣೆವ ಸಮನ್ವಯ ದೃಷ್ಟಿಯುಂಟು; ಕಲ್ಪನೆಯ ಸಂಸ್ಕಾರಗಳು ಕೃತಿಗಳನ್ನೂ ಪರಿಷ್ಕಾರಗೊಳಿಸಬೇಕೆಂಬ ಹಂಬಲದ ಕ್ರಾಂತಕವಿದೃಷ್ಟಿಯೂ ಉಂಟು ಅವರಿಗೆ.

---

## ಬೇಂದ್ರೆಯವರ ವ್ಯಕ್ತಿತ್ವ

### ಶ್ರೀ. ಗೊರೂರು ರಾಮಸ್ವಾಮಿ ಅಯ್ಯಂಗಾರ, ಗೊರೂರು

ಶ್ರೀಮಾನ್ ಬೇಂದ್ರೆಯವರನ್ನು ಕಾಣದವರು ಕರ್ನಾಟಕದಲ್ಲಿ ಯಾರೂ ಇಲ್ಲ. ಅವರ ಕವಿತೆಯನ್ನು ಅರಿಯದ ಕನ್ನಡಿಗರು ಭಾರತದಲ್ಲಿಯಾಗಲಿ ಜಗತ್ತಿನಲ್ಲಿಯಾಗಲಿ ಇಲ್ಲ ಯುದ್ಧಕ್ಕೆ ಮುಂಚಿತವಾಗಿ ಜರ್ಮನಿಗೆ ಹೋಗಿ ಹಿಂದಿರುಗಿದ ನಮ್ಮ ಮಿತ್ರರೊಬ್ಬರು ಆಗ ಜರ್ಮನಿಯಲ್ಲಿದ್ದ ಕನ್ನಡಿಗರಿಗೆಲ್ಲಾ 'ಬೇಂದ್ರೆಯವರು ಪ್ರಸಿದ್ಧ ಕವಿ' ಎಂಬುದು ಗೊತ್ತಾಗಿದ್ದಿತೆಂದು ಹೇಳುತ್ತಾರೆ. ಹಿಂದೀ ಮರಾಠಿ ಇಂಗ್ಲಿಷು ಬಂಗಾಳಿ ಎಲ್ಲಾ ಭಾಷೆಗಳ ಪತ್ರಿಕೆಗಳಲ್ಲೂ ಇವರನ್ನು ಕುರಿತ ವಿಮರ್ಶಾತ್ಮಕ ಪ್ರಶಂಸಾತ್ಮಕ ಲೇಖನಗಳು ಬಂದಿವೆ.

ಕರ್ನಾಟಕದ ಹಾದಿಗಳೆಲ್ಲಾ ಶ್ರೀಮಾನ್ ಬೇಂದ್ರೆಯವರ ನಡಿಗೆಯಿಂದ ಸವೆದಿವೆ. ಇವರು ಕನ್ನಡ ನಾಡಿನ ಮೂಲೆ ಮೂಲೆಗಳನ್ನೂ ತಿರುಗಿದ್ದಾರೆ. ಇವರ ತೇಜಃಪುಂಜವಾದ ಮುಖವನ್ನು ಒಂದು ಸಲ ನೋಡಿದರೆ ಸಾಮಾನ್ಯವಾಗಿ ಮರೆಯುವುದು ಸಾಧ್ಯವಿಲ್ಲ. ವಿಶಾಲವಾದ ಹಣೆ; ಎತ್ತರವೂ ಕುಳ್ಳೂ ಅಲ್ಲದ ದೇಹ; ಹಾಸ್ಯದಿಂದಲೂ 'ಚಕಮಕ ಚಂಚಲ'ದಿಂದಲೂ ಜ್ಯೋತಿಯ ಕಿಡಿಯಂತೆ ಹೊಳೆಯುವ ಕಣ್ಣುಗಳು; ತಲೆಯ ಮೇಲೇರಿಸಿದ ಖಾದಿ ಅರಿವೆಯ ಟೋಪಿ; ಮುಖದಲ್ಲಿ ಒಂದು ವಿಧವಾದ ಧೈರ್ಯ ಕೆಚ್ಚು ತ್ಯಾಗ ಅನಾಸಕ್ತಿ; ಈ ಪ್ರಪಂಚವನ್ನು ಮರೆತು ಎಲ್ಲಿಯೋ ವಿಹರಿಸುತ್ತಿರುವಂತಹ ದೂರದ ನೋಟ; ಬೇರೆ ಯಾವುದೋ ಉತ್ತಮವಾದ ಲೋಕಕ್ಕೆ ಸೇರಿದವನು ಒಂದು ಗಳಿಗೆ ಬಂದು ನಮ್ಮಲ್ಲಿ ಮಿಳಿತವಾಗುತ್ತಿದ್ದಾನೇನೋ ಎಂಬ ಗಂಭೀರವಾದ ಯೋಗಿಯ ಮುಖಭಾವ. ಈ ನೈಜವಾದ ಗುಣಗಳಿಂದ ಬೇಂದ್ರೆಯವರು ಸ್ವಾಭಾವಿಕವಾಗಿ ಎಲ್ಲರ ಗಮನವನ್ನೂ ಎಳೆಯುತ್ತಾರೆ. ಅವರ ಸಾನ್ನಿಧ್ಯದಲ್ಲಿರುವಾಗ ಒಂದು ಅದ್ಭುತವಾದ ಸಾತ್ವಿಕವಾದ ಸ್ವಚ್ಛವಾದ ಶಕ್ತಿಯ ಎದುರಿಗೆ ಇರುವ ಮನೋಭಾವ ನಮಗೆ ಉಂಟಾಗುತ್ತದೆ.

ಬೇಂದ್ರೆಯವರ ಪ್ರಸಿದ್ಧಿ ಅವರು ಹೋಗುವುದಕ್ಕಿಂತ ಮುಂಚೆ, ಎಲ್ಲಾ ಕಡೆಗೂ ಹೋಗುತ್ತದೆಯಾದರೂ ಅವರನ್ನು ಮುಖತಃ ನೋಡಿದ ಕೂಡಲೇ ಅವರ ಪ್ರಸಿದ್ಧಿ ಅವರ ಯೋಗ್ಯತೆಗಿಂತ ಅತ್ಯಂತ ಕಡಿಮೆ ಎಂದು ಗೊತ್ತಾಗುತ್ತದೆ. ಅವರ ಕಾವ್ಯಗಳಿಗಿಂತ ಅವರು ಹಿರಿಯರು. ಅವರನ್ನು ನೋಡಿದವರಿಗೆ 'ಎಲ್ಲಿಯೋ ಒಂದು ಸ್ಫೂರ್ತಿಯ ಗಳಿಗೆಯಲ್ಲಿ ಇವರಿಂದ ಕಾವ್ಯ ಹೊರಟು ಬಿಟ್ಟಿದೆ' ಎಂಬ ಭಾವ ಬರುವುದಿಲ್ಲ. ಇಂತಹ ವ್ಯಕ್ತಿ ಇಂತಹ ಮಾತನ್ನು ಹೇಳುವುದು ಸಹಜವಾದುದೇ. ಈ ವ್ಯಕ್ತಿ ನಡೆಸುತ್ತಿರುವ ಜೀವನ ಇವರ ಕಾವ್ಯಕ್ಕಿಂತ ಹಿರಿಯದು. ಇವರಿಂದ ಇನ್ನೂ ಮಹತ್ತರವಾದ ಕಾವ್ಯಸೃಷ್ಟಿಯಾಗುತ್ತದೆ' ಎಂದು ತೋರುತ್ತದೆ. ಶ್ರೀಮಾನ್ ಬೇಂದ್ರೆಯವರ ಬಾಳಿನಲ್ಲಿ ಕೃತಕತೆ, ಎರಡು ಮುಖ ಇಲ್ಲ ಇವರು ಹೇಳುತ್ತಿರುವುದೂ ಬಾಳುತ್ತಿರುವುದೂ ಒಂದೇ. ಕವಿಗಳ 'ತಲೆಹರಟೆ'ಯನ್ನೂ ಅವರು 'ಹಾರಗುದುರೆ ಸ್ವಾರರಾಗಿ' ಮೆರೆಯುವುದನ್ನೂ ನೋಡಿದವರಿಗೆ ಬೇಂದ್ರೆಯವರ ಸರಳತೆ, ಬೇಸಗೆಯ ಮಲೆಯ ಮಾರುತದಂತೆ ಚೈತನ್ಯದಾಯಕವಾಗುತ್ತದೆ. ತಮ್ಮದೇ

ಧಾಟಿಯಲ್ಲಿ ಶಬ್ದ ಬ್ರಹ್ಮ ಜಾಲವನ್ನೇ ವಿವರಿಸುತ್ತಾ, ಬಲಗೈಯಿನ ಬೆರಳುಗಳಿಂದ ಪುಸ್ತಕದ ಮೇಲೂ ಬಲಗಾಲಿನಿಂದ ನೆಲದ ಮೇಲೂ ನಿಧಾನವಾಗಿ ತಾಳ ಹಾಕುತ್ತಾ ಏಕನಾದ ಕಿಂದರಿ ಜೋಗಿಯಂತೆ ಕೇಳುವವರನ್ನು ಆನಂದ ಕರುಣೆ ಹಾಸ್ಯ ಕೆಚ್ಚು ನೆಚ್ಚು ಭಯ ತ್ಯಾಗ ಆವೇಶದ ತೊಟ್ಟಿಲುಗಳಲ್ಲಿ ಆಡಿಸುತ್ತಾ ಕೊನೆಯಲ್ಲಿ ಇದೆಲ್ಲಾ ಶಬ್ದದ ಇಂದ್ರಜಾಲವೇ ಎಂದು ತೋರಿಸಿದ ಮಾಟಗಾರ ಬೇಂದ್ರೆಯವರು ಇವರೇಯೆ ? ಕವಿಯು ಹಾಗೆ ಕಾಣುವುದೇ ಇಲ್ಲವಲ್ಲ ಎಂದು ಮಿತ್ರರಿಗೆ ಸಹ ಆಶ್ಚರ್ಯವಾಗುತ್ತದೆ. ಬೇಂದ್ರೆಯವರು ಮಾಟಗಾರರೆಂಬುದರಲ್ಲಿ ಸ್ವಲ್ಪವೂ ಅತಿಶಯೋಕ್ತಿಯಿಲ್ಲ ಅವರು ಸ್ವತಃ ಸಂಗೀತಗಾರರೋ ಅಲ್ಲವೋ ನಾನು ಕಾಣೆ. ಆದರೆ ಅವರ ಹಾಡಿಗೆ ಅವರು ಕೊಡುವ ಮಟ್ಟು. ಕವಿತೆ ಅವರಿಗೆ ಹೇಗೆ ಸಹಜವಾಗಿ ಬಂದಿದೆಯೋ ಹಾಗೆಯೇ ಸಹಜವಾಗಿ ಬಂದಿದೆ. ಅದು ಇಂತಹ ರಾಗ ಎಂದು ಶ್ರೀ. ಬೇಂದ್ರೆಯವರು ಸಹ ಯಾರಿಗೂ ಯಾವಾಗಲೂ ಹೇಳಲಿಲ್ಲ 'ನಾನು ಹೀಗೆ ಹಾಡುತ್ತೇನೆ, ಒಳ್ಳೆಯ ಸಂಗೀತಗಾರರು ಇನ್ನೂ ಒಳ್ಳೆ ಧಾಟಿಯಲ್ಲಿ ಹಾಡಬಹುದು' ಎನ್ನುತ್ತಾರೆ. ಪಿಟೀಲು ಮೇಷ್ಟರುಗಳೂ ಹಾರ್ಮೋನಿಯಂ ಮೇಷ್ಟರುಗಳೂ 'ಹಕ್ಕಿ ಹಾರುತಿದೆ, ತುತ್ತಿನ ಚೀಲ, ಮೂವತ್ತುಮೂರು ಕೋಟಿ, ಬೆಳದಿಂಗಳ ನೋಡ' ಇವುಗಳಿಗೆ ತಮಗೆ ಸರಿತೋರಿದ ಮಟ್ಟುಗಳನ್ನು ಹಾಕಿ ಹುಡುಗರಿಂದ ಹಾಡಿಸುವುದನ್ನು ಕೇಳಿದ್ದೇವೆ. ಆದರೆ ಅವು ಆಗ ಸಪ್ಪೆಯಾಗಿಯೇ ಕಂಡಿವೆ. ಸ್ವರದೊಂದಿಗೆ ವೇದ ಬಂದಂತೆ, ಬೇಂದ್ರೆಯವರ ಕವನ ಅದರ ಮಟ್ಟುಗಳೊಂದಿಗೆ ಅವರಿಗೆ ಸಿದ್ಧಿಸಿದೆ. ಆ ಮಟ್ಟು ಅಲೆ ಅಲೆಯಾಗಿ ಎದ್ದು ಆನಂದವಾಗಿ ಮಂಗಳ ಲೋಕದ ಅಂಗಳಕ್ಕೆ ಏರುವುದು; ಸುಳಿ ಸುಳಿಯಾಗಿ ವಾಚಕನಲ್ಲಿ ರಸಾನುಭವವನ್ನುಂಟುಮಾಡುವುದು. ಈ ಕಾವ್ಯದ ಪೂರ್ಣ ಅನುಭವಕ್ಕೆ ಈ ಕಾವ್ಯದ ಮಾತು ಮಾತ್ರವೇ ಸಾಲದು. ಇದನ್ನು ಸೃಷ್ಟಿಸಿದ ಸಂಸ್ಕೃತಿಯೂ ಬೇಕು ಎಂದು ಗೋಚರವಾಗುವುದು. ಕೆಲವು ಕವನಗಳಂತೂ ಬೇಂದ್ರೆಯವರು ಹಾಡಿದಂತೆ ಹಾಡದಿದ್ದರೆ ಸಿದ್ಧಿಸುವುದೇ ಇಲ್ಲ. ಆದರೆ ಬೇಂದ್ರೆಯವರೇನೋ ಅದಕ್ಕೆ ಒಂದು ಮಟ್ಟು ಹಾಕಿಲ್ಲ. 'ಪಾತರಗಿತ್ತಿ ಪಕ್ಕ' ಎಂಬುದು ಇದಕ್ಕೆ ಒಂದು ಉದಾಹರಣೆ. ಒಂದು ಸಾಯಂಕಾಲ ಬೆಂಗಳೂರಿನಲ್ಲಿ ಬೇಂದ್ರೆಯವರನ್ನು ಹಿಡಿದುಕೊಂಡು ಹೋಗಿ ಶ್ರೀಮಾನ್ ಪು. ತಿ. ನರಸಿಂಹಾಚಾರ್ಯರ ಜನಸ್ಥಾನದ ಆ ದ್ವೀಪದಲ್ಲಿ ಸೆರೆ ಹಾಕಿದೆವು. ಜತೆಯಲ್ಲಿ

ಶ್ರೀಮಾನ್ ನಂ. ಶಿವರಾಮಶಾಸ್ತ್ರಿಗಳೂ ಇದ್ದರು. ಬೇಂದ್ರೆಯವರು ಕೆಲವು ಕವನಗಳನ್ನು ಹಾಡಿದ ಮೇಲೆ ಶ್ರೀ. ಶಾಸ್ತ್ರಿಗಳು ಪಾತರಗಿತ್ತಿ ಪಕ್ಕ ಹಾಡಿ ಎಂದರು. ಆ ದಿನ ಬೇಂದ್ರೆಯವರಿಗೆ ಸಹ ಆ ಕಾವ್ಯವನ್ನು ಬರೆದ ದಿನ ಉಂಟಾದ ಸ್ಫೂರ್ತಿ ಮತ್ತೆ ಉಂಟಾಗಿದ್ದಿತೆಂದು ತೋರುತ್ತದೆ. ನಮಗಂತೂ ಆ ಹಾಡನ್ನು ಕೇಳಿ ಮತ್ತರಾದ ದುಂಬಿಗಳಂತೆ ಆಯಿತು. ಬೇಂದ್ರೆಯವರು ಮತ್ತೆ ಹಾಡಿದರು; ಮತ್ತೆ ಹಾಡಿದರು; ಮತ್ತೆ ಹಾಡಿದರು. ಅವರು ಹಾಡುತ್ತಲೇ ಇದ್ದರು. ನಾವು ಕೇಳುತ್ತಲೇ ಇದ್ದೆವು. 'ಗಾಳೀ ಕೆನೀಲೇನ ಮಾಡಿದ್ದಾರ ತಾನ; ಮದಗುಣಿಕೆಯ ಮದ್ದು ಹುರುಪಿಗಷ್ಟು ಮೆದ್ದು; ಗುಲಬಾಕ್ಷಿಯ ಹೂವ ಚಪಲಾ ಕೇಳತಾವ; ಅಲ್ಲು ಓಡತಾವ ಗಲ್ಲ ತಿವೀತಾವ' ವಾತಾವರಣವೆಲ್ಲಾ ಒಂದು ವಿಧವಾದ ಗುಂ ಗುಂ ಗುಂ ಗುಂಗಿನೊಂದಿಗೆ ಸೇರಿಹೋಯಿತು. ಮನೆಯಲ್ಲಿದ್ದ ಹೆಣ್ಣುಮಕ್ಕಳಿಗೆಲ್ಲಾ ಹಾಡು ಬಾಯಿಗೆ ಬಂದುಹೋಯಿತು. ಈಚೆಗೆ ಅದೇ ಕವನವನ್ನು ಅನೇಕರು ಅನೇಕ ಬಗೆಯಲ್ಲಿ ಹಾಡಿದ್ದಾರೆ. ಆದರೆ ಬೇಂದ್ರೆಯವರ ಧಾಟಿಯೇ ಸರಿ ಎನ್ನುವುದು ಅಂದಿನಿಂದ ನನಗೆ ಖಚಿತವಾಗಿ ತೋಳಿದ ಭಾವ

ನಾನೃಷಿಃ ಕುರುತೆ ಕಾವ್ಯಂ ಎಂಬುದು ಪೂರ್ವಿಕರ ನುಡಿ ಹಾಗೆಯೇ ಮಗುವಿನಂತಹ ಸರಳವಾದ ಅಕೃತ್ರಿಮವಾದ ಹೃದಯವಿಲ್ಲದವರಿಂದಲೂ ಕಾವ್ಯ ಸೃಷ್ಟಿ ಸಾಧ್ಯವಿಲ್ಲವೆಂಬುದು ಗೊತ್ತಾಗುತ್ತದೆ ಶೋಕಃ ಶ್ಲೋಕತ್ವಮಾಗತಃ ಎಂಬುದು ಪಶುಪಕ್ಷಿ ಮೃಗಗಳ ದುಃಖದಿಂದ ಹೃದಯ ವಿದೀರ್ಣವಾಗಿ ಧಾರೆ ಧಾರೆಯಾಗಿ ಕಣ್ಣೀರನ್ನು ಸುರಿಸುವವರ ವಿಷಯದಲ್ಲಿ ಹೇಳಿದ ಮಾತೇ ಹೊರತು ಆಟಂ ಬಾಂಬು ಕಂಡುಹಿಡಿದ ನರಮೇಧ ಕರ್ತೃಗಳಿಗೆ ಅನ್ವಯಿಸುವುದಿಲ್ಲ—ಇಂಥವರಿಗೂ ಅನ್ವಯಿಸುವ ಕವಿತೆಯೊಂದನ್ನು ಬೇಂದ್ರೆ ಬರೆದಿದ್ದಾರೆ—ಇರಲಿ. ಬೇಂದ್ರೆಯವರದು ಇಂತಹ ಮಗುವಿನೋಪಾದಿಯಲ್ಲಿಯ ಸರಳತೆ. ಅವರ ಸರಳತೆ ನೋಡಿದರೆ ತಮ್ಮ ಮಹಿಮೆ ಇವರಿಗೆ ತಿಳಿದೇ ಇಲ್ಲವೇನೋ ಎನ್ನಿಸುತ್ತದೆ. ಹಿಂದೆ ತಿಳಿಸಿದ ಪು. ತಿ. ನರಸಿಂಹಾಚಾರ್ಯರ ಜನಸ್ಥಾನದ ಶಿಬಿರದಿಂದ ರಾತ್ರಿ ಹಿಂದಿರುಗುತ್ತಿರುವಾಗ ಶ್ರೀಮಾನ್ ನಿಟ್ಟೂರು ಶ್ರೀನಿವಾಸರಾಯರೂ ಬೇಂದ್ರೆಯವರೂ ಹಿಂದೆಂದೂ ಸಿಕ್ಕದಿದ್ದ ಅಸಾಧ್ಯ ಮಳೆಗೆ ಸಿಕ್ಕಿದರು. ಆಗ ಅರ್ಧ ರಾತ್ರಿಯ ಮೇಲಾಗಿದ್ದಿತು. ಹಾಸ್ಯದ ಮಾತ್ರ

ಗಳಲ್ಲಿಯೂ ಮಾತಿನ ಕಟಕಿನಲ್ಲಿಯೂ ಇಬ್ಬರೂ ಒಬ್ಬರನ್ನೊಬ್ಬರು ಮೀರಿಸಿದವರೆ. ಮಳೆ ಪಟಪಟನೆ ಬಾಣದೋಪಾದಿಯಲ್ಲಿ ರಾಚುತ್ತಿದ್ದಿತು. ಹುಡುಗರು ಮಳೆಯಲ್ಲಿ ನೆನೆಯುತ್ತಾ ಹೋಗುವಂತೆ ಇಬ್ಬರೂ ನಿಧಾನವಾಗಿ ವಿನೋದದ ಮಾತುಗಳನ್ನಾಡುತ್ತಾ ನಗುತ್ತಾ ನಗರದ ಮತ್ತೊಂದು ತುದಿಯಲ್ಲಿದ್ದ ಶ್ರೀನಿವಾಸರಾಯರ ಮನೆ ಸೇರಿದರು. ಮಾರನೆಯ ಬೆಳಿಗ್ಗೆ ಬೇಂದ್ರೆಯವರನ್ನು ನಾನು ನೋಡಿದಾಗ ಅವರು ಬಿಗಿಯಾಗಿ ಮೇಲಕ್ಕಾದ ಬನೀನು ಹಾಕಿಕೊಂಡಿದ್ದರು. ಕತ್ತಿನ ಗುಂಡಿ ಹಾಕುವಂತೆಯೇ ಇರಲಿಲ್ಲ. ನಾನು 'ಇದೇನು ಬೇಂದ್ರೆಗಳೇ, ಯಾರದೋ ಅಂಗಿ ಸಿಗಹಾಕಿಕೊಂಡು ಬಿಟ್ಟಿದ್ದೀರಿ. ನಿಮಗೆ ಅರ್ಧ ಮೈಗೆ ಸಹ ಸಾಕಾಗುವದಿಲ್ಲವಲ್ಲ?' ಎಂದೆ. ಬೇಂದ್ರೆಯವರು ನಿಟ್ಟೂರರ ಕಡೆ ಕೈ ತೋರಿಸಿ 'ನಾವು ಬರೆದುದಕ್ಕೆ ದುಡ್ಡು ಕೊಡುವವರು ಇವರು. ಆದುದರಿಂದ ಇವರ ಮೈ ಬೆಳೆಯುವಂತೆ ಇಲ್ಲ. ಅದು ಅಲ್ಪ ಪ್ರಾಣ. ಆ ಅಲ್ಪ ಪ್ರಾಣದ ಅಂಗಿ ಈ ಮಹಾ ಪ್ರಾಣಕ್ಕೆ ಅರ್ಧ ಅಂಗಿ' ಎಂದರು [ಗಾಂಧಿಯವರಲ್ಲಿ ಆರೇ ಬಟ್ಟೆಗಳಿವೆ ಎನ್ನುತ್ತಾರೆ. ಬೇಂದ್ರೆಯವರು ತಮ್ಮ ಬನೀನು ನೆನೆದರೆ ಬೇರೆಯವರ ಬನೀನನ್ನೇ ಹಾಕಿಕೊಂಡು ಬಿಡುತ್ತಾರೆ.]

ಆದರೆ ಈ ಸರಳತೆ ಮೌಢ್ಯದ ದರಳತೆಯಲ್ಲ. ಒಂದು ದಿನ ಬೇಂದ್ರೆಯವರು ಶ್ರೀಮಾನ್ ಮಾಸ್ತಿಯವರ ಆರಾಮ ಕುರ್ಚಿಯ ಮೇಲೆಯೇ ಮಲಗಿ, ಬೆಳಗಾಯಿತು. 'ಯಾಕೆ ಸ್ವಾಮಿ ಹಾಸಿಗೆ ಹಾಸಿಕೊಳ್ಳಲೇ ಇಲ್ಲವಲ್ಲ' ಎಂದೆ. 'ಅದರಿಂದ ನಿದ್ರೆ ಏನೂ ಕಡಿಮೆಯೇ ಆಗಲಿಲ್ಲ' ಎಂದರು. ಶ್ರೀಮಾನ್ ಮಾಸ್ತಿಯವರು 'ಎಳಿಸಿ ಹಾಸಿಗೆ ಹಾಸಿ ಕೊಡೋಣ ಅಂತ ನೋಡಿದೆ. ಆದರೆ ಗಾಢವಾದ ಇವರ ನಿದ್ರೆ ನೋಡಿ ಎಳಿಸುವುದಕ್ಕೆ ಮನಸ್ಸು ಬರಲಿಲ್ಲ' ಎಂದರು. ಕ್ರಿಪ್ಸ್‌ನ್ನು ನೋಡುವುದಕ್ಕೆ ಹೋದಾಗ ಗಾಂಧಿಯವರು ಸೋಡಾ ಗಾಡಿಯ ಸೋಡಾ ಪೆಟ್ಟಿಗೆಯ ಮೇಲೆಯೇ ಕುಳಿತುಕೊಂಡು ಹೋದರು. ಅನಾಸಕ್ತರ ಮಾರ್ಗಗಳೆಲ್ಲಾ ಒಂದೇ. ಅಲ್ಪವಾದುದರಲ್ಲಿ ಪೂರ್ತಿ ಸೋಲುತ್ತಾರೆ ಮುಖ್ಯವಾದುದರಲ್ಲಿ ಒಂದು ರೇಣುವಿನಷ್ಟೂ ಸೋಲುವುದಿಲ್ಲ. ವಜ್ರಕ್ಕಿಂತ ಕಠಿಣವಾದವರಾದರೂ ಹೂವಿಗಿಂತ ಮೃದು. ಈ ಸಮರಸ ಬೇಂದ್ರೆಯವರ ಸಂಸ್ಕೃತಿಯ ಫಲ. ಅವರು ಪೂರ್ಣವಾಗಿ ನಮ್ಮ ಸಂಸ್ಕೃತ ಸಂಸ್ಕೃತಿಯಲ್ಲಿ ಬೆಳೆದವರು. ಸಂಸ್ಕೃತ ಬಲ್ಲವರು. ಕನ್ನಡವನ್ನು ಹೇಗೆ

ಸೇವಿಸಬಹುದೆಂಬುದಕ್ಕೆ ಅವರ ಬಾಳೆ ಉದಾಹರಣೆ. ಅವರ ಶ್ರದ್ಧೆಯನ್ನೂ ಅನಾಸಕ್ತಿಯನ್ನೂ ಸಾತ್ವಿಕತೆಯನ್ನೂ ನೋಡಿದರೆ ಇವರು ಯಾವುದಾದರೂ ದೇವತೆಯ ಉಪಾಸಕನೋ, ಕನ್ನಡ ನಾಡಿನ ಕಾರಣ ಪುರುಷ ಮುಂದೆ ಬರುವುದನ್ನು ಅರಹುವ ಬೇಹುಗಾರ ಈತನೋ ಎಂದು ಭಾಸವಾಗುತ್ತದೆ. ಬಾಳಿನ ಹೋರಾಟವೆಲ್ಲಾ ಈ ಮನಸ್ಸಿನ ಮೇಲೆ, ಮನಸ್ಸನ್ನು ಮೃದುಮಾಡಿ ಆರ್ದ್ರ ಮಾಡಿ ಸಾಗಿದೆ. ವಿಧಿ ಕೊಟ್ಟ ಏಟುಗಳಿಂದ ಹೃದಯ ಕಲ್ಲಾಗಿಲ್ಲ. ಅಣ್ಣತಮ್ಮಂದಿರು ಮಾಡಿದ ಮೋಸದಿಂದ ಮನುಷ್ಯತ್ವದಲ್ಲಿ ನಂಬಿಕೆ ಕೆಟ್ಟಿಲ್ಲ. ನಮ್ಮವರ ಪರಸ್ಪರ ಕಲಹದಿಂದ, ನಮ್ಮ ನಾಡು ಮಂಗಳದ ನಾಡಾಗುವುದೆಂಬ ನೆಚ್ಚು ನಂದಿಲ್ಲ. ವಿಶ್ವಾಮಿತ್ರನ ಅಸ್ತ್ರಗಳನ್ನೆಲ್ಲಾ ನುಂಗಿ ನಿಂತ ವಸಿಷ್ಠನ ಬ್ರಹ್ಮದಂಡದಂತೆ ಕೆಚ್ಚೆದೆಯ ಆಳು ತನ್ನ ಬಾಳಿನ ಗುರಿಯನ್ನು ಮರೆಯದೆ ನಿಂತಿದ್ದಾನೆ. ಹೀಗೆ ತನ್ನ ಬಾಳನ್ನೇ ತಾನು, ಮೂರನೆಯ ಮನುಷ್ಯನಂತೆ ನೋಡುವುದರಿಂದಲೇ ಬೇಂದ್ರೆಯವರ ಶುದ್ಧವಾದ ಆತ್ಮವನ್ನು ಯಾವ ಕೊಳೆಯೂ ಯಾವ ದುಃಖವೂ ಹೆಚ್ಚು ಕಾಲ ಮಲಿನವಾಗಿಡಲು ಶಕ್ತವಾಗುವುದಿಲ್ಲ. ಮೋಡ ಮುಚ್ಚಿದ ಸೂರ್ಯ, ಒಂದು ಗಳಿಗೆಯ ನಂತರ ಹೊರಕ್ಕೆ ಬಂದು ಮತ್ತೆ ಜಗತ್ತಿಗೆ ಆಹ್ಲಾದವನ್ನುಂಟು ಮಾಡುವಂತೆ ಪ್ರತಿಯೊಂದು ದುಃಖ ಬೇಸರಿಕೆಯ ಪ್ರಸಂಗದಿಂದಲೂ ಬೇಂದ್ರೆ ಹೆಚ್ಚು ಕಾಂತಿಯುಕ್ತರೇ ಆಗಿ ಹೊರಬಂದು ತಮ್ಮ ಕಾವ್ಯವಾಹಿನಿಯ ಅಮೃತಧಾರೆಯಿಂದ ಈ ಸತ್ತ ಜಗಕ್ಕೆ ಚೈತನ್ಯವನ್ನಿತ್ತಿದ್ದಾರೆ.

ಬೇಂದ್ರೆಯವರ ಜತೆಯಲ್ಲಿರುವುದು ಹಾಸ್ಯದ ಅಲೆಗಳ ಮೇಲೆ ಲಾಸ್ಯವಾಡಿದಂತೆ. ಹಾಸ್ಯಕ್ಕೆ ಒಳಗಾಗದ ಯಾವ ಸನ್ನಿವೇಶವೂ ಇಲ್ಲವೇ ಇಲ್ಲವೆಂದು ರಸಿಕರ ಮತ. ಇದು ಬೇಂದ್ರೆಯವರ ನಿತ್ಯದ ಅನುಭವ. ಒಂದು ಸಲ ಬೇಂದ್ರೆಯವರ ಗೌರವಕ್ಕಾಗಿಯೇ ಒಂದು ನಾಟಕವನ್ನು ಏರ್ಪಡಿಸಿದ್ದಿತು. ಬೇಂದ್ರೆಯವರನ್ನು ಒಳಕ್ಕೆ ಕರೆದುಕೊಂಡು ಹೋಗಲು ನಾಟಕ ಗೃಹದ ಮುಂದೆ 'ದೊಡ್ಡ ಮನುಷ್ಯರು' ನಿಂತಿದ್ದರು. ಬೇಂದ್ರೆಯವರನ್ನು ದಾರಿಯಲ್ಲಿ ಯಾರೋ 'ಐದು ನಿಮಿಷ' ಎಂದು ಮನೆಗೆ ಎಳೆದುಕೊಂಡು ಹೋದರು ದಾಕ್ಷಿಣ್ಯಪರರೂ ಸರ್ವಜನ ಸುಲಭರೂ ಆದ ಅವರು ನಾಟಕಕ್ಕೆ ಹೊತ್ತಾಯಿತು ಎಂದು ಹೇಳಿದುದಕ್ಕೆ ಕರೆದವರು 'ನಾಟಕ ನಿಮ್ಮ ಗೌರವಕ್ಕೆ.

ನೀವು ಹೋದ ಹೊರತು ಪ್ರಾರಂಭವಾಗುವುದಿಲ್ಲ' ಎಂದರು. ಹೆಚ್ಚು ಚರ್ಚೆ ಮಾಡಿದರೆ ಕಾಲವ್ಯಯವಾಗುವುದೆಂದು ಬೇಂದ್ರೆ ಒಳಗೆ ಹೋದರು ಮಿತ್ರರ ಕೈಯಿಂದ ತಪ್ಪಿಸಿಕೊಂಡು ಬರುವುದು ೧೫-೨೦ ನಿಮಿಷವಾಯಿತು ಬೇಂದ್ರೆ ನಾಟಕ ಗೃಹದ ಬಾಗಿಲಿಗೆ ಬರುವ ವೇಳೆಗೆ ಅಲ್ಲಿ ಸ್ವಯಂ ಸೇವಕನ ಹೊರತು ಮತ್ತಾರೂ ಇರಲಿಲ್ಲ. ಸ್ವಯಂಸೇವಕ ತನ್ನ ನಿಯಮಕ್ಕೆ ಅನುಸಾರವಾಗಿ 'ಯಾರು ಸ್ವಾಮಿ, ಎಲ್ಲಿ ಪಾಸು' ಎಂದ. ಆವನಿಗೆ ಬೇಂದ್ರೆಯವರ ಪರಿಚಯು ವಿರಲಿಲ್ಲ. ಆಗ ಬೇಂದ್ರೆ ಹೀಗೆ ಯೋಚಿಸಿದರು. 'ನಾನು ಯಾರು ಎಂದು ಈತ ಕೇಳುವುದರಿಂದ ಇವನಿಗೆ ನನ್ನ ಪರಿಚಯುವಿಲ್ಲ ನಾನು ಯಾರು ಎಂದು ಕೇಳುವವನಿಗೆ ನನ್ನ ಹೆಸರು ಹೇಳಿ ಏನು ಪ್ರಯೋಜನ? ಹೀಗೆ ಹೇಳುತ್ತೇನೆ ಎಂದು 'ನಾನು ಬೇಂದ್ರೆಯು ಕಡೆಯುವ' ಎಂದರು. ಬೇಂದ್ರೆಯು ಕಡೆಯುವರಾದ ಮೇಲೆ ಇನ್ನೇನು ಎಂದು ಸ್ವಯಂಸೇವಕ ಅವರನ್ನು ಒಳಗೆ ಬಿಟ್ಟನು. ಈ ಸಂದರ್ಭದಲ್ಲಿ ಮದರಾಸು ಕಾಂಗ್ರೆಸ್‌ನಲ್ಲಿ ನಡೆದ ಒಂದು ಸಂಗತಿ ನನ್ನ ಜ್ಞಾಪಕಕ್ಕೆ ಬಂದಿತು ಆಗ ನಾವು ಸ್ವಯಂಸೇವಕರು ನಮ್ಮ ಮಿತ್ರರಾದ ಒಬ್ಬ ಸ್ವಯಂಸೇವಕನನ್ನು ಕಾಂಗ್ರೆಸ್ ಬಾಗಿಲಿನಲ್ಲಿ ಕಾವಲಿರಿಸಿದ್ದರು. ಬ್ಯಾಡ್ಜ್ ಅಥವ ಪಾಸು ಇಲ್ಲದೆ ಯಾರನ್ನೂ ಒಳಕ್ಕೆ ಬಿಡಕೂಡದೆಂದು ಕಟ್ಟಪ್ಪಣೆಯಾಗಿದ್ದಿತು. ಡಾಕ್ಟರ್ ಅನ್ಸಾರಿ ಕಾಂಗ್ರೆಸ್ ಅಧ್ಯಕ್ಷರು. ಅವರು ಬ್ಯಾಡ್ಜ್ ಪಾಸ್ ಯಾವುದೂ ಇಲ್ಲದೆ ಬಂದರು ಸ್ವಯಂಸೇವಕನಿಗೆ ಇವರು ಕಾಂಗ್ರೆಸ್ ಅಧ್ಯಕ್ಷ ಅನ್ಸಾರಿ ಎಂಬುದು ತಿಳಿಯಲಿಲ್ಲ. ಒಳಕ್ಕೆ ಬಿಡುವುದಿಲ್ಲ ಎಂದನು. ಎರಡು ಮೂರು ನಿಮಿಷಗಳಲ್ಲಿ ಬಾಗಿಲಿಗೆ ಉಳಿದ ಮುಖಂಡರು ಬರಲು ಸ್ವಯಂಸೇವಕನಿಗೆ ತನ್ನ ತಪ್ಪು ಗೊತ್ತಾಯಿತು. ಅವನು ಗಾಬರಿ ಯಲ್ಲಿ ಡಾಕ್ಟರ್ ಅನ್ಸಾರಿಯವರಿಗೆ 'I pardon you' ಎಂದನು. ಡಾಕ್ಟರ್ ಅನ್ಸಾರಿ ನಗುತ್ತ 'You pardon me; alright thank you' ಎಂದುಕೊಂಡು ಒಳಕ್ಕೆ ಹೊರಟುಹೋದರು. ಸ್ವಯಂಸೇವಕನಿಗೆ ಗಾಬರಿ ಶಾಂತವಾದ ಮೇಲೆ 'Pardon me' ಎಂದು ಹೇಳಬೇಕಾಗಿದ್ದಿ ತೆಂಬುದು ತಿಳಿಯಿತು. ಬೇಂದ್ರೆಯವರನ್ನು 'ನಾನು ಬೇಂದ್ರೆ' ಎಂದು ನೀವು ಹೇಳಿಕೊಳ್ಳದೆ ಬೇಂದ್ರೆಯವರ ಕಡೆಯುವರು ಎಂದು ಯಾಕೆ ಹೇಳಿದಿರಿ ಎಂದೆ. ಬೇಂದ್ರೆಯವರು ನಗುತ್ತ 'ಕೆಲವು ಸಮಯಗಳಲ್ಲಿ ನಮಗಿಂತ ನಮ್ಮ ಹೆಸರಿಗೆ ಹೆಚ್ಚು ಮಹಿಮೆ. ನಮ್ಮ ಹೆಸರು ಮಾಡುವ ಕೆಲಸ ನಮ್ಮಿಂದ ಸಾಧ್ಯವಿಲ್ಲ.

ಶ್ರೀರಾಮಚಂದ್ರನಿಗೇ ಆ ಅನುಭವವಾಯಿತು' ಎಂದರು. ಅನಂತರ ಬೇಂದ್ರೆ ಈ ಕತೆ ಹೇಳಿದರು. 'ಸಮುದ್ರಕ್ಕೆ ಸೇತುವೆ ಕಟ್ಟುತ್ತಿರುವಾಗ ರಾಮಚಂದ್ರನಿಗೆ ಈ ಕಲ್ಲುಗಳು ನೀರಿನ ಮೇಲೆ ತೇಲುವಂತೆ ಇವರು ಮಾಡುವ ಉಪಾಯ ಯಾವುದು' ಎಂದು ಯೋಚನೆ ಬಂದಿತು. ರಾಮ ಸಮುದ್ರ ತೀರದಲ್ಲಿ ಹೋಗಿ ನೋಡಿದ. ಕಪಿಗಳೆಲ್ಲಾ ಬಂಡೆಗಳನ್ನು ಹೊತ್ತುಕೊಂಡು ಒಂದು ನಳನ ಕೈಯಲ್ಲಿ ಕೊಡುತ್ತಿದ್ದರು ನಳನು ಅದರ ಮೇಲೆ 'ಶ್ರೀರಾಮ' ಎಂದು ಬರೆದು ಸಮುದ್ರದ ಮೇಲೆ ಇಟ್ಟುಬಿಡುತ್ತಿದ್ದನು ಅದು ಸುಖವಾಗಿ ತೇಲುತ್ತಿದ್ದಿತು. ಇದನ್ನು ನೋಡಿ ಶ್ರೀರಾಮಚಂದ್ರನು 'ಇಷ್ಟೇಯೆ. ನನ್ನ ಹೆಸರು ಬರೆದ ಕಲ್ಲು ಹಾಗೆ ತೇಲುವುದಾದರೆ ನಾನೇ ಇಟ್ಟ ಕಲ್ಲು ಎಷ್ಟು ತೇಲಬಹುದು?' ಎಂದುಕೊಂಡು, ರಾತ್ರಿ ಎಲ್ಲರೂ ಮಲಗಿದ್ದಾಗ ಒಂದು ಕಲ್ಲನ್ನು ತಂದು ಸಮುದ್ರದಲ್ಲಿ ಬಿಟ್ಟನು. ಕಲ್ಲು ತತ್‌ಕ್ಷಣ ನೀರಿನಲ್ಲಿ ಮುಳುಗಿ ಹೋಯಿತು. ದೂರದಲ್ಲಿ ಹನುಮಂತ ಮುಗುಳು ನಗೆ ನಕ್ಕುದು ರಾಮನಿಗೆ ಗೊತ್ತಾಯಿತು. ಹನುಮಂತನು 'ರಾಮಚಂದ್ರ, ಪ್ರಾಕೃತ ಮನುಷ್ಯರಂತೆ ನಿನಗೂ ಈ ಮಾಯೆ ಬರಬಹುದೆ? ನಿನ್ನ ಹೆಸರು ಹೇಳಿ ಬಿಟ್ಟ ಕಲ್ಲು ಸಮುದ್ರದಲ್ಲಾದರೂ ತೇಲುವುದು. ಆದರೆ ನೀನೇ ಕೈಬಿಟ್ಟ ಮೇಲೆ ಕಲ್ಲಿಗೆ ಮುಳುಗುವುದರ ಹೊರತು ಬೇರೆ ಗತಿ ಏನು?' ಎಂದನು.

ಹೀಗೆ ಹಾಸ್ಯದ ಚಟಾಕಿಯಾಗಿ ಮಕ್ಕಳಂತೆ ಇದ್ದರೂ, ಖಂಡಿತವಾಗಿ ಮಾತನಾಡಬೇಕಾದಾಗ ಬೇಂದ್ರೆಯವರು ಖಡಾಖಂಡಿತವಾಗಿಯೇ ಮಾತನಾಡುತ್ತಾರೆ. ಯಾರ ದಾಕ್ಷಿಣ್ಯಕ್ಕಾಗಿಯೂ ಹೇಳಬೇಕಾದುದನ್ನು ಇವರು ಹೇಳದೆ ಬಿಡುವುದಿಲ್ಲ ಬೊಂಬಾಯಿನ ಸಮ್ಮೇಳನದ ಸಮಯದಲ್ಲಿ ಶ್ರೀಮಾನ್ ಕೈ ಎನ್. ಎಸ್. ಸುಬ್ಬರಾಯರು 'ಕವಿಗಳು ಜನರಿಗೆ ತಿಳಿಯುವಂತೆ ಬರೆಯಬೇಕು' ಎಂದಾಗ ಶ್ರೀ. ಬೇಂದ್ರೆಯವರು 'ಜನರೂ ವ್ಯಾಸಂಗ ಮಾಡಿ ಕವಿಯ ಆಶಯವನ್ನು ಹಿಡಿಯಬೇಕು. ಜನರಂಜನೆಗಾಗಿ ಕವಿ ತನ್ನ ಮಟ್ಟವನ್ನು ತಗ್ಗಿಸಿಕೊಳ್ಳಲು ಸಾಧ್ಯವಿಲ್ಲ' ಎಂದರು. ಶಿವಮೊಗ್ಗ ಸಮ್ಮೇಳನದಲ್ಲಿ ಕೆಲವು ಸದಸ್ಯರು ಸ್ವಲ್ಪ ಮರ್ಯಾದೆ ಮೀರಿ ಕಟುವಾಗಿ ಮತ್ತೊಬ್ಬ ಸದಸ್ಯರನ್ನು ಟೀಕಿಸಿದಾಗ ಬೇಂದ್ರೆಯವರು 'ಬೈಗುಳದ ಜೋರಿನಿಂದಲೇ ನೀವು ಎದುರಾಳಿಯನ್ನು ತಗ್ಗಿಸುವೆವೆಂದು ತಿಳಿದಿದ್ದರೆ ಅದು ತಪ್ಪು. ಆ ಅಪವಾದ

ನಾವೂ ನಿಮ್ಮಷ್ಟೆ ತೀವ್ರವಾಗಿ ಪ್ರಯೋಗಿಸಬಲ್ಲೆವು' ಎಂದಾಗ ಎದುರಾಳಿಗಳಿಗೆ ಆ ಮಾತಿನ ಸತ್ಯ ಹೊಳೆಯಿತು. ತಮ್ಮ ಈ ಖಂಡಿತವಾದ ಸ್ವಭಾವದಿಂದಲೇ ಇವರು ಮೈಸೂರಿನವರಿಗೆ ಅವರ ಗುರಿಯನ್ನು ಜ್ಞಾಪಕ ಕೊಟ್ಟರು.

'ಮೈಸೂರಿನ ಜನ ಎಚ್ಚೆತ್ತು ಎದ್ದರೆ, ನಮ್ಮ ರತ್ನಸಿಂಹಾಸನವು ತನ್ನ ಅನಾದಿ ಧರ್ಮದಿಂದ ಉದ್ಧಾರಕವಾಗಿ ಬಂದರೆ ತುಂಗೆ ಕಾವೇರಿಯೊಳಗಣ ಕನ್ನಡ ನಾಡು ಸಹ ಭೂರಂಗಕ್ಕೆ ಆದರ್ಶವಾದೀತು. ಮೈ ಸೂರಲ್ಲಿ ಶಿವ–ಮುಗ್ಗಿ ಅರಳಬೇಕು ಆತ್ಮಜಾಗೃತಿ ಬೇಕು. ಮೈಸೂರಿನಲ್ಲಿ ಏನಿಲ್ಲ? ನಮ್ಮ ಭಾಷೆಯಿದೆ; ನಮ್ಮ ಶ್ರೀಮನ್ಮಹಾರಾಜರಿದ್ದಾರೆ. ನಮ್ಮ ಜನ ಇದೆ. ಶೃಂಗೇರಿ ಇದೆ. ಗೋಮಟೇಶ್ವರನಿದ್ದಾನೆ. ಬಾಬಾಬುಡಣಗಿರಿಯಿದೆ ಗೇರುಸೊಪ್ಪೆಯಿದೆ. ಹರಿಹರ ಮೇಲುಕೋಟೆ ಇವೆ. ಚಿತ್ರದುರ್ಗವಿದೆ. ಚಂದ್ರವಳ್ಳಿಯಿದೆ ಬೇಲೂರ ಚೆನ್ನಕೇಶವನಿದ್ದಾನೆ. ಶ್ರೀರಂಗ ನಂಜುಂಡೇಶ್ವರರಿದ್ದಾರೆ. ಚಾಮುಂಡಿ ಶಾರದಾಂಬೆಯರಿದ್ದಾರೆ. ಶಿಲ್ಪಾಚಾರ್ಯರಿದ್ದಾರೆ ವಾಸ್ತುಶಿಲ್ಪವಿದೆ. ವೆಂಕಟಪ್ಪನವರಿದ್ದಾರೆ. ಶ್ರೀಕಂಠಯ್ಯನವರು ಪುಟ್ಟಪ್ಪನವರು ಗುಂಡಪ್ಪನವರು ಮಾಸ್ತಿಯವರು ಇದ್ದಾರೆ. ಶೇಷಣ್ಣನವರ ವೀಣೆಯಿದೆ. ಬಿಡಾರ ಕೃಷ್ಣಪ್ಪನವರ ಗಾನದ ತಾನವಿದೆ ಆನೆಯಿದೆ. ಚಂದನವಿದೆ. ಬಂಗಾರವಿದೆ. ಕಬ್ಬು ಇದೆ. ಕಬ್ಬಿಣವಿದೆ. ಕಾಫಿ ಇದೆ. ಕಾವೇರಿ ತುಂಗಭದ್ರೆಯರಿದ್ದಾರೆ. ಮಿಂಚು ಇದೆ. ವಿಶ್ವೇಶ್ವರಯ್ಯನವರು ನಮ್ಮವರೇ ಇದ್ದಾರೆ. ನೃತ್ಯ-ನಾಟಕವಿದೆ. ಶಾಸ್ತ್ರಸಂಪತ್ತಿದೆ ಶ್ರೀ. ರಾಮನ್ ಅವರೂ ಇಲ್ಲಿಯೇ ಇದ್ದಾರೆ. ಏನಿಲ್ಲ? ಎಲ್ಲ ಎಲ್ಲ ಇದೆ ನಮ್ಮ ರತ್ನಸಿಂಹಾಸನವಿದೆ ಕೆಂಪೇಗೌಡನ ಬೆಳೆವ ಬೆಂಗಳೂರಿದೆ. ಉತ್ಸಾಹದಿಂದ ತುಂಬಿದ ತರುಣ-ತರುಣಿಯರಿದ್ದಾರೆ. ವಾನಪ್ರಸ್ಥರ ವಿಪುಲ ಸಮುದಾಯವಿದೆ. ಬೆಂಗಳೂರು ವಂಡು ಮೈಸೂರು ವಿಶ್ವವಿದ್ಯಾಲಯ ತಾತಾ ಇನ್‌ಸ್ಟಿಟ್ಯೂಟ—ಮತ್ತೇನೇನೋ ಇದೆ ಸಣ್ಣ ಬ್ರಹ್ಮಾಂಡವೇ ಇದೆ. ಆದರೆ ತಾನು ಕನ್ನಡ ಪುಣ್ಯಪುರುಷ ಭೂಮಿ. ಕನ್ನಡ ಜನವೆಲ್ಲಾ ತನ್ನದು; ಜಗತ್ತಿನ ರಾಷ್ಟ್ರಗಳಿಗೆ ಸಮಾನಸ್ಕಂಧ ತಾನು ಎಂಬ ಆತ್ಮಜ್ಞಾನವಿಲ್ಲ. ಅರಿವಿನ ಎಚ್ಚರವಿಲ್ಲ. ಎಚ್ಚರದ ಏರಿಕೆಯಿಲ್ಲ. ಏರಿಕೆಯ ಕಾರ್ಯವಿಲ್ಲ ಅಂತೆಯೇ ಕಾರ್ಯದ ಫಲವಿಲ್ಲ ಮೈಸೂರು ನಾಡಿಗೆ ಹಳೆಯ ಮಹಿಷಾಸುರನ ಪಿಶಾಚಿಯೋ ಏನೋ ಕಾಡುತ್ತಿರಬೇಕು. ಶ್ರೀ. ಚಾಮುಂಡಿ

ಕೊಟ್ಟ ದಿವ್ಯತೆಯು ಅರಿವು ಮೈದುಂಬಿ ಬರುತ್ತಿಲ್ಲ. ತುಂಗೆ ಕಾವೇರಿಗಳ ದಡ ಮೀರಿ ಸೂಸುತ್ತಿಲ್ಲ.'

ಇದು ಬೇಂದ್ರೆಯವರ ಸ್ಪಷ್ಟವಾದ ವಾಣಿ ಇದನ್ನು ಮೈಸೂರಿನ ಜನತೆಗೆ ಸಂದೇಶವೆಂದೇ ಭಾವಿಸಬಹುದು. ಚಾಮುಂಡಿ ಕೊಟ್ಟ ದಿವ್ಯತೆಯು ಅರಿವು ಮೈದುಂಬಿ ಬರುತ್ತಿಲ್ಲ ಎಂಬುದೇ ಭಾರತಕ್ಕೂ ಇರುವ ಶಾಪ. ಗಂಗೆ ಯಮುನೆಯರು ಕೊಟ್ಟ ದಿವ್ಯತೆ ಭಾರತಕ್ಕೆ ತುಂಬಿ ಬರುತ್ತಿಲ್ಲ. ಭಾರತವು ತನ್ನ ಪೂರ್ಣತೆ ತಳೆದಾಗಲೇ ಭಾರತದಿಂದ ಜಗತ್ತಿಗೆ ಉಪಕಾರವಾಗುವುದೆಂಬುದನ್ನು ಬೇಂದ್ರೆ ತಮ್ಮ ಕಾವ್ಯಗಳಲ್ಲಿ ಎಲ್ಲೆಲ್ಲಿಯೂ ಹೇಳಿದ್ದಾರೆ. ಭಾರತ ಇತರ ರಾಷ್ಟ್ರಗಳೊಂದಿಗೆ ಸಮಾನವಾಗಿ ನಿಂತಿಲ್ಲವಲ್ಲ ಎಂಬುದು ಬೇಂದ್ರೆಯವರ ಮೊದಲನೆಯ ಕೊರಗು ಅವರ ಕಾಲಪುರುಷ ಹೇಗೆ ಅವರ ಅದ್ಭುತ ಕಲ್ಪನೆಗೆ ಮಾತ್ರ ಸಿಕ್ಕಿ ರಾಜ್ಯದ ಸಾಮ್ರಾಜ್ಯದ ತಲೆ ಒಕ್ಕಿ ಮಂಡಲಗಳನ್ನೆಲ್ಲಾ ಮುಕ್ಕಿ ಯುಗ ಯುಗ ಮನ್ವಂತರಗಳನ್ನೆಲ್ಲಾ ಮೀರಿ ಮಂಗಳ ಲೋಕಕೆ ಹಾರಿ ನಿಂತಿದೆಯೋ ಹಾಗೆಯೇ ಅವರ ಭಾರತವೂ ಮೊದಲಗಿತ್ತಿ. ಈ ಭಾರತದ ಮಹಿಮೆ ಅದ್ಭುತವಾದುದು. ಜಗತ್ತಿನ ಸಂಸ್ಕೃತಿ ಹೋರಾಟಗಳೆಲ್ಲಾ ಇಲ್ಲಿ ಬಂದು ತೆಪ್ಪಗಾಗಿವೆ. ಭಾರತಿಯು ಒಕ್ಕುಡಿತೆ ಅರೆಮುಳುಗು ಎಂದು ಪಾಣಿಪತ್ತುಗಳನ್ನು ಮುಕ್ಕಳಿಸಿದ್ದಾಳೆ. ಕೊಡಲಿ ರಾಮನು ಎರೆದ ಕಣ್ಣೀರ ಜಳಕದಿಂದ ಕೂದಲು ಸಹ ನೆನೆಯಲಿಲ್ಲವೆಂದಿದ್ದಾಳೆ. ಈ ಜಗಜ್ಜನನಿ ತನ್ನ ಪೂರ್ವದ ವೈಭವದಿಂದ ಮೆರೆಯಬೇಕು. ಕನ್ನಡ ನಾಡು ತನ್ನ ಹಿರಿಮೆಯನ್ನು ಸಾಧಿಸಬೇಕು ಇದೇ ಬೇಂದ್ರೆಯವರ ಸಂದೇಶ.

ಬೇಂದ್ರೆಯವರ ಕಾವ್ಯ ಕನ್ನಡದಲ್ಲಿ ಸಾಧಿಸಿರುವ ಕಾರ್ಯವನ್ನು ಅಂದರೆ ರಾಜಕೀಯವಾದ ಕ್ರಾಂತಿಯನ್ನು ಜನಜಾಗ್ರತೆಯನ್ನು ಮತ್ತಾವ ಕವಿಯೂ ಸಾಧಿಸಿಲ್ಲ ಇವರ ಪದ್ಯಕ್ಕಾಗಿಯೇ ಸರ್ಕಾರ ಇವರನ್ನು ಬಂಧನದಲ್ಲಿಟ್ಟಿತು. ಕವಿಯು ಸ್ವೇಚ್ಛೆಯಿಂದ ಹಕ್ಕಿಯಂತೆ ತನಗೆ ತೋರಿದುದನ್ನು ಹಾಡಿದುದಕ್ಕಾಗಿ ಅವನನ್ನು ಬಂಧನದಲ್ಲಿಟ್ಟ ಉದಾಹರಣೆ ಭಾರತದಲ್ಲಿ ಮತ್ತೆಲ್ಲಿಯೂ ಇಲ್ಲ. ಅಂದರೆ ಕವಿಗಳ ಮೇಲೆ ಸರಕಾರದ ವಕ್ರದೃಷ್ಟಿ ಬಿದ್ದಿಲ್ಲವೆಂದಲ್ಲ. ಆದರೆ ಅವರನ್ನು ಸರ್ಕಾರ ಬಂಧಿಸಿದುದು ಅವರು ರಾಜಕೀಯದಲ್ಲಿ ಪ್ರವೇಶಿಸಿ ಮಾಡಿದ ಚಳುವಳಿಗಾಗಿ. ಆದರೆ ಬೇಂದ್ರೆಯವರನ್ನು ಅವರು ರಾಜಕೀಯ

ವಲ್ಲದ ಪದ್ಯಗಳನ್ನು ಬರೆದು ಹಾಡಕೊಳ್ಳುತ್ತಿದ್ದುದಕ್ಕಾಗಿಯೇ ಬಂಧಿಸಿದರು. ಅಂದರೆ ರಾಜಕೀಯ ಚಳುವಳಿಗಾರನಲ್ಲದವನು ಬರೆದರೂ ಅವುಗಳ ಕ್ರಾಂತಿಯ ಸ್ವಭಾವ ಹಾಗೆ ಇದ್ದವು. ಇನ್ನು ಬೇಂದ್ರೆಯವರು ರಾಜಕೀಯ ಆಂದೋಳನಕ್ಕಾಗಿಯೇ ಪ್ರಚಾರ ಸಾಹಿತ್ಯವನ್ನು ಬರೆದಿದ್ದರೆ ಅದರ ಫಲ ಹೇಗೆ ಆಗುತ್ತಿದ್ದಿತೆಂಬುದು ಊಹನೆಯಿಂದ ಮಾತ್ರ ಅರಿಯಬಹುದಾದ ಮಾತು. ಬೇಂದ್ರೆಯವರು ಮಗುವಿನಂತೆ ಕೋಮಲವಾಗಿರುವಂತೆಯೇ ಅವರ ಮಾತುಗಳು ಅವಶ್ಯಕವಾದಾಗ ಗಂಡುಮೆಟ್ಟಾಗುತ್ತವೆ. ವೀರವಾಣಿ ಸಿಡಿಲು ಗುಡುಗು ಬಾಂಬು ಆಗುತ್ತವೆ. ' ಮೂವತ್ತುಮೂರು ಕೋಟಿ ' ನಮ್ಮವರ ಹೃದಯವನ್ನು ಕೆಣಕಿದಂತೆ ಪರರ ಕಣ್ಣನ್ನು ಕೆರಳಿಸಿದವು. ' ತುತ್ತಿನ ಚೀಲ ' ನಮ್ಮ ಎದುರಾಳಿಗಳ ಕಣ್ಣಿಗೆ ಮದ್ದಿನ ಚೀಲವೇ ಆಯಿತು. ನರಬಲಿ ' ಇದುವೆ ಕಾಳಿಯ ಪೂಜೆಯು ಶುದ್ಧ, ಇದಕ್ಕೆ ಹುಂಬರು ಎಂಬರು ಯುದ್ಧ ' ಸರ್ಕಾರವನ್ನೇ ಬೇಂದ್ರೆಯವರ ಮೇಲೆ ಕೆಡವಿತು. ಸರ್ಕಾರ ಇವರ ಕೆಲಸ ಕಿತ್ತುಕೊಂಡಿತು. ಮುಗದಿನಲ್ಲಿ ಇವರನ್ನು ಬಂಧನದಲ್ಲಿರಿಸಿತು. ಅದೇನೂ ಆಶ್ಚರ್ಯವಲ್ಲ. ಸರ್ಕಾರಗಳು ಮತ್ತೇನನ್ನೂ ಮಾಡಲು ಅರಿಯದವು. ಸರ್ಕಾರ ಕವಿಯ ಸ್ವಾತಂತ್ರ್ಯವನ್ನು ಅಪಹರಿಸಿತೇ ಹೊರತು ಕವಿಯ ಕವಿತಾಶಕ್ತಿಯನ್ನು ಅಪಹರಿಸಲಿಲ್ಲ. ಒಂದು ಸಲ ಬ್ರಹ್ಮನಿಗೆ ರಾಜಹಂಸಗಳ ಮೇಲೆ ಸಿಟ್ಟು ಹತ್ತಿತಂತೆ. ರಾಜಹಂಸಗಳು ಮಾನಸಸರೋವರಕ್ಕೆ ಬರದಂತೆ ಬ್ರಹ್ಮ ಅಪ್ಪಣೆ ಮಾಡಿದ. ಒಂದು ಹಂಸವು ಬ್ರಹ್ಮನಿಗೆ ' ನೀನು ನಮ್ಮನ್ನು ಮಾನಸ ಸರೋವರಕ್ಕೆ ಬರದಂತೆ ತಡೆಯಬಹುದು, ಆದರೆ ಹಾಲನ್ನೂ ನೀರನ್ನೂ ಬೇರೆ ಮಾಡುವ ನಮ್ಮ ಶಕ್ತಿಯನ್ನು ಕಿತ್ತುಕೊಳ್ಳಲಾರೆ ' ಎಂದಿತಂತೆ.

ಬೇಂದ್ರೆಯವರ ಕಾವ್ಯವನ್ನು ಅರಿಯುವುದು ಅವರ ಸ್ವಭಾವವನ್ನು ಅರಿತಂತೆಯೇ. ಇಂತಹ ಪರಿಚಯಾತ್ಮಕವಾದ ಚಿಕ್ಕ ಪ್ರಬಂಧದಲ್ಲಿ ಅವರು ರಚಿಸಿರುವ ಕವನಗಳ ಹೆಸರನ್ನು ಹೇಳುವುದಕ್ಕೂ ಸ್ಥಳ ಸಾಲದು. ಶ್ರೀಮಾನ್ ಪು. ತಿ. ನರಸಿಂಹಾಚಾರ್ಯರು ಒಂದೆಡೆ ಹೇಳಿದಂತೆ ' ಬೇಂದ್ರೆಯವರ ಕಾವ್ಯಗಳನ್ನು ವಿಮರ್ಶಿಸುವ ಕಾಲ ಹೋಯಿತು. ಇನ್ನು ಅವು ವ್ಯಾಖ್ಯಾನಕ್ಕೆ ತಕ್ಕುವು ' ಎಂಬುದು ನಿಜ. ಬೇಂದ್ರೆಯವರ ಕವನಗಳ ವ್ಯಾಖ್ಯಾನವನ್ನು

ನಾವು ಬರಿಯ ಬುದ್ಧಿಯಿಂದ ಮಾತ್ರ ಮಾಡುವುದಕ್ಕೆ ಹೋದರೆ ಅದರ ಆಳ, ಸ್ವಾರಸ್ಯ, ಸಂದೇಶ ನಮಗೆ ಖಂಡಿತ ದೊರಕುವುದಿಲ್ಲ. ಅವರ ಕವನಗಳನ್ನು ನಮ್ರತೆಯಿಂದಲೇ ಸವಿಯಬೇಕು ಪ್ರೇಮ ಸೌಂದರ್ಯ ತ್ಯಾಗ ಇವುಗಳ ಮಾನ ದಂಡದಿಂದಲೇ ಅವನ್ನು ಅಳೆಯಬೇಕು. ನನ್ನ ಮನಸ್ಸು ನನ್ನ ಕಾರ್ಯ ನನ್ನ ಶಕ್ತಿ ಎಲ್ಲವೂ ಯಾವಾಗಲೂ ಭಾರತ ಸ್ವಾತಂತ್ರ್ಯಸಾಧನೆಗೆ ಆಗಲಿ ಎಂಬುದು ಈ ಕವಿಯ ವ್ರತ. ದೇಶಕ್ಕಾಗಿ 'ಗಂಡುಸಾದರೆ ನಿನ್ನ ಬಲಿಕೊಡುವಿಯೇನು' ಎಂದು ಎದೆ ನಡುಗುವ ಗಂಡು ಪ್ರಶ್ನೆಯನ್ನು ಇವರು ಹಾಕುತ್ತಾರೆ. ನಮ್ಮವರ ದಾರಿದ್ರ್ಯ ದೀನತೆ ಹಸಿವು ಇವರ ಬಗೆಯನ್ನು ಬಹಳ ಕದಡಿದೆ. ಬಡವರ ಹೊಟ್ಟೆಗಿಲ್ಲದವರ ಸಂಕಟ ಇವರ ಕಾವ್ಯವಾಣಿಯನ್ನು ಕೆರಳಿಸಿದೆ. ಧನಿಕರ ಔದ್ಧತ್ಯದಿಂದ ಇವರು ಔಡು ಕಚ್ಚಿದ್ದಾರೆ. 'ದೈವವುಳ್ಳವರಿಗೆ ದಯವೇ ಇಲ್ಲ ತಿತ್ತಿರಿ ತಂಬಿದೆ ಬೊಕ್ಕಸದೊಡಲು ಆದರೆ ಬರಿದೊ ಬರಿದು ತೆರವೊ ತೆರವು ಬಡವರ ಬಗ್ಗರ ತುತ್ತಿನ ಚೀಲ'. ಬಡವರ ಹಸಿವು ಜಗತ್ತನ್ನೇ ಸುಡುತ್ತಿದೆ. ಈ ಹಸಿವನ್ನು ಆರಿಸದ ದೇವರುಗಳಿಂದ ತಾನೇ ಪ್ರಯೋಜನವೇನು? ಅವತಾರಗಳಿಂದ ತಾನೆ ಪ್ರಯೋಜನವೇನ ? ಪ್ರಾಣದೇವರು ನಿತ್ರಾಣನಾಗಿ ಒಂದು ಕಡೆ ವಸುಂಧರೆ ಮತ್ತೊಂದು ಕಡೆ ರತ್ನಾಕರ—ಇವರ ನಡುವೆ ಬಿದ್ದು ನರಳುತ್ತಿದ್ದಾನೆ. ಸಿಡುಕು ದೇವ ಬರುತ್ತಾನೆ ಮಿಡುಕುವ ದೇವ (ರಾಮ ಸೀತೆಗಾಗಿ ಮಿಡುಕುತ್ತಿದ್ದಾನೆ ಎಂದು ಒಂದು ಸಲ ಬೇಂದ್ರೆ ಹೇಳಿದರು) ಬರುತ್ತಾನೆ. ಯಾರು ಬಂದರೂ 'ಅನ್ನದೇವರು ಮಾತ್ರ ಇನ್ನೂ ಬರಲಿಲ್ಲೋ ಇನ್ನೂ ಬರಲಿಲ್ಲ'.

ಬೇಂದ್ರೆಯವರ ಕವನಗಳಲ್ಲಿ ಉದ್ದಕ್ಕೂ ಬಡವರ ಮೇಲಿನ ಈ ಕನಿಕರ ಒಡೆದು ಕಾಣುತ್ತದೆ. ಅದು ಅವರ ಸ್ವಭಾವದ ಪ್ರತಿಬಿಂಬ. ಅನ್ನಾವತಾರದಂತಹ ಒಂದು ಪದ್ಯ ಬಂಗಾಳಾ ಕ್ಷಾಮವನ್ನು ಕುರಿತು ನೂರು ವರದಿಗಳು ಮಾಡದಿರುವ ಕೆಲಸವನ್ನು ಮಾಡಿದೆ. ಪ್ರಗತಿಶೀಲರು ಇದನ್ನು ತಮ್ಮ ರಾಷ್ಟ್ರಗೀತೆಯಾಗಿ ಇಟ್ಟುಕೊಳ್ಳಬಹುದು. ದೇಶದ ದಾರಿದ್ರ್ಯ ಕವಿಯ ಹೃದಯವನ್ನು ಕಲಕಿದಂತೆ ಹೆಣ್ಣಿನ ಕಷ್ಟವೂ ಕವಿಯನ್ನು ಶೋಕದಲ್ಲಿ ಮುಳುಗಿಸಿದೆ. ಬೇಂದ್ರೆಯವರು ಮುಗದಿನಲ್ಲಿ ಬಂಧನದಲ್ಲಿದ್ದಾಗ ನಡೆದ ಒಂದು ಸಂಗತಿಯನ್ನು ಕುರಿತು 'ಹೆಣದ ಹಿಂದೆ' ಎಂಬ ಹೆಸರಿನ

ಕವನವೊಂದನ್ನು ಬರೆದರು. ಸತ್ತವನ ಹೆಣದ ಹಿಂದೆ ಬಾಲವಿಧವೆ ಹೋಗುತ್ತಿದ್ದಾಳೆ. ತಲೆ ಕೆದರಿಕೊಂಡು ಬಾಯಿ ಬಡಕೊಳ್ಳುತ್ತಿದ್ದಾಳೆ. ಕವಿಯ ಹೃದಯವನ್ನು ಕೊಡಲಿಯಿಂದ ಸೀಳಿದಂತೆ ಆಗುತ್ತದೆ. ಆ ಪುಟ್ಟ ವಿಧವೆಯ ಮದುವೆಯನ್ನು ಕವಿ ಜ್ಞಾಪಿಸಿಕೊಳ್ಳುತ್ತಾನೆ

'ಕೊರಳ ಕರಿಮಣಿ, ಗಲ್ಲದರಿಷಿಣವು ಮುಗಬೊಟ್ಟು
ಆ ಮೇಲೆ ಉದ್ದು ಕುಂಕುಮದ ಅಂದ
ಆ ಪುಟ್ಟ ಮುತ್ತೈದೆ ಪುಟಪುಟನೆ ನೆಗೆದಾಡೆ
ಇಷ್ಟೆ ಕಂಡಿತು ಕಣ್ಣಿಗೆಷ್ಟೊ ಚೆಂದ.'

'ತನ್ನ ದುಃಖ ನುಂಗಿಕೊಂಡು
ಅವಳು ಹಸಿವ ಕಳೆಯಬೇಕು
ತಾನೆ ಅತ್ತು ಹಾಡಿಕೊಂಡು
ತನ್ನ ತಾನೆ ರಮಿಸಬೇಕು
ಅವಳಿಗಾವ ಕೆರೆಯ ದಾರಿ
ಹೆಣ್ಣು ಪಾಡು ನಾಯಿ ಪಾಡು
ಎಂದುದೆಷ್ಟೊ ಸಲವೋ ಏನೊ
ಜೀಡ ಬೇಡ ಹೆಣ್ಣು ಜನ್ಮ
ಬಯ್ದುಕೊಂಡುದೆಷ್ಟು ಸಲವೊ
ಮುಂದೆ ಹೇಗೆ ಮುಂದೆ ಹೇಗೆ
ಒಂದೆ ಒಂದೆ ಮಾತು ಮತ್ತೆ'

ಆದರೆ ಸಮಾಜ ಅವಳ ದುಃಖಕ್ಕೆ ಅವಳನ್ನು ಬಿಟ್ಟೀತೆ?

'ಹತ್ತು ದಿವಸಕೆ ಹಾಳು ಮುತ್ತೈದೆತನ ಹೋಗಿ
ವೈಧವ್ಯ ಸಂಪತ್ತು ಪಡೆದಳಾಕೆ
ಮನೆಯವರು ವೈದಿಕರು ಊರು ಧರ್ಮದ ತವರು
ಶಾಸ್ತ್ರವಿರೆ ಬೇರೆಯ ವಿಚಾರವೇಕೆ

ತಲೆಭಾರ ಇಳಿದಿತ್ತು ಅಂಗಾರ ಬೆಳೆದಿತ್ತು
ಮೈಯನ್ನು ಮುಚ್ಚಿತ್ತು ಕೆಂಪು ಸೀರೆ
ಆದರಯ್ಯೊ ಪಾಪ ಆಕೆಯಿನ್ನೂ ಮಗುವು
ಸಿಂಗಾರವಿರದೆ ಆ ಮಾತು ಬೇರೆ

ಹಿಟ್ಟಿ ಅವಲಕ್ಕಿಗಳ ಮೂಲಕ್ಕೆ ಹುಟ್ಟಿದಳೊ
ಹೂ ಬತ್ತಿ ಹೊಸೆಯಲಿಕೆ ವೈತಳೆದಳೋ '

ಆದರೆ ಈ ಅನ್ಯಾಯವನ್ನು ದೇವರು ಸುಮ್ಮನೆ ಬಿಡುವುದಿಲ್ಲ. ಬರುತ್ತಿರುವ ಕ್ರಾಂತಿ ಕವಿಯ ಕಣ್ಣಿಗೆ ಕಾಣುತ್ತದೆ. ಅವಳ ದುಃಖ ಜಗತ್ತನ್ನು ನಾಶ ಮಾಡಲು ಸಾಕು. ಆ ದುಃಖ

ತುಳಿದೇ ಬಿಡುವೆ ಬಾಳನೆಲ್ಲ
ಎಂಬ ಸೊಲ್ಲ ಹುಟ್ಟಿಸುವುದು
ಆನಂದ ಸ್ಪಂದದಿಂದ
ಹುಟ್ಟಿ ಬಂದ ಸೃಷ್ಟಿಯಿಂದ
ಇಂಥ ಮಾತು ಹುಟ್ಟಬೇಕೆ

ಕವಿ ಕುರುಡನಲ್ಲ. ತನ್ನವರು ಸ್ತ್ರೀಗೆ ಮಾಡಿದ ಅನ್ಯಾಯ ಆತನಿಗೆ ಗೊತ್ತು. ಅವನು ಹೀಗೆ ಸಮಾಧಾನಪಡಿಸುತ್ತಾನೆ.

ಕಾಳಿಯಂತೆ ಕೇಣಗೊಂಡು
ಶಿವನ ಎದೆಯ ತುಳಿಯಲೆಂದು
ಅಡಿಯನೆತ್ತಬೇಡ ತಾಯಿ
ಬಂದುದೆಲ್ಲದಕ್ಕೆ ನೀನು
ತಲೆಯನೊಡ್ಡಬಿರಲು ನಮಗೆ
ನಿಲ್ಲೆ ನೆಲೆಯು ಎಲ್ಲು ಇಲ್ಲ
ನಮ್ಮ ಕಾಲ ಹಾದಿ ನೀನು
ನಿನ್ನ ತುಳಿವೆವೆಂದರೇನು
ನಿನ್ನ ಮೈಯ ಮಣ್ಣು ನಮ್ಮ
ಮನೆಗಳನ್ನು ಕಟ್ಟುತಿಹುದು

ಬೇಂದ್ರೆಯವರ ಸ್ವಭಾವದಲ್ಲಿ ದುಃಖ ಹಾಸ್ಯ ಪ್ರೀತಿ ಮೂರೂ ಸಮನಾಗಿ ಬೆರೆತಿವೆ. ಪ್ರೀತಿಯು ಅವರ ಕಾವ್ಯಗಳಲ್ಲಿ ಬರಿಯ ಕಾಮವಾಗಿ ಉಳಿದಿಲ್ಲ. ಹೆಣ್ಣು ಗಂಡುಗಳ ಆತ್ಮವನ್ನು ಉದ್ಧಾರ ಮಾಡುವ ತೇಜಶ್ಶಕ್ತಿ ಅದು. ಕವಿಯು ಸೌಂದರ್ಯ ದೇವಿಗೆ

ಓಂ ನಮೋ ನಲ್ ಎಂದು ಇಂದು ಎಲ್ಲರ ನಲ್ಲೆ ವಂದಿಸುವೆ ಮುಂದೆ ಬಂದು
ನನ್ನ ಮನ ಕಂಡಿತಾ ನನ್ನಿ ಪ್ರಸನ್ನತೆಯು ನಿನ್ನೆದೆ ಪ್ರಸಾದವೆಂದು

ನಮಿಸುತ್ತಾನೆ. ಪ್ರಕೃತಿಯು ತಳೆಯುವ ವಿಧವಿಧಗಳಾದ ಬೆಡಗುಗಳೆಲ್ಲಾ ಆತನ ಪ್ರೇಮ ಉಪಾಸನೆಗೇ ಸಹಾಯವಾಗುತ್ತವೆ. ಮುಗಿಲ ಮಾರಿಗೆ ರಾಗ ರತಿಯ ನಂಜು ಏರುತ್ತದೆ; ಬಿದಿಗೆ ಚಂದ್ರನಾ ಜೋಗಚೀ ನಗ ಹೂ ಮೆಲ್ಲಗೆ ಮೂಡುತ್ತದೆ; ಮೇಲಕ್ಕೆ ಬೆಳ್ಳಿಯನ್ನು ಕೂಡುತ್ತದೆ.

ಇರುಳ ಹೆರಳಿನ ಅರಳ ಮಲ್ಲಿಗೀ ಜಾಳಿಗ ಹಾಂಗಿತ್ತ
ಸೂಸ್ಯಾವ ಚಿಕ್ಕಿ ಅತ್ತಿತ್ತ
ಮಳ್ಳ ಗಾಳಿ ಸುಳಿ ಕಳ್ಳ ಕೈಲೆ ಸೆರಗನು ಹಿಡದಿತ್ತ
ಮತ ಮತ ಬೆರಗಿಲೆ ಬಿಡತಿತ್ತ
ಒಂದ ಮನದ ಗಿಣಿ ಹಿಂದೆ ನೆಳ್ಳಿಗೆ ಬೆನ್ನಿಲೆ ಬರತಿತ್ತ
ತನ್ನ ಮೈ ಮರ ಮರತಿತ್ತ

ಈ ಸುಖವಾದ ಸನ್ನಿವೇಶಕ್ಕೆ ಅನುಗುಣವಾಗಿ ನಲ್ಲನಿಗೆ ನಲ್ಲೆ ಗೋಚರ ವಾಗುತ್ತಾಳೆ.

ನಾರಿ ನಿನ್ನ ಮಾರೀಮ್ಯಾಗ
ನಗೀನವಿಲು ಆಡತಿತ್ತ
ಆಡತಿತ್ತ ಓಡತಿತ್ತ
ಮುಗಿಲ ಕಡೆಗೆ ನೋಡತಿತ್ತ
ಕಣ್ಣಿನಾಗ ಬಣ್ಣದ ನೋಟ
ತಕ ತಕ ಕುಣಿದಾಡತಿತ್ತ
ಕುಣೀತಿತ್ತ ಮಣೀತಿತ್ತ
ಒನಪಿಲೆ ವನದಾಡತಿತ್ತ

ಬೇಂದ್ರೆಯವರು ಪ್ರೇಮದ ಮೀಮಾಂಸೆಯನ್ನು ಸಖೀಗೀತದಲ್ಲಿ ಅನುಭವದ ಹಿನ್ನೆಲೆಯಲ್ಲಿ ವರ್ಣಿಸಿದ್ದಾರೆ. ಬೇಂದ್ರೆಯವರ ಹಾಸ್ಯ ಸಹ ಬರಿಯ ಬರಡು ಒಣಗಿದ ಹಾಸ್ಯವಲ್ಲ. ನಾಯಿಮರಿಯಂತಹ ಮಕ್ಕಳಿಗೆ ಬರೆದ ಪದ್ಯದಲ್ಲಿ ಸಹ ಕರುಣೆ ಕಣ್ಣೀರನ್ನು ಮಿಡಿಸುತ್ತದೆ. ಅವರ್ಣನೀಯ ಸೌಂದರ್ಯದ ಹಾಸ್ಯದಲ್ಲಿ ಸಹ ಸೌಂದರ್ಯ ಸ್ವಾಭಾವಿಕವಲ್ಲ ಎಂಬ ಒಂದು ಕೊರಗಿದೆ.

ತುಟಿಗಳನು ಬಣ್ಣಿಸಲೆ? ತುಂಬೆಲ್ಲ ತಂಬುಲವು
ಹಲ್ಲುಗಳ ಬಣ್ಣಿಸಲೆ? ನಿನ್ನವಹುದೊ?

ಸಾರಣೆಯು ಕಾರಣೆಯು ಗಲ್ಲಗಳ ಬಣ್ಣಿಸಲೆ?
ಆ ಬಣ್ಣನೆಯು ಏನು ನಿನ್ನದಹುದೊ?

ಪ್ರೇಮುಕ್ಕೆ ತೆಂಗಾಳಿಯಾದ ರಸಿಕಾ ಪೇಳೋ ಎಂಬ ಪದ್ಯದಲ್ಲಿ ಸಹ 'ಪ್ರೇಮ ಯಾವಾಗಲೂ ಪೂರ್ಣವಿಲ್ಲ. ಅದರಲ್ಲಿ ಒಂದು ಕೊರತೆ ಇದ್ದೇ ಇದೆ' ಎಂಬ ಭಾವವಾಗುತ್ತದೆ

ಕಬ್ಬಿನ ಗಣೆ ಡೊಂಕು ಆದರ ಹಾಲವು ಡೊಂಕೆ ರಸಿಕಾ ಪೇಳೊ
ಹುಬ್ಬಿನ ಗೆರೆ ಡೊಂಕು ಕಣ್ಣನೋಟವು ಡೊಂಕೆ ರಸಿಕಾ ಪೇಳೊ
ಬಿಲ್ಲ ಕಂಬಿಯು ಡೊಂಕು ಬಿಟ್ಟ ಬಾಣವು ಡೊಂಕೆ ರಸಿಕಾ ಪೇಳೊ
ಹಲ್ಲ ಸಾಲದು ಡೊಂಕು ಬಿದ್ದ ಕಿರಣವು ಡೊಂಕೆ ರಸಿಕಾ ಪೇಳೊ
ಬಿದಿಗೆ ಚಂದ್ರಮ ಡೊಂಕು ಬೆಳದಿಂಗಳದು ಡೊಂಕೆ ರಸಿಕಾ ಪೇಳೊ
ಬಿದಿಯಿತ್ತ ಕುಲ ಡೊಂಕು ನನ್ನ ಪ್ರೀತಿಯು ಡೊಂಕೆ ರಸಿಕಾ ಪೇಳೊ

ಪ್ರೇಮದ ವ್ಯಾಪಾರದಲ್ಲಿ ಕೊಡುವುದು ಮಾತ್ರವೇ ಹೊರತು ತೆಗೆದು ಕೊಳ್ಳುವುದಿಲ್ಲವೆಂಬುದು ಕವಿಗೆ ಗೊತ್ತು. ಪ್ರೇಮ ವ್ಯವಹಾರವಲ್ಲ; ತ್ಯಾಗ. ಗಳಿಗೆ ಗಳಿಗೆಗೂ ದುಃಖದ ಕಾರ್ಮೋಡಗಳು ಎದ್ದು ಸುಖವನ್ನೂ ಶಾಂತಿಯನ್ನೂ ಹಾಳುಮಾಡುತ್ತವೆ. ಅತೃಪ್ತಿ, ಒಳಕ್ಕೆ ಸೇರಿಕೊಳ್ಳಲು ಬಾಗಿಲನಲ್ಲಿಯೇ ಕಾಯುತ್ತಿರುತ್ತದೆ.

ಹಳ್ಳದ ದಂಡ್ಯಾಗ ಮೊದಲೀಗೆ ಕಂಡಾಗ। ಏನೊಂದು ನಗಿ ಇತ್ತ
ಏನೊಂದು ನಗಿ ಇತ್ತ ಏನೊಂದು ನಗಿ ಇತ್ತ। ಏರಿಕೆ ನಗಿ ಇತ್ತ

ಆ ನಗು ಈಗ ಏನಾಯಿತು? ಅಂದು ಕಟ್ಟಿದ ಸ್ವರ್ಗ ಈಗ ಎಲ್ಲಿ? ಮಾತ-ಮಾತಿಗೆ ಈ ವಿರಸ ಯಾಕೆ? ನಾನೊಂದು ನೆನೆದರೆ ನೀನೊಂದು ನೆನೆಯುತಿ? ನನಗೆ ಯಾಕೆ ಮುನಿಯುತಿ? ಎಂದು ಕವಿಯು ಚಿಂತಿತನಾಗುತ್ತಾನೆ ಕೊನೆಗೆ ಬಾಳೆ ಹೀಗೆ. ಇದರಲ್ಲಿ ಸುಖ ದುಃಖ ಸಮ ಸುಖವನ್ನು ಕಷ್ಟಾದರೂ ಅನುಭವಿಸುವುದೇ. ಅಳುವನ್ನು ನುಂಗಿ ನಗಬೇಕು. ನಕ್ಕವನೇ ಗೆದ್ದ. ಅತ್ತವನೇ ಸತ್ತ

ಹುಸಿ ನಗುತ ಬಂದೇವ ನಸು ನಗುತ ಬಾಳೋಣ
ತುಸು ನಗುತ ತೆರಳೋಣ
ಬಡ ನೂರು ವರುಷಾನ ಹರುಷಾದಿ ಕಳೆಯೋಣ
ಯಾಕಾರೆ ಕೆರಳೋಣ

ಬಡತನ ಒಡೆತನ ಕಡೆತನಕುಳಿದಾವೇನ
ಎದೆ ಹಿಗ್ಗು ಕಡೆಮುಟ್ಟ
ಬಾಳೀನ ಕಡಲಾಗ ಅದನು ಮುಳುಗಿಸಬೇಡ
ಕಡಗೋಲು ಹಿಡಿಹುಟ್ಟ

ಹೀಗೆ ಪ್ರೇಮದ ನಾವೆಯನ್ನು ಸಾಗಿಸಿ ಬಾಳನ್ನು ಬಾಳಬೇಕು. ಯಾವುದಿಲ್ಲದಿದ್ದರೂ ಆಗುತ್ತದೆ. 'ನಾನು ಬಡವಿ ಆತ ಬಡವ, ಒಲವೆ ನಮ್ಮ ಬದುಕು, ಬಳಸಿಕೊಂಡೆವದನೆ ನಾವು ಅದಕು ಇದಕು ಎದಕು' ಹೀಗೆ ಜಗತ್ತಿನ ಸೃಷ್ಟಿಯು ಸಾಗುತ್ತಿದೆ. ಗಂಡು ಯಾವುದೋ ಹೆಣ್ಣು ಯಾವುದೋ; ಪ್ರೇಮ ಒಂದನ್ನೊಂದು ಬೆಸೆಯುತ್ತದೆ.

ಆ ಮುಖಾ ಈ ಮುಖಾ
ಯಾವ ಗಂಡೋ ಯಾವ ಹೆಣ್ಣೊ
ಪ್ರೀತಿಯೆಂಬ ಚುಂಬಕಾ
ಕೂಡಿಸಿತ್ತು ಆಡಿಸಿತ್ತು
ಕೂಡಲದೊಲು ನೋಟವಾ
ಮೂರು ದಿನದ ಆಟವಾ

ಬೇಂದ್ರೆಯವರ ಕಲೆ, ಕಲ್ಪನೆಯು, ಸಚ್ಚಿದಾನಂದ ಬ್ರಹ್ಮದಲ್ಲಿ ಭೃಂಗದ ಬೆನ್ನೇರಿ ಬರುತ್ತಿದ್ದರೂ ಅವರ ಬೇರು ಜನಪದದಲ್ಲಿಯೇ ಇದೆ. ಅವರ ಮಾತಿನಲ್ಲಿ ಕವನದಲ್ಲಿ ಒಂದು ಸಂಸ್ಕೃತ ಪದವೂ ಇಲ್ಲ. ಅವರು ಆರಿಸುವ ಮಟ್ಟುಗಳೆಲ್ಲಾ ಜನಪದ ಸಾಹಿತ್ಯದ, ರಾಗಿ ಬೀಸುವ ಹಾಡುಗಳ ಮಟ್ಟುಗಳೇ. ಅವುಗಳನ್ನೆಲ್ಲಾ ಅವರು ಜನಜೀವನದ ಸಂಪರ್ಕದಿಂದಲೇ ಹೊಂದಿದ್ದಾರೆ. ಅದೇ ಬೇಂದ್ರೆಯವರ ಬಲ. ಅವರ ಕವನ ಜನರನ್ನು ಹಾಗೆ ಆಕರ್ಷಿಸುತ್ತಿರುವುದಕ್ಕೂ ಅದೇ ಕಾರಣ. ಒಂದು ಸಲ ಅವರು ಕುಣಿಯೋಣು ಬಾರ ಕವನವನ್ನು ಹಾಡುವುದನ್ನು ಮೂರು ವರುಷ ನಿಲ್ಲಿಸಿಬಿಟ್ಟರು. 'ಕೆಲವು ದಿನ ಹಾಡುವುದಿಲ್ಲ, ಜನ ಮರೆತರೆ ಮರೆಯಲಿ' ಎಂಬುದು ಅವರ ಅಭಿಪ್ರಾಯವಾಗಿದ್ದಿತು. ಆದರೆ ಜನ ಒಳ್ಳೆಯದನ್ನು ಎಂದಿಗೂ ಸಾಯಗೊಡುವುದಿಲ್ಲ. ಜನದ ಬಾಯಲ್ಲಿ ಕನ್ನಡ ಇರುವ ವರೆಗೆ ಬೇಂದ್ರೆ ಹೆಸರು ಇದ್ದೇ ಇರುತ್ತದೆ.

ನನ್ನ ಸ್ನೇಹಿತರೊಬ್ಬರು 'ಬೇಂದ್ರೆ ಈ ಐವತ್ತು ವರುಷದಿಂದ ಏನು ಆಸ್ತಿ ಮಾಡಿದ್ದಾರೆ' ಎಂದು ಕೇಳಿದರು. ಅವರಿಗೆ ನಾನು ತತ್‌ಕ್ಷಣ ಜವಾಬು

ಕೊಡಲಿಲ್ಲ. ಬೇಂದ್ರೆಯವರ ಕೆಲಸ ಹೋದಾಗ ಅವರನ್ನು ನಾನು 'ಮುಂದೆ ಎಲ್ಲಿಗೆ ಹೋಗುತ್ತೀರಿ' ಎಂದೆ. ಬೇಂದ್ರೆ ಧಾರವಾಡಕ್ಕೆ ಎಂದರು. ಅದೇನು ಎಂದೆ. ಅಲ್ಲೊಂದು ಮನೆ ಇದೆ ಎಂದರು. ಕಲೆಯು ನೋಡಿ ಒಂದು ಸೂರು ಇದ್ದರೆ ಸಾಕೆಂದು ಅಲ್ಲಿ ಕಾವ್ಯ ಬರೆಯುವವರು ಆಸ್ತಿ ಮಾಡುವ ಜನವೇ. ಕಾವ್ಯಗಳೇ ಅವರ ಆಸ್ತಿ. ಜನಾನುರಾಗವೇ ಅವರ ಸಂಪತ್ತು. ನನ್ನನ್ನು ಪ್ರಶ್ನೆ ಮಾಡಿದವರಿಗೆ ನಾನು 'ನೀವು ಬೇಂದ್ರೆಯವರನ್ನು ನೋಡಿಲ್ಲ ನೋಡಿಯಾದ ಮೇಲೆ ನನ್ನನ್ನು ಈ ಪ್ರಶ್ನೆ ಕೇಳಿ' ಎಂದೆ. ಕೆಲವು ತಿಂಗಳುಗಳನಂತರ ಅವರು ಬೇಂದ್ರೆಯವರನ್ನು ಬೆಂಗಳೂರಿನಲ್ಲಿ ನೋಡಿದರು ಈಚೆಗೆ ಮತ್ತೆ ನನಗೆ ಪ್ರಶ್ನೆ ಹಾಕಿಲ್ಲ

ಕೊನೆಗೆ ಈ ಪದ್ಯವನ್ನೇ ಹೇಳಿ ಬೇಂದ್ರೆಯವರನ್ನು ನಮಿಸುತ್ತೇನೆ.

ನುಡಿದು ಬೇಸತ್ತಾಗ । ದುಡಿದುಡಿದು ಸತ್ತಾಗ
ಜನಕ ಹಿಗ್ಗಿನ ಹಾಡು ನೀಡಾಂವಾ
ನಿನ್ಹಾಂಗ ಆಡಾಕ । ನಿನ್ಹಾಂಗ ಹಾಡಾಕ
ಪಡೆದು ಬಂದವ ಬೇಕೊ ಗುರುದೇವಾ

ಮಕ್ಕಳಾಗ್ಯಾಡೀದಿ । ಹಕ್ಕ್ಯಾಗಿ ಹಾಡೀದಿ
ಚಿಕ್ಕ್ಯಾಗಿ ನೋಡೀದಿ ಗುರುದೇವಾ
ಬಳ್ಳ್ಯಾಗ ಕುಣಿದೀದಿ ಬೆಳಕಿನ್ಯಾಗ ತಣಿದೀದಿ
ಹೂವಾಗಿ ಅರಳೀದಿ ಗುರುದೇವಾ

ಬೆಳಿಯಾಗೀಸಾಡೀದಿ । ಗಾಳ್ಯಾಗ ಬೀಸಾಡೀದ
ಮಳಿಯಾಗ ಕೂಸಾಡೀದಿ ಗುರುದೇವಾ
ಬಿಸಿಲ್ಹಣ್ಣು ಉಂಡೀದಿ । ಬೆಳದಿಂಗಳ ಕಂಡೀದಿ
ಚಳಿಮುದ್ದು ಕೊಂಡೀದಿ ಗುರುದೇವಾ

ಮೂಡಲಕ ಮೂಡೀದಿ । ಪಡುವಲಕ ಓಡೀದಿ
ದಿಕ್ಕೆಲ್ಲ ಕೂಡೀದಿ ಗುರುದೇವ
ಹಾಡಿ ಹಣ್ಣಾದಿ ನೀ । ಜಗದ ಕಣ್ಣಾದೆ ನೀ
ನುಡಿದು ಸಣ್ಣಾದೆ ನೀ ಗುರುದೇವಾ

# ಅಪೇಕ್ಷೆ

ಶ್ರೀ. ಚಿಂ. ಗ. ಕುಲಕರ್ಣಿ, ಬಿ. ಎ., ಬಿ. ಟಿ. ಸೊಲ್ಲಾಪುರ

ಶ್ರೀ. ದತ್ತೋಪಂತ ಬೇಂದ್ರೆಯವರ ೬೧ನೆಯ ಹುಟ್ಟುಹಬ್ಬವನ್ನು ವಿಶೇಷ ರೀತಿಯಿಂದ ಜರುಗಿಸಬೇಕೆಂದು ಅವರ ಗೆಳೆಯರು ಹಾಗು ಅಭಿಮಾನಿಗಳು ಯೋಜಿಸಿರುವದು ಯಥಾಯೋಗ್ಯವೇ ಆಗಿದೆ. ಎಲ್ಲರಿಗಿಂತಲೂ ಅವರಲ್ಲಿ ಏನೋ ವಿಶೇಷ ಇದೆ ಎಂಬ ಮಾತು ಅವರ ಅಲ್ಪಕಾಲದ ಸಹವಾಸದಿಂದಲೂ ಯಾರಿಗೂ ಅನುಭವಕ್ಕೆ ಬರುತ್ತದೆ. ನಾನು ಚಿಕ್ಕಂದಿನಿಂದಲೂ ಅವರ ಸಹವಾಸದಲ್ಲಿರುವವನೂ, ಶಿಕ್ಷಕರೆಂದು ಅವರನ್ನು ಆದರಪೂರ್ವಕವಾಗಿ ಕಾಣುವವನೂ, ಕವಿಗಳೆಂದು ಅವರ ಪ್ರತಿಭಾ ವಿಲಾಸಕ್ಕೆ ಮನಸೋತವನೂ, ಮಹಾನ್ ಯೋಗಿ ಶ್ರೀ. ಅರವಿಂದರ ಕೃಪಾಛತ್ರದ ಕೆಳಗೆ ಬೆಳೆಯುತ್ತಿರುವ ಒಂದು ಅಧಿಕಾರಿ ಜೀವ ಎಂದು ತಿಳಿಯುವವನೂ ಆಗಿದ್ದೇನೆ. ಅಂಥ ನನಗೆ ಅವರಲ್ಲಿ ಮಿಗಿಲಾದದ್ದಿದೆ ಎಂದೆನಿಸಿದರೆ ಆಶ್ಚರ್ಯವೇನು ?

ಅವರ ಮೇಲಿನ ಈ ಪ್ರೇಮಾದರಗಳಿಗೆ ಕಾರಣವೇನೋ ನನಗೇ ತಿಳಿಯದು. ಯಾವ ಕನ್ನಡದಲ್ಲಿ ಅವರ ಅಗಾಧ ಪ್ರತಿಭೆಯು ವಿಲಾಸಗೆಯ್ಯುವದೊ ಆ ಕನ್ನಡ ಭಾಷೆಯ ಜ್ಞಾನ ನನಗೆ ಸಾಕಷ್ಟಿಲ್ಲ; ಸಹವಾಸೋತ್ಥ ಪ್ರೇಮ ಎನ್ನಬೇಕೇ ಆ ಸಹವಾಸವು ಕೂಡ ತೀರ ಚಿಕ್ಕತನದಲ್ಲಿಯದು, ಮೈತ್ರಿ ಎನ್ನಬೇಕೆ ನನ್ನ ಹಾಗೂ ಅವರ ವಯಸ್ಸಿನಲ್ಲಿ ಹತ್ತು ವರ್ಷದ ಅಂತರ, ಗುರು–ಶಿಷ್ಯರ ಸಂಬಂಧವೆನ್ನಬೇಕೆ ಪ್ರತ್ಯಕ್ಷ ಅವರ ಕೈಕೆಳಗೆ ವಿದ್ಯಾರ್ಥಿ ಎಂದು ಕಲಿಯುವ ಯೋಗ ಎಂದೂ ನನಗೆ ಬಂದಿಲ್ಲ. ' ಸಮಾನ ಶೀಲ–ವ್ಯಸನೇಷು ಸಖ್ಯಮ್ ' ಎನ್ನಬೇಕೆ ನನಗೆ ಸಾಹಿತ್ಯದ ವ್ಯಸನ ಅಷ್ಟಕ್ಕಷ್ಟೇ, ಹೀಗಿದ್ದರು ಕೂಡ ನಮ್ಮಲ್ಲಿ ಇಷ್ಟೊಂದು ಸಖ್ಯವಿರುವದನ್ನು ನೋಡಿದರೆ ಇದರ ಕಾರಣವು ಎಲ್ಲಿಯೊ ಮೈಯಡಗಿಸಿ ಕೂತಿದೆ ಎಂದೆನಿಸುವದು.

ಸುಮಾರಾಗಿ ಸಮಾನ ಪರಿಸ್ಥಿತಿಯಲ್ಲಿ ಬೆಳೆದುದರಿಂದಲೂ, ' Plain living and high thinking ' ಈ ತತ್ವ ಇಬ್ಬರಿಗೂ ಅಷ್ಟೇ ಮಾನ್ಯವಿರುವದರಿಂದಲೂ ನಾವಿಬ್ಬರೂ ಬೇಗನೆ ಕೂಡಿದೆವು ಗೆಳೆತನದ ಬಯಕೆ,

ನಿರ್ಭಯ ವೃತ್ತಿ, ಬಿಚ್ಚು ಮನಸ್ಸು, ಸ್ವಭಾಷೆ, ಸ್ವಧರ್ಮ ಹಾಗು ಸ್ವದೇಶ ಇವುಗಳ ಮೇಲೆ ಗಾಢವಾದ ಪ್ರೇಮ, ಸಮಾಜದಿಂದ ಹೆಚ್ಚಿನದನ್ನು ಬಯಸದೆ ಅದಕ್ಕಾಗಿ ಅಹರ್ನಿಶ ದುಡಿಯಬೇಕೆಂಬ ಆಸೆ ಈ ಗುಣಗಳು ನಮ್ಮಿಬ್ಬರಲ್ಲಿಯೂ ಸಾಮಾನ್ಯವಾಗಿವೆ ಆದರೆ ನನ್ನಲ್ಲಿ ಕಾಣದಿರುವ ಎಷ್ಟೋ ಗುಣಗಳು ಶ್ರೀ. ಬೇಂದ್ರೆಯವರಲ್ಲಿವೆ. ವಿಶೇಷವಾಗಿ ಅವರ ಸೂಕ್ಷ್ಮ ಬುದ್ಧಿ, ಅಗಾಧವಾದ ವಿದ್ಯಾವ್ಯಾಸಂಗ, ಪ್ರಚಂಡವಾದ ಪ್ರತಿಭೆ, ಬಲವಾದ ಲೋಕಸಂಗ್ರಹ, ಯಾವುದನ್ನೂ ಲೆಕ್ಕಿಸದ ವೃತ್ತಿ ನನಗೆ ಆದರ್ಶವೆನಿಸುತ್ತವೆ. ಇದೆಲ್ಲಕ್ಕೂ ಹೆಚ್ಚಾಗಿ, ಅವರು ನಡಸಿರುವ ಅರವಿಂದರ ತತ್ವಜ್ಞಾನದ ವ್ಯಾಸಂಗ, ಅದರಿಂದ ಅವರಲ್ಲಿ ಬೆಳೆಯುತ್ತಿರುವ ದೈವೀಗುಣ, ಈಶಪ್ರೇಮಗಳಿಗಾಗಿ ಅವರು ನನಗೆ ವಂದನೀಯರಾಗಿದ್ದಾರೆ. ಅನೇಕ ಹಿಂದಿನ ಮತ್ತು ಇಂದಿನ ಕವಿಗಳ ವ್ಯಾಸಂಗ, ಸತ್ಪುರುಷರ ದರ್ಶನ-ಸಹವಾಸ, ಸಂತತವಾಗಿ ನಡೆದಿರುವ ಮನನ, ಚಿಂತನ ಹಾಗೂ ಪ್ರವಚನ ಈ ಅವರ ಗುಣಗಳು ನನಗಂತೂ ವಿಲೋಭನೀಯವೆನಿಸಿ, ಅವರ ಸಹವಾಸದಿಂದ ನನ್ನಲ್ಲಿಯೂ ಮೌಲಿಕವಾದ ಮಾರ್ಪಾಟು ಆಗುತ್ತಿದೆ ಎಂದು ನಾನೇ ನಂಬಿದ್ದೇನೆ 'ಸತಾಂ ಸದ್ಭಿಃ ಸಂಗಃ ಕಥಮಪಿಃ ಪುಣ್ಯೇನ ಭವತಿ' ಎಂಬ ವಚನಕ್ಕನುಸಾರವಾಗಿ ನಮ್ಮ ಪುಣ್ಯದಿಂದಲೇ ಪರಮಾರ್ಥ ಮಾರ್ಗದಲ್ಲಿ ಇಂಥ ಮಾರ್ಗದರ್ಶಕರು ದೊರೆತಿದ್ದಾರೆಂಬ ಭಾವನೆಯಿಂದ ನಾನು ಅವರನ್ನು ಕಾಣುತ್ತೇನೆ.

ಶ್ರೀ. ಬೇಂದ್ರೆಯವರು ತಮ್ಮ 'ಕೋಗಿಲೆ' ಎಂಬ ಮೊದಲನೆಯ ಕವಿತೆಯನು ಬರೆದಾಗ ನಾನು ಹತ್ತು ವರ್ಷದವನಿದ್ದೆ ಆಗ ನನಗೆ ತಿಳಿಯುತ್ತಿದ್ದ ಕನ್ನಡ ತೀರ ತುಸು. ಆದರೂ ಆ ಕವನದಲ್ಲಿಯ ಶಬ್ದ ಮಾಧುರ್ಯ, ಕಲ್ಪನಾವಿಲಾಸ, ಇವುಗಳನ್ನು ಮರಾಠಿ ಅರ್ಥದೊಡನೆ ಕೇಳಿ ನಾನು ಅತ್ಯಂತ ಆನಂದಬಟ್ಟೆ. ಬೇಂದ್ರೆಯವರ ಮಾತು ಎಂದಿಗೂ ಮೋಹಕ. ನಡೆ ಆಕರ್ಷಕ, ಎಂತಲೇ ನಾನು ಹೆಚ್ಚೆಚ್ಚು ಅವರೊಡನೆ ಬೆರೆಯಹತ್ತಿದೆ ಬೇಸಿಗೆಯ ಬಿಡುವಿನಲ್ಲಿ ಕಾಲೇಜದಿಂದ ಮನೆಗೆ ಬಂದ ಮೇಲೆ, ಯಾವ ದಿನಗಳನ್ನು ಇತರರು ಮೋಜಿನಲ್ಲಿ, ಕುಶಾಲಿಯಲ್ಲಿ ಕಳೆಯುವರೊ ಅಂಥ ದಿನಗಳನ್ನು ಇವರು ಮಹಾಭಾರತ ರಾಮಾಯಣದಂಥ ಪ್ರಚಂಡ ಗ್ರಂಥಗಳನ್ನು ತಲ್ಲೀನತೆಯಿಂದ ಓದುವದರಲ್ಲುಪಯೋಗಿಸುವರು: ಅಷ್ಟೇ ಅಲ.

ಅವರ ತಾಯಿಗೆ ಅವನ್ನು ಅರ್ಥಮಾಡಿ ಹೇಳುವರು. ಇದರಲ್ಲಿಯೇ ಅವರ ಅಸಾಮಾನ್ಯತೆ ಕಂಡುಬರುತ್ತಿತ್ತು.

ಧಾರವಾಡದ ವ್ಹಿಕ್ಟೋರಿಯಾ ಹೈಸ್ಕೂಲಿನಲ್ಲಿ ಅವರು ಶಿಕ್ಷಕರೆಂದ ಸೇರಿದ ತುಸು ದಿನಗಳಲ್ಲಿಯೇ ವಿದ್ಯಾರ್ಥಿಗಳಿಗೆ ಪ್ರೀತಿಯವರಾದರು. ಫುಟ್‌ಬಾಲ್ ಅವರ ಪ್ರೀತಿಯ ಆಟ ಶಿಕ್ಷಕನೆಂಬ ಅಭಿಮಾನಕ್ಕೊಳಪಡದೆ ಅವರು ವಿದ್ಯಾರ್ಥಿಗಳ ಜೊತೆಯಲ್ಲಿ ಕೂಡಿ ಆಡುವರು, ಹರಟೆ ಹೊಡೆಯು ವರು ಯಾವ ಶಾಲೆಯಲ್ಲಿ ಅವರು ಕಲಿತರೊ ಅದೇ ಶಾಲೆಯಲ್ಲಿಯೇ ಅವರು ಅಧ್ಯಾಪಕರಾಗಿ ಇರಬೇಕೆಂಬುದು ಅಲ್ಲಿಯ ಮುಖ್ಯಾಧ್ಯಾಪಕರ ಹಾಗು ಚಾಲಕರ ಅಪೇಕ್ಷೆಯಾಗಿದ್ದಿತು. ಬೇಂದ್ರೆಯವರು ಶಿಕ್ಷಕರಾಗಿ ಬಂದರೆಂದು ಸಂಸ್ಥೆಯ ಆಜೀವ ಸೇವಕರಿಗೆ ತುಂಬ ಸಂತೋಷವಾಯಿತು.

ಮುಂದೆ ನಾನು ಅವರನ್ನಗಲಿ ಸಾತಾರೆಯಲ್ಲಿರಹತ್ತಿದ ಮೇಲೂ ಆಗಾಗ್ಗೆ ಅವರ ಬಗ್ಗೆ--ಅವರು ಕನ್ನಡ ಕವಿಗಳೆಂದು ಹೆಸರುವಾಸಿಯಾದ ಸಂಗತಿ-ಕೇಳುತ್ತಿದ್ದೆ. ನಾನು ಅನಂತರ ಪುಣೆಗೆ ಕಾಲೇಜದಲ್ಲಿದ್ದಾಗಲೂ ಅವರನ್ನು ಅನೇಕ ಸಲ ಭೇಟಿಯಾಗಿದ್ದೇನೆ. ಪ್ರೊ. ಗೋಕಾಕರು ಇಂಗ್ಲಿಷಿನಲ್ಲಿ ಬರೆದ ' ಬೇಂದ್ರೆ ಮತ್ತು ಅವರ ಕಾವ್ಯ ' ಎಂಬ ಲೇಖನವನ್ನು ಓದಿ ಅವರ ಹನ್ನೆರಡು ವರ್ಷದ ವಾಙ್ಮಯ ಸೇವೆಯ ಸವಿಯನ್ನುಂಡಿದ್ದೇನೆ. ಆಗ ಬೇಂದ್ರೆಯವರು ಕವಿಸಮ್ಮೇಲನದ ಅಧ್ಯಕ್ಷರೆಂದು ಗೌರವಿಸಲ್ಪಟ್ಟು ಅವರ ಹೆಸರು ಮೈಸೂರಿನಿಂದ ಗ್ವಾಲ್ಹೇರಿಯ ವರೆಗೆ ಹಬ್ಬಿತು.

ಇದೇ ಕಾಲದಲ್ಲಿಯೇ ಅವರು ಲೇಖಕ, ಸಂಪಾದಕ ಹಾಗು ದೇಶಭಕ್ತರಾಗಿ ವಿವಿಧ ಕ್ಷೇತ್ರಗಳಲ್ಲಿ ಕಾರ್ಯ ಮಾಡಿ, ಶ್ರೀ. ಮಾಸ್ತಿ, ಗೋಕಾಕ, ಪ್ರೊ. ಪೋತದಾರ, ಮಾಧವರಾವ ಭಿಡೆ ಮುಂತಾದ ಅನೇಕ ಗೆಳೆಯರನ್ನು ಗಳಿಸಿದರು ಅವರು ಪ್ರಾರಂಭಿಸಿದ 'ಗೆಳೆಯರ ಗುಂಪು' ಜೇನಿನ ಹುಟ್ಟಾಯ್ತು; ಅದರ ಮಧ್ಯಬಿಂದು ಬೇಂದ್ರೆಯವರೇ ಎಂಬುದನ್ನು ಹೇಳುವ ಕಾರಣವಿಲ್ಲ. ಗಾಂಧೀ ಅನುಯಾಯಿಗಳೆಂದೆನಿಸಿಕೊಳ್ಳದಿದ್ದರೂ ತತ್ವಕ್ಕಾಗಿ ಅವರು ಸೆರೆಮನೆಯನ್ನೂ ಭೋಗಿಸಿ ಬಂದರು. ಕನ್ನಡದಷ್ಟೇ ಅವರು ಮರಾಠಿಯನ್ನೂ ಪ್ರೀತಿಸುವರು. ಕನ್ನಡ ಮರಾಠಿ ವಾದದ ಅವರ ದೃಷ್ಟಿ ಅತ್ಯಂತ ವಿಶಾಲವಾದದ್ದಾಗಿದೆ ಅವರ ಸರ್ವಸಂಗ್ರಾಹಕ ಬುದ್ಧಿಗೆ ಇದೆಲ್ಲವೊ ಒಪ್ಪು

ಪಂತಹವೇ ಆಗಿದೆ. 'ಪರಸ್ಪರಂ ಭಾವಯಂತಃ ಶ್ರೇಯಃ ಪರಮ ವಾಪ್ಸ್ಯಥ' ಇದೇ ಅವರ ಉಚ್ಚ ಭೂಮಿಕೆಯಾಗಿದೆ.

ಒಮ್ಮೆ ಲೋಕಮಾನ್ಯ ಟಿಳಕರ ಮನೆಯಲ್ಲಿ ಕವಿ ಯಶವಂತರು ಎಲ್ಲ ಶಾರದೋಪಾಸಕರಿಗೆ ಕವಿ ಬೇಂದ್ರೆಯವರ ಕಾವ್ಯ ಪರಿಚಯ ಮಾಡಿಕೊಡಲು ಸಾಹಿತ್ಯಸಮ್ರಾಟ ನರಸಿಂಹ ಚಿಂತಾಮಣಿ ಕೇಳಕರ ಇವರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ನೆರೆಯಿಸಿದ್ದರು. ಸುದೈವದಿಂದ ಆ ಸಭೆಗೆ ನಾನೂ ಹೋಗಿದ್ದೆ ಶ್ರೀ. ಬೇಂದ್ರೆಯವರು ತಮ್ಮ ಕವನದ ಸಾರಾಂಶವನ್ನು ಮರಾಠಿ ಯಲ್ಲಿ ಹೇಳಿ ತರುವಾಯ ತಮ್ಮ ಕನ್ನಡ ಕವನವನ್ನು ಅಂದುತೋರಿಸುತ್ತಿ ದ್ದರು ಅವರ ಕವಿತೆಯಲ್ಲಿಯ ಪದಗಾಂಭೀರ್ಯ ಅರ್ಥಗೌರವಾದಿಗಳಿಗೆ ಎಲ್ಲರೂ ಮೆಚ್ಚಿದರು. ಮರಾಠಿಯಲ್ಲಿಯ ಕಾವ್ಯಸಂಪತ್ತಿ ಎಷ್ಟು ಬಡವಾಗಿದೆ ಎಂಬುದು ಆಗ ನಮ್ಮ ಅನುಭವಕ್ಕೆ ಬಂದಿತು

ಗುರುವರ್ಯ ಪ್ರಾಧ್ಯಾಪಕ ದತ್ತೋ ವಾಮನ ಪೋತದಾರರೂ ಶ್ರೀ. ಮಾಧವ ಗೋವಿಂದ ಭಿಡೆಯವರೂ ಬೇಂದ್ರೆಯವರ ವಿಷಯ ಆದರ ವಿಟ್ಟು ಮಾತನಾಡುತ್ತಾರೆ. ಪ್ರೊ. ಪೋತದಾರರು ಸುವಿಖ್ಯಾತರಾದ ಕಾರಣ ಅವರ ವಿಷಯದಲ್ಲಿ ಪರಿಚಯದ ಕಾರಣವಿಲ್ಲ. ಶ್ರೀ. ಮಾಧವರಾವ ಭಿಡೆ ಯವರು ಪಾಂಗಾರಕರರ 'ಮುಮುಕ್ಷು' ಪತ್ರಿಕೆಯ ಸಂಪಾದಕರಾಗಿದ್ದರು. ಅವರ 'ಮನನಾಮೋದ' ಎಂಬ ಗ್ರಂಥವು ಎಮ್. ಎ. ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವಾಗಿದ್ದಿತು. ಅವರು ಒಳ್ಳೆ ಹೆಸರಾಂತ ಲೇಖಕರು, ಕವಿಗಳು. ಬೇಂದ್ರೆಯವರಂತೆ ಭಿಡೆಯವರಲ್ಲಿಯೂ ವಿದ್ಯಾವ್ಯಾಸಂಗ, ಲೋಕಸಂಗ್ರಹ, ಗಾಢವಾದ ಅಭ್ಯಾಸ ಹಾಗು ವಾಚನಗಳು ಉತ್ಕಟವಾಗಿ ನೆಲೆಗೊಂಡಿದ್ದವು. ಬೇಂದ್ರೆಯವರಷ್ಟು ಕವಿಲೇಖಕರೆಂದು ಅವರು ಖ್ಯಾತಿಪಡೆಯದಿದ್ದರೂ ಅನುಭವಿ, ಜ್ಞಾನಿ, ಅಧಿಕಾರಿಯಾದ ಸಾಧಕರೆಂದು ಅವರು ಮೇಲಿನ ಸ್ಥಾನ ದಲ್ಲಿದ್ದರು. ಅವರ ಗದ್ಯ ಹಾಗು ಪದ್ಯ ಲೇಖನಗಳಲ್ಲಿ ಮಹಾರಾಷ್ಟ್ರ ಸಂತರ ಅಮೃತವಾಣಿ ಅಖಂಡವಾಗಿ ಹರಿಯುತ್ತಿದೆ. ಅವರ ತರುವಾಯ ಶ್ರೀ. ಬೇಂದ್ರೆ ಯವರೇ ಆ ಅಮೃತ ಪ್ರವಾಹವನ್ನು ಹರಿಸಿ ನಮಗೆಲ್ಲರಿಗೂ ಅದರ ಸವಿ ಯನ್ನುಣಿಸುತ್ತಿದ್ದಾರೆ.

ಅರವಿಂದ ಯೋಗಿಗಳ ತತ್ವಜ್ಞಾನದಲ್ಲಿ ಅವರಿಗಿರುವ ಉತ್ಕಟ ಶ್ರದ್ಧೆ ಮತ್ತು ಅರವಿಂದರ ಕೃಪೆಯಿಂದ ಸಾಧಕಮಾರ್ಗದಲ್ಲಾದ ಅವರ ಪ್ರಗತಿ

ಅವರ ಸಹವಾಸದಲ್ಲಿದ್ದು ನೋಡುವ ಸುಯೋಗ ನನಗೊದಗಿದೆ. ಅವರಿಂದ ನನಗೆ ಅನೇಕ ಸಜ್ಜನರ ಪರಿಚಯುವಾಗಿದೆ. 'ಸುಖ ದುಃಖ ಸಮೇಕೃತ್ವಾ ಲಾಭಾಲಾಭೌ ಜಯಾಜಯೌ' ಈ ಭಗವದುಕ್ತಿಯನ್ನು ಅವರು ಅಕ್ಷರಶಃ ಪಾಲಿಸುತ್ತಿದ್ದಾರೆ. ಸಾಹಿತ್ಯ ಸಮ್ಮೇಲನದ ಅಧ್ಯಕ್ಷರೆಂದಾಗಲಿ, ಅಥವಾ ಪ್ರಾಧ್ಯಾಪಕರಾದರೆಂದಾಗಲಿ ಅಭಿಮಾನ ಸಂತೋಷಕ್ಕೊಳಗಾಗದೆ ಯಾವಾಗಲೂ ಶ್ರವಣ, ಚಿಂತನೆಯಲ್ಲಿ ಕಾಲಕಳೆಯುತ್ತಾರೆ. ಪ್ರೀತಿಯ ಮಕ್ಕಳಿಬ್ಬರು ಅವರನ್ನಗಲಿ ಹೋದರೂ ಮನಸ್ಸಿನ ಸಾಮ್ಯಾವಸ್ಥೆಯಲ್ಲಿ ಭಂಗ ತಂದು ಕೊಳ್ಳದೆ ಪಾರಮಾರ್ಥಿಕ ಸಾಧನೆಯಲ್ಲಿ ತತ್ಪರರಾಗಿರುತ್ತಾರೆ. ಅವರು ತತ್ವಜ್ಞಾನದ ಮಾರ್ಗವನ್ನಾಶ್ರಯಿಸಿರುವದು ಕೇವಲ ಶಾಬ್ದಿಕವಾಗಿರದೆ ಅನುಭವಗಮ್ಯವಾಗಿದ್ದುದು ಅವರ ಆಚರಣೆಯಿಂದಲೇ ಗೊತ್ತಾಗುತ್ತದೆ.

ಇಂಥ ಪರಿಪಕ್ವ ದಿಶೆಯಲ್ಲಿದ್ದ ಸಾಧಕನಿಂದ ಜಡಜೀವಿಗಳ ಉದ್ಧಾರಾರ್ಥ ಸಚೇತನ ಹಾಗು ಚಿರಂತನವಾದ ಕಾವ್ಯಾಮೃತ ಪ್ರಸಾದ ನನ್ನಂಥ ಅಪರಿಪಕ್ವ, ಮಂದ ಮತ್ತು ಆಲಸಿ ಜೀವಿಯು ಅಪೇಕ್ಷಿಸಿದರೆ ತಪ್ಪಾದೀತೆ? ಚಿಕ್ಕವನಿರುವಾಗಿನಿಂದಲೇ ಶ್ರೀ. ಬೇಂದ್ರೆಯವರ ವಿಷಯದಲ್ಲಿ ನಾನು ಕೆಲವೊಂದು ಅಪೇಕ್ಷೆಗಳನ್ನಿಟ್ಟುಕೊಂಡಿದ್ದೆ. ಅವು ನನ್ನ ಕಲ್ಪನೆಗೆ ಮೀರಿ ಫಲದ್ರೂಪವಾದದ್ದು ನಮಗೆ ಕಾಣುತ್ತಿದೆ ಅವರು ಇದುವರೆಗೆ ಯಾವುದನ್ನೆಲ್ಲ ಬರೆದರೊ, ನುಡಿದರೊ ಮತ್ತು ಮಾಡಿದರೊ ಅದಕ್ಕೆ ಕನ್ನಡ ವಾಙ್ಮಯದಲ್ಲಿ ಕರ್ನಾಟಕದ ಸಾಮಾಜಿಕ ಜೀವನದಲ್ಲಿ ಒಂದು ನಿಶ್ಚಿತ ಹಾಗು ಗೌರವದ ಸ್ಥಾನ ದೊರೆತಿದೆ. ಶತಕಾನು ಶತಕಗಳು ಕಳೆದರೂ ಯಾವುದು ಸುಗಂಧವಳಿದು ಹಳಸಿ ಹಳೆಯದಾಗಲಿಕ್ಕಿಲ್ಲವೊ ಅಂಥ ಹೂ ಹಿಡಿದು, ಕಾಯಿ ಬಿಟ್ಟು, ಫಲಪ್ರದವಾಗಿ ಅವರ ಕಾವ್ಯಬಳ್ಳಿ ಕರ್ನಾಟಕದಲ್ಲಿಯ ಸಂತವಾಙ್ಮಯದ ಪರಂಪರೆ ಮುಗ್ಗದಂತೆ ನಡಸಿಕೊಂಡು ಬರಲಿ; ಭಗವಂತನು ಅವರಿಗೆ ದೀರ್ಘಾಯುರಾರೋಗ್ಯ ದಯಪಾಲಿಸಲಿ ಎಂದು ಅವರ ೭೫ನೆಯ ಹುಟ್ಟು ಹಬ್ಬದ ಶುಭ ಸಮಯದಲ್ಲಿ ಈ ಲೇಖಕನು ಹಾರ್ದಿಕವಾಗಿ ಪ್ರಾರ್ಥಿಸುತ್ತಾನೆ.

(ಮರಾಠಿಯಿಂದ)

ಅನುವಾದಕರು : ಶ್ರೀ. ಲಕ್ಷ್ಮಣರಾವ ಬೇಂದ್ರೆ, ಧಾರವಾಡ

———

# ‘ ಗೆಳೆಯರ ಗುಂಪಿ ’ನ ಮೊದಲು

ಶ್ರೀ. ಗೋ. ವೆ. ಚುಳಕಿ, ಧಾರವಾಡ

“೧೯೨೯ರಲ್ಲಿ ಬೆಳಗಾವಿಯಲ್ಲಾದ ಕನ್ನಡ ಸಾಹಿತ್ಯ ಸಮ್ಮೇಲನದಲ್ಲಿ ಅಂಬಿಕಾತನಯದತ್ತ ಎಂಬವರು ‘ ಹಕ್ಕಿ ಹಾರುತಿದೆ ನೋಡಿದಿರಾ ? ’ ಎಂಬ ಕವನವನ್ನು ಹಾಡಿದರು. ಅದರಿಂದುಂಟಾದ ಅದ್ಭುತ ಪರಿಣಾಮವನ್ನು ಇಂದಿಗೂ ನೆನೆದರೆ ಮೈ ನವಿರೇಳುತ್ತಿದೆ ಬೆಳಗಾವಿಯ ವಿಷಮ ವಾತಾವರಣ; ಕನ್ನಡ ಸಾಹಿತ್ಯ ಸಮ್ಮೇಲನ; ಮರಾಠಿ ಸಾಹಿತ್ಯ ಸಮ್ಮೇಲನ. ಇಂಥ ವಿಚಿತ್ರ ಸಂದರ್ಭದಲ್ಲಿ ಈ ಕವನದಲ್ಲಡಕವಾದ ಅರ್ಥಗಾಂಭೀರ್ಯವೂ ಶಾಬ್ದಿಕ ಚಿತ್ರಣವೂ ನೆರೆದವರನ್ನೆಲ್ಲ ಅಚ್ಚರಿಗೊಳಿಸಿದವು. ಹುಟ್ಟಿದರೆ ಹುಟ್ಟಬೇಕು ಇಂಥ ಕವಿ ! ಕಟ್ಟಿದರೆ ಕಟ್ಟಬೇಕು ಇಂಥ ಕವನ ! ” ಎಂದು ಆ ಸಮ್ಮೇಲನಕ್ಕೆ ಹೋಗಿ ಬಂದ ನನ್ನ ಗೆಳೆಯರೊಬ್ಬರು ನನ್ನ ಮುಂದೆ ಬಣ್ಣಿಸಿ, ಅವರ ಪರಿಚಯ ನಿಮಗಿದೆಯೋ ? ಎಂದು ನನ್ನನ್ನು ವಿಚಾರಿಸಿದರು.

ಅವರು ಬಣ್ಣಿಸುವಾಗಿನ ಅವರ ಮುಖಚರ್ಯೆಯನ್ನು ಕಂಡು ನಾನು ಚಣ ಹೊತ್ತು ಬೆರಗಾಗಿ ತೆಪ್ಪಗೆ ಕುಳಿತೆ. ನನ್ನ ಮೇಲೆ ಆ ವರ್ಣನೆಯಿಂದ ಯಾವ ಪರಿಣಾಮವೂ ಆಗಲಿಲ್ಲ ಯಾಕೆಂದರೆ ನಾನು ಆ ಹಾಡನ್ನು ಆ ಮೊದಲೆ ಅಂಬಿಕಾತನಯದತ್ತರ ಬಾಯಿಯಿಂದಲೇ ಕೇಳಿದ್ದೆ; ಅದರ ಸ್ವಾದವನ್ನುಂಡಿದ್ದೆ. ಆದರೂ ಅವರ ಆ ಗಂಭೀರ ಮುಖಚರ್ಯೆಗೆ ನನ್ನದನ್ನೂ ಸೇರಿಸಿ ‘ ಅಂಥ ಪರಿಣಾಮ ಆಗದೆ ಬಿಟ್ಟೀತೇ ’ ಎಂದು ನಾನೂ ಉದ್ಗಾರ ತೆಗೆದೆನು. ಇರಲಿ.

ಆ ಮಾತಿಗೆ ಇಂದು ೧೬ ವರುಷಗಳು ಸಂದಿವೆ. ಅಂದಿನ ಆ ಕವಿಯಿಂದ ಅಂಥ ಹಲವಾರು ಕವನಗಳು ಇಂದಿಗೆ ಬಂದಿವೆ; ಅಮರ ಪಟ್ಟವನ್ನೂ ಪಡೆದಿವೆ. ಇಂಥ ಕವಿಯ ಜೀವನದ ನಿಕಟಪರಿಚಯವು ನನಗೆ ನನ್ನ ತೀರ ಎಳೆವರೆಯದಿಂದಲೂ ಆದುದಕ್ಕಾಗಿ ನನ್ನ ಜೀವನದೆಶೆಯೇ ಬದಲಾಯಿತೆಂದು ಹೇಳದಿರಲಾರೆ. ಪರಿಚಯವಾದ ಆ ಸಂದರ್ಭವನ್ನು ಇಲ್ಲಿ ಹೇಳುವದು ಅವಶ್ಯವೆನಿಸಿದ್ದರಿಂದ ಸ್ವಲ್ಪದರಲ್ಲಿ ಹೇಳಬಯಸುವೆ.

" ಕುಲವಧುವಿನೊಲು, ಅಡಕದಲಿ ನಗುವ ಕೌತುಕ-ಕು
ತೂಹಲದ ಕಣಿಯು ಕಣ್ಣಲಿ ತೆರೆದು, ಮುಗಿಲ ನೀ-
ಲಿಯ ಕುಡಿದು ಬಿಳಿದು ಮಾಡುವೆನೆಂದು ಹಸಿದ ಹ-
ಳ್ಳಿಯ ಹುಡುಗ ! ಗುರುವೆನುವ ಗರುವಾಯಿಯಲಿ ನಿಂತಿ-
ರಲು ಇದಿರುಗೊಂಡೆ ನನ್ನನು ನೀನು, ಹುಡುಗ ಹಿಂ-
ಡಿನ ಪುಂಡತನದಿ ಬೆಳೆದವನನ್ನು ಕನ್ನಡದ
ಕನ್ನಡಿಯು ಬೆಳಗಲಿತ್ತಾಗ, ಕಂಡೆವು ನಮ್ಮ
ರೂಪವನು, ಕನ್ನಡದ ಕಳಸ ಕ್ಷಣಸಲಿ ಕಂಡೆ.

ಕನ್ನಡದ ಗುಡಿಯ ಕಟ್ಟುವ ಎಳೆಯ ಗೆಳೆಯರೊಳು
ನೀನು ಮೊದಲಿಗ ನನಗೆ. ಸ್ನೇಹ-ಸಿಂಹಾಸನದ
ಶೂನ್ಯಪೀಠದಿ ಪಟ್ಟಗಟ್ಟಿ, ಓರಿಗೆ ಜೊತೆಯ
ಎಳೆಯರನು ಎರಡು ಕೈಯಲಿ ತಂದೆ. ಕಲ್ಲಸಿ-
ಕ್ಕಿದೆ ಅಡಿಗೆ; ಗುಡಿಗೆ ಗತಿಯಿಲ್ಲ ಎಲ್ಲಿದೆ ಶಕ್ತಿ ?
ನಿಬ್ಬೆರಗುಗೊಂಡ ಹೆಬ್ಬಯಲು ಹಬ್ಬಿದ ಗೆಳೆಯ ! "

ಎಂದು ಬೇಂದ್ರೆಯವರೇ ನನಗೆ ಬೇಂದ್ರೆಯವರ ಪರಿಚಯವಾಗದ ಮೊದಲಿನ ನನ್ನೊಬ್ಬ ಗೆಳೆಯನಿಗಾಗಿ ಬರೆದ ಚರಮಗೀತೆಯಿಂದ ನಾವು ಕಟ್ಟಿಕೊಂಡ ಸಂಘದ ಉದ್ದೇಶವನ್ನೂ ಸದಸ್ಯರ ಆಕಾಂಕ್ಷೆಯನ್ನೂ ತೋರುತ್ತಲಿದೆ ಎಂದು ಹೇಳಬಹುದು. ಅಂಥ ಸಂಘದ ಸದಸ್ಯರಲ್ಲಿ ನಾನೂ ಒಬ್ಬ. ಇಂದು ಆ ಸಂಘವೂ ಇಲ್ಲ. ಸದಸ್ಯರ ಆಶೆ-ಆಕಾಂಕ್ಷೆಗಳ ಉದ್ಯಾಪನೆ ಎಂದೋ ಆಗಿ ಬಿಟ್ಟಿತು. ಕನ್ನಡದ ಗುಡಿಯ ಕಟ್ಟುವ ಎಳೆ ಗೆಳೆಯರೊಳು ಬೇಂದ್ರೆಯವರಿಗೆ ಮೊದಲಿಗನಾದ ಚಿದಂಬರ ಕೃಷ್ಣ ಸಗರನೆಂಬವನೂ ಮರಣಕ್ಕೆ ತುತ್ತಾಗಿ ಎಷ್ಟೋ ವರುಷಗಳಾದವು. ನಾನೀ ಲೇಖ ಬರೆಯುತ್ತಿದ್ದಂತೆ ನನಗೆ ಆ ನಮ್ಮ ಹಿಂದಿನ ಬಾಳೆಲ್ಲವೂ ಪೂರ್ವ ಜನ್ಮದ ನೆನಪಿನಂತೆ ಕಣ್ಣೆದುರಿನಲ್ಲಿ ಕಟ ದಂತಾಗುತ್ತದೆ.

ನಾವು ನಾಲ್ಕು ಜನ ವಿದ್ಯಾರ್ಥಿಗಳು; ತೀರ ಹಳ್ಳಿಯವರು. ಪರಸ್ಪರರಲ್ಲಿ ಆಪ್ತ್ಯವೂ ಇತ್ತು. ಹಳ್ಳಿಯಲ್ಲಿ ದೊರೆಯುವಷ್ಟು ಪ್ರಾಥಮಿಕ ವಿದ್ಯಾಭ್ಯಾಸ ವನ್ನು ಮುಗಿಯಿಸಿಕೊಂಡು, ಪಟ್ಟಣವೆಂದರೆ ಎಂತಹದು ಎಂಬುದನ್ನರಿಯದ

ನಾವು ಧಾರವಾಡಕ್ಕೆ ಸುಮಾರಾಗಿ ಒಂದೇ ಕಾಲಕ್ಕೆ ಇಂಗ್ಲಿಷ ಶಿಕ್ಷಣ ಕಲಿಯುಲಿಕ್ಕೆ ಬಂದೆವು. ೧೯೧೯--೨೦ನೆಯ ಇಸ್ವಿ ತಿಲಕರ ಯುಗದ ಜಾಜ್ವಲ್ಯ ಪ್ರಭಾವ ದೇಶದ ತುಂಬೆಲ್ಲ ಪಸರಿಸಿತ್ತು ತಿಲಕರ ಅಸ್ತಮಾನ, ಗಾಂಧಿಯವರ ಉದಯಮಾನದ ಕಾಲ. ಅದೇಕೋ ಏನೋ ನಮಗೆ ಈ ಶಿಕ್ಷಣ ಸಂಪಾದನೆಯಲ್ಲಿ ಹೇಯಬುದ್ಧಿ ಯುಂಟಾಗಿಬಿಟ್ಟಿತ್ತು ನಾವು ಹಳ್ಳಿಗರೇ ಆದುದರಿಂದ ನಮಗೆ ಯಾವ ಉಚ್ಚತರದ ಸಂಸ್ಕಾರವಾಗಲಿ ಸಂಸ್ಕೃತಿಯಾಗಲಿ ಇರಲಿಲ್ಲ. ಪ್ರೇರಕರಾರಾದರೂ ಇದ್ದರೆನಬೇಕೇ ? ಹಾಗೂ ಇರಲಿಲ್ಲ. ವಿದ್ಯಾರ್ಥಿ ವೃಂದದಲ್ಲೂ ಆಗ ಇಂದಿನಂಥ ಚಟುವಟಿಕೆಗಳ ಕಲ್ಪನೆಯೂ ಇರಲಿಲ್ಲ ಆದರೂ ಬಂದಿದ್ದೇವೆ--ಶಿಕ್ಷಣ ಪಡೆಯೋಣ ಇದಕ್ಕೂ ಹಚ್ಚಿಗೇನಾದರೂ ಹುಟ್ಟಿ ಬಂದುದಕ್ಕೆ ಮಾಡೋಣ ಸಾಮಾನ್ಯ ಜೀವಿಗಳಂತೆ ಸಾವು ಬರುವ ವರೆಗೆ ಜೀವಿಸಬಾರದೆಂಬ ಕಲ್ಪನೆ ಮಾತ್ರ ದಿನದಿನಕ್ಕೆ ನಮ್ಮಲ್ಲಿ ಜಾಗೃತವಾಗುತ್ತಲಿತ್ತು. ಶಾಲೆಯ ಅಭ್ಯಾಸಕ್ರಮಕ್ಕೆ ವ್ಯತ್ಯಯ ಬಾರದಂತೆ ನಮ್ಮ ಉಳಿದ ಚಟುವಟಿಕೆಗಳ ರೂಪರೇಷೆಯನ್ನು ನಿರ್ದಿಷ್ಟಗೊಳಿಸಿದೆವು. ಎಲ್ಲರೂ ಹೆಚ್ಚಾಗಿ ಒಂದೇ ಕಡೆಗೆ ಅಂದರೆ ನಮ್ಮ ಮನೆಯಲ್ಲಿಯೇ ಇರುತ್ತಿದ್ದೆವು ಇದೇ ಹೊತ್ತಿಗೆ ಶ್ರೀ. ಬೆಳಗಾಂವಿ ರಾಮಚಂದ್ರನೂ ಎಚ್. ಎಂ. ಕುಲಕರ್ಣಿ ಎಂಬವನೂ ನಮ್ಮ ವಿಚಾರದ ಹಾದಿಯವರಾದ್ದರಿಂದ ಅವರೂ ನಮ್ಮವರಾಗಿಬಿಟ್ಟರು. ಆದರಿಂದ ನಮ್ಮ ಸಾಂಘಿಕ ಚಟುವಟಿಕೆಗಳನ್ನು ಆಚಾರದಲ್ಲಿಳಿಸಲು ಅನುಕೂಲವಾಗಿತ್ತು. ನಮ್ಮ ವಿಚಾರ ವಿನಿಮಯದ ಫಲವಾಗಿ ನಮ್ಮ ಕೂಟಕ್ಕೆ 'ತಿಲಕರ ಸಂಘ'ವೆಂದು ನಾಮಕರಣ ಮಾಡಿದೆವು. ಪ್ರತಿ ರವಿವಾರವೂ ಎಲ್ಲರೂ ವ್ಯಾಖ್ಯಾನ ಕೊಡುವ ಪರಿಪಾಠವನ್ನಿಟ್ಟುಕೊಂಡು, ವ್ಯಾಖ್ಯಾನ ಕೊಟ್ಟುದನ್ನೇ ಬರೆದೂ ಸಿದ್ಧಪಡಿಸುತ್ತಿದ್ದೆವು. ದಿನಾಲು ಗೀತಾಪಾರಾಯಣದ ನಿಯಮವು ತಪ್ಪದೆ ಸಾಗುತ್ತಿತ್ತು. ಆತ್ಮನಿರೀಕ್ಷಣೆಯ ವಿಧಿಯೊಂದನ್ನಿಟ್ಟುಕೊಂಡು ನಮ್ಮ ಆತ್ಮವನ್ನು ತಿಳಿವಿನ ಬೆಳಗಿನಿಂದ ತೊಳಗಿಸಬೇಕಂಬ ಹಂಬಲವೂ ನಮ್ಮ ಸಾಹಸಕ್ಕೆ ಆದೆಷ್ಟೋ ಸಹಾಯ ಮಾಡುತ್ತಿತ್ತು. ಭಿನ್ನ ಭಿನ್ನ ಗುಣಪ್ರಧಾನವಾದ ಪ್ರಕೃತಿಯುಳ್ಳ ನಮ್ಮಲ್ಲಿ ಆಧ್ಯಾತ್ಮಿಕ ತೇಜಸ್ಸೂ ಓಜಸ್ಸೂ ಬರಬೇಕು, ರಾಜಕೀಯ ಉನ್ನತಿಯಾಗಬೇಕು, ದೇಶದ ಉದ್ಧಾರವಾಗಬೇಕು, ನಾಡುನುಡಿಗಳ ಏಳ್ಗೆಯಾಗಬೇಕು, ವಿಶ್ವಬಾಂಧವ್ಯ ಬೆಳೆಯಬೇಕು ಇವೇ ಮುಂತಾದ ಹಲವು ವಿಚಾರಗಳ ಸುಳಿಯಲ್ಲಿ ನಮ್ಮ ಮನಸು

ಹೊಯ್ದಾಡುತ್ತಿತ್ತು. ವಂಗಭಂಗದ ಚಳುವಳಿ, ಕ್ರಾಂತಿಕಾರರ ಹುಟ್ಟು ಬೆಳೆವಣಿಗೆ ಮೊದಲಾದ ದೇಶೋದ್ಧಾರದ ಮಾರ್ಗಗಳ ಅಭ್ಯಾಸವೂ ನಮ್ಮಲ್ಲಿ ಚರ್ಚೆಗೆ ಬರುತ್ತಿತ್ತು. ವಂದೇಮಾತರಂ, ಕರ್ಮಯೋಗಿನ್, ಸ್ಟ್ಯಾಂಡರ್ಡ್ ಬೇಅರರ್‌ಗಳನ್ನು ತಪ್ಪದೇ ಓದುತ್ತಿದ್ದೆವು ಅಲ್ಲದೆ ಕನ್ನಡ ನಾಡು ನಮ್ಮ ತಾಯಿ, ಭಾರತವು ನಮ್ಮ ಅಧಿಷ್ಠಾತ್ರಿ ದೇವತೆ ಎಂಬ ಪವಿತ್ರ ಭಾವನೆಯುಂಟಾಗಿ, ದೈನ್ಯಾವಸ್ಥೆಯೊಳಗಾದ ಈ ದೇವತೆಯರನ್ನು ವಿಶ್ವದಲ್ಲಿ ಮೆರೆಯಿಸಬೇಕೆಂಬ ಹಂಬಲವೇ ನಮ್ಮಲ್ಲಿ ಅತ್ಯುತ್ಕಟವಾಗಿ ಬೆಳೆಯುತ್ತಿತ್ತು. ಅದನ್ನು ಸಾಧಿಸಿಕೊಳ್ಳಲು ನಾವೇನು ಮಾಡಬೇಕು ಎಂಬ ಲೆಕ್ಕ ಹಾಕೇ ಹಾಕುತ್ತಿದ್ದೆವು ಈ ಹವ್ಯಾಸ ಉಳ್ಳ ಹಂಬಲವನ್ನು ಈಡೇರಿಸಿಕೊಳ್ಳಲು ಸಿದ್ಧಪುರುಷರಾಗದೆ ಸಾಧ್ಯವಾಗದೆಂಬ ನಿರ್ಧಾರಕ್ಕೆ ನಾವು ಬಂದೆವು. ಹಾಗಾದರೆ ಸಿದ್ಧಪುರುಷರಾಗಬೇಕಾದರೆ ನಾವು ಏನು ಮಾಡಬೇಕೆಂಬ ವಿಚಾರದ ಬೆನ್ನುಹತ್ತಿದೆವು. ಸಿದ್ಧಿ ಪಡೆದ ಸಿದ್ಧಪುರುಷರಾಗಿ ಕಾರ್ಯವನ್ನು ಕೈಕೊಂಡರೆ ಆ ಕಾರ್ಯವು ಸುಗಮವಾಗಿ, ಸಲೀಸಾಗಿ, ಯಾವ ವಿರೋಧವೂ ಇಲ್ಲದೆ ಜರುಗುತ್ತದೆಂಬ ನಂಬಿಕೆ ನಮ್ಮಲ್ಲಿ ದೃಢವಾಗಿದ್ದಿತು. ನಾವೆಲ್ಲರೂ ಏಕಮುಖವಾಗಿ ಆ ಚಿಂತನೆಯಲಿಯೋ ದಂಗಾಗಿಬಿಟ್ಟಿದ್ದೆವು. ಆದ್ದರಿಂದ ನಮ್ಮ ಆಗ ಬುದ್ಧಿಗೆ ದೇಶದಲ್ಲಿ ತಲೆದೋರುತ್ತಲಿದ್ದ ಅನೇಕ ಸಮಸ್ಯೆಗಳ ವಿಚಾರವೇ ಹೊಳೆಯುತ್ತಿದ್ದಿಲ್ಲ.

ಈ ಸಮಯದಲ್ಲಿ ಬೇಂದ್ರೆಯವರಿಗೆ ಎಳೆಯ ಗೆಳೆಯರೊಳಗೆ ಮೊದಲಿಗನಾದ ಚಿದಂಬರನೇ ನಮ್ಮ ಮುಂದಾಳುವಾಗಿದ್ದನು. ಆಗ ಅವನು ವ್ಹಿಕ್ಟೋರಿಯಾ ಹೈಸ್ಕೂಲಿನಲ್ಲಿ ೫ನೆಯ ಕ್ಲಾಸಿನಲ್ಲಿದ್ದನು. ಬೇಂದ್ರೆಯವರು ಆ ಕ್ಲಾಸಿನ ಶಿಕ್ಷಕರು. ಇವರು ಶಿಕ್ಷಕರಾಗಿ ಬಂದುದೊಂದೇ ತಡ, ವಿದ್ಯಾರ್ಥಿಗಳ ಮನಸನ್ನು ಆಕರ್ಷಿಸಿಯೇ ಬಿಟ್ಟರು. ಈ ಶಿಕ್ಷಕರ ಜಾತಿಯೇ ಬೇರೆ ಎಂದೆನಿಸಿಬಿಟ್ಟಿತು. ವಿದ್ಯಾರ್ಥಿಗಳ ಬುದ್ಧಿಮಾಪನ ಶಕ್ತಿಯನ್ನು ಕಂಡುಹಿಡಿಯಬಲ್ಲ ಬೇಂದ್ರೆಯವರ ವಿಲಕ್ಷಣ ತಾರ್ಕಿಕ ಬುದ್ಧಿಯು ಬೆರಗುಗೊಳಿಸುವಂತಹದು. ನಮ್ಮ ಚಿದಂಬರನು ಅವರಿಗೆ ಮೆಚ್ಚುಗೆಯ ಶಿಷ್ಯನಾಗಲು ತಡವಾಗಲೆ ಇಲ್ಲ ಚಿದಂಬರನಿಂದ ಬೇಂದ್ರೆಯವರಿಗೆ ನಮ್ಮ ಜೀವನದ ಗುರಿ-ನಿರಿಗಳು ತಿಳಿದವು. ಅವನಿಂದಲೆ ನಮಗೆಲ್ಲರಿಗೆ ಬೇಂದ್ರೆಯವರ ನಿಕಟ ಪರಿಚಯವಾಗಿ ಆಂತರಿಕ

ಜೀವನದ ಪರಿಚಯವಾಯಿತು. ಇದೇ ಪರಿಚಯವೆ ಬೆಳೆದು ನಮ್ಮ ಹಾದಿಯನ್ನು ಸುಗಮ ಮಾಡಿಕೊಳ್ಳಲು ನಾವು ಬೇಂದ್ರೆಯವರ ಸಲಹೆ ಸೂಚನೆಗಳ ಮೊರೆಹೊಕ್ಕೆವು. ನಮ್ಮ ಸಿದ್ಧತೆಯಂತೂ ನಡೆದೇ ಇತ್ತು. ಆ ಅವಧಿಯಲ್ಲಿ ಬೇಂದ್ರೆಯವರು ನಮಗೆ ಮಾರ್ಗದರ್ಶಕರಾಗಿ ನಮ್ಮ ವಿಚಾರಗಳ ರಭಸವನ್ನು ಕೊಂಚ ಕಡಿಮೆ ಮಾಡಿ ಒಂದು ತೆರದ ಉಪದೇಶವನ್ನೆ ಆರಂಭಿಸಿದರು. ಬೇಂದ್ರೆಯವರಿಗೆ ಆಗ ರವೀಂದ್ರರ 'ಸಾಧನಾ' ಎಂದರೆ ಅಚ್ಚುಮೆಚ್ಚಿನ ಗ್ರಂಥ. ಆ ವಿಚಾರಪಥದಿಂದ ನಮ್ಮ ಮನಸನ್ನು ಎಷ್ಟೋ ತಿಳಿಯನ್ನಾಗಿ ಮಾಡಿದರು ರವೀಂದ್ರರ ಸಾಹಿತ್ಯದ ರುಚಿಯನ್ನು ಓದಿ ಹೇಳಿ ತಲೆಯಲ್ಲಿ ತುಂಬಿದ್ದಲ್ಲದೆ, ಅರವಿಂದ ಯೋಗಿಗಳ 'ತಾಯಿ'ಯ ಬಗ್ಗೆ, 'ಯೋಗ ಮತ್ತು ಅದರ ಉದ್ದೇಶ', ಗೀತೆಯ ಮೇಲಿನ ನಿಬಂಧಗಳು ಮೊದಲಾದ ಗಂಭೀರ ವಿಷಯಗಳ ತಿರುಳನ್ನು ನಮ್ಮ ಮೆದುಳಿನಲ್ಲಿ ಸೇರಿಸಿದರು. ನಡುನಡುವೆ ತಮ್ಮ ಕಾವ್ಯದ ಸ್ವಾನುಭವಗಳನ್ನೂ ವಿಶದೀಕರಿಸುತ್ತ, ಕನ್ನಡದ ಇಂಪನ್ನೂ ಕಂಪನ್ನೂ ನಮ್ಮ ಜೀವನದಲ್ಲಿ ಬಿತ್ತಿದರು. ಇವರು ಹೇಳುತ್ತಿರುವ ರೀತಿಯನ್ನು ಕಂಡು ನಮಗೆ ಆಶ್ಚರ್ಯವಾಗುತ್ತಿತ್ತು. ೪–೫ ತಾಸು ಒಂದೇ ವಿಷಯದ ಮೇಲೆ ಮಾತನಾಡಿದರೂ ಕಡೆಗೆ ಇವರು ಹೇಳಿದ್ದೇನು ಎಂದು ನಮ್ಮ ನಮ್ಮೊಳಗೆ ವಿಚಾರಿಸಿಕೊಂಡಾಗ 'ಅದೇನೇನೋ ಹೇಳಿದರು' ಎಂದು ದುಂಡು ಸುತ್ತಬೇಕಾಗುತ್ತಿತ್ತು. ಮಾತಿಗೆ ಬೇಸರಿಲ್ಲ; ವಿಷಯ ವೈವಿಧ್ಯತೆಗೆ ಇತಿಯಿಲ್ಲ; ಮಿತಿಯಿಲ್ಲ ನಡುನಡುವೆ ಮಾತನಾಡಲು ಆಸ್ಪದವೇ ದೊರೆಯದಂಥ ತಾರ್ಕಿಕ ಬುದ್ಧಿಯ ಸೆಳೆತ ಬೇರೆ. ಹೀಗಾಗಿ ಇವರ ಮುಂದೆ ಮಾತನಾಡುವದೆಂದರೆ ಮಾತಿಗೆ ಆರಂಭಿಸಿ ಅವರೇ ಮುಗಿಸುವ ವರೆಗೆ ಅಂದರೆ ಈಗ ಸಾಕು ಮತ್ತೆ ಮಾತನಾಡೋಣ ಎಂದು ಹೇಳಿಕಳಿಸುವಷ್ಟರ ವರೆಗೆ ಅವರ ಮಾತುಗಳನ್ನು ಸುಮ್ಮನೆ ಕೇಳಲು ಕುಳಿತುಕೊಳ್ಳಬೇಕಾದ ಪ್ರಸಂಗಗಳೇ ಬರುತ್ತಿದ್ದವು ಇದರಿಂದ ಸಾಹಿತ್ಯದ ರುಚಿಯುಂಟಾಗಿ ಬರೆಯುವ ಕಡೆಗೆ ನಮ್ಮ ಲಕ್ಷ್ಯವು ಸೆಳೆಯಲ್ಪಟ್ಟಿತು ಆದರೂ ನಮ್ಮ ಆ ಆಧ್ಯಾತ್ಮಿಕ ದೃಷ್ಟಿಯು ಅಚಲವಾಗಿತ್ತು. ನಮ್ಮ ನಿರ್ಧಾರವಾಯಿತು–ಕಾಶಿಯಾಚೆಗೆ ತೆರಳಿ ಗಂಗಾಮಾತೆಯ ಪ್ರಶಾಂತ ತಟಾಕದಲ್ಲಿ ಕುಟೀರಗಳನ್ನು ಕಟ್ಟಿಕೊಂಡು ಸಿದ್ಧಿಯ ಸಾಧನೆ ಮಾಡಬೇಕೆಂದು ಮೊದಲಿಗೆ ಸಾಧಿಸುವದೆಂದರೆ–ನಮ್ಮೆಲ್ಲರ ಬುದ್ಧಿಶಕ್ತಿ, ಮನಸ್ಸಿನ ಮೆಟ್ಟಿಲುಗಳೆಲ್ಲವೂ ಭಿನ್ನ ಭಿನ್ನ ಅವಸ್ಥೆಯನ್ನು ನೀಗಿ ಒಂದೇ

ಸಮಷ್ಟಾಕಳಿಯ ಮೇಲೆ ಬರುವಂತೆ ಮಾಡಿಕೊಳ್ಳಬೇಕೆಂದು. ಅದು ಆ ಅವಸ್ಥೆಯನ್ನು ಮುಟ್ಟಿದ ಮೇಲೆ ನಿರ್ದಿಷ್ಟವಾದ ಸಿದ್ಧಿಯ ದರ್ಶನಕ್ಕಾಗಿ ಎಲ್ಲರೂ ಏಕಮನಸ್ಕರಾಗಿ ಹೋರಾಡತಕ್ಕದ್ದು ಎಂದು ಸ್ಥೂಲವಾಗಿ ರೂಪ ರೇಷೆಯನ್ನು ಹಾಕಿಕೊಂಡಿದ್ದೆವು.

ಹೊರಟು ಹೋಗುವ ದಿನವೂ ನಿಶ್ಚಿತವಾಯಿತು. ನಮಗೆ ಮನೆಯ, ಮನೆಯವರ ಚಿಂತೆಯೇ ಹಾರಿಹೋಗಿತ್ತು. ಶ್ರೀ ಬೇಂದ್ರೆಯವರಿಗೆ ನಮ್ಮ ನಿರ್ಧಾರವನ್ನು ತಿಳಿಸಿದೆವು. ಅವರು ಶಾಂತವಾಗಿ ಕೇಳಿಕೊಂಡರು. ಈ ನಡುವೆ ಬೇಂದ್ರೆಯವರಿಗೂ ಗುರುಗಳಲ್ಲದಿದ್ದರೂ ಹಿರಿಯರಾದ ಶ್ರೀ. ಕಟ್ಟಿ ಮಾಸ್ತರರ ಕಿವಿಯ ವರೆಗೂ ನಮ್ಮ ಚಟುವಟಿಕೆಗಳು ಹೋಗಿದ್ದವು. ನಾವೂ ತಿಳಿಸಿದೆವು. ಬೇಂದ್ರೆಯವರೂ ಹೇಳಿರಲಿಕ್ಕೆ ಸಾಕೆಂದು ನಾವು ಭಾವಿಸಿಕೊಂಡಿದ್ದೆವು. ನಾವು ನಮ್ಮ ಸಿದ್ಧಿಯ ಸಾಧನಾ ಸ್ಥಳಕ್ಕೆ ಹೊಗುವಾಗ ದೊಡ್ಡದೊಂದು ಗ್ರಂಥಾಲಯವನ್ನೇ ತೆಗೆದುಕೊಂಡು ಹೋಗಬೇಕೆಂದು ಮಾಡಿ ಒಳ್ಳೊಳ್ಳೇ ಗ್ರಂಥಗಳನ್ನೂ ಸಂಗ್ರಹಮಾಡಿಕೊಂಡಿದ್ದೆವು. ಆದರೆ ಕೊನೆಗೆ ಗ್ರಂಥಗಳ ಆವಶ್ಯಕತೆ ಕಾಣದ್ದರಿಂದ ಅವೆಲ್ಲವುಗಳನ್ನು ಬಿಟ್ಟು ಭಗವದ್ಗೀತೆಯೊಂದನ್ನು ಮಾತ್ರ ಒಯ್ಯಬೇಕೆಂದು ನಿಶ್ಚಯಿಸಿದೆವು. ಹಣ ಸಂಗ್ರಹವೂ ಸಾಗಿತ್ತು. ಅಲ್ಲಿ ಮುಟ್ಟುವ ವರೆಗೆ ಆದರೆ ಸಾಕು ಎಂಬುವಷ್ಟು ಸಂಗ್ರಹಕ್ಕೂ ಕೊರತೆ ಬಿದ್ದಿತ್ತು. ಆದಕ್ಕಾಗಿ ಬೇಂದ್ರೆಯವರನ್ನು ಆ ಹಣಕ್ಕಾಗಿ ಯಾಚಿಸಿದೆವು. ಅವರು ಒಂದೇ ಮಾತಿಗೆ ಕೊಡುತ್ತೇವೆಂದು ಒಪ್ಪಿಕೊಂಡರು.

ವಿಕ್ಟೋರಿಯಾ ಹೈಸ್ಕೂಲಿನ ಆಟದ ಬಯಲಿನಲ್ಲಿ ಕೊನೆಯ ದಿನದ ಮಾತುಕತೆಗಾಗಿ ಕೂಡಿದೆವು. ಅಂದು ಹುಣ್ಣಿಮೆ. ಚಂದ್ರಗ್ರಹಣ ಬೇರೆ ಇತ್ತು. ಬೇಂದ್ರೆಯವರೊಡನೆ ಬಿಚ್ಚು ಮನಸಿನಿಂದ ಮಾತನಾಡಿದೆವು. ಅವರೂ ಅಷ್ಟೇ ಬಿಚ್ಚು ಮನಸಿನಿಂದ ಮಾತನಾಡಿದರು. ನಮ್ಮೆಲ್ಲರ ಜೀವನದ ಮೇಲೆ ಅನೇಕ ದೃಷ್ಟಿಯಿಂದ ಪ್ರಭಾವವನ್ನು ಬೀರಿದ ಬೇಂದ್ರೆಯವರನ್ನು ಬಿಟ್ಟು ಹೋಗುವದು ತುಸು ಕಠಿಣವೆನಿಸಿತು. ಅವರಿಗೂ ಹಾಗೆಯೇ ಅನಿಸಿರ ಲಿಕ್ಕೆ ಸಾಕು.

' ನಾವು ಇಲ್ಲಿಂದ ಹೋದ ಮೇಲೆ ನಮ್ಮ ಮನೆಯವರು ನಿಮ್ಮನ್ನು ಕಾಡಬಹುದು. ಆದಕ್ಕೇನು ಮಾಡುವಿರಿ ? ' ಎಂದು ನಾವು ಕೇಳಲ

'ಕಾಡುವುದೊತ್ತಟ್ಟಿಗಿರಲಿ, ಸೆರೆಮನೆಯನ್ನೂ ಕಾಣಬೇಕಾದೀತು. ಹೋಗು ವೆನು' ಎಂದು ಉತ್ತರವಿತ್ತರು. ಈ ಉತ್ತರವನ್ನು ಕೇಳಿ ನಮಗೂ ಬಲು ಕೆಡುಕೆನಿಸಿತು. ಆದರೂ ಹೋಗುವುದೆಂದ ಮೇಲೆ 'ಹೊರಡಿರಿ. ಕೈಕೊಂಡ ಕಾರ್ಯ ಸಿದ್ಧಿಯಾಗಲಿ ಸಿದ್ಧಪುರುಷರಾಗಿ ಬಂದ ಮೇಲೆ ಕಾರ್ಯಕ್ಷೇತ್ರ ಕರ್ನಾಟಕವಾಗಲಿ' ಎಂಗು ಆಶೆಯನ್ನು ವ್ಯಕ್ತಪಡಿಸಿ ಸ್ವಲ್ಪ ಹುರಿದುಂಬಿ ಸಿದರು. ಮಾರನೆಯ ದಿನ ಶ್ರೀ. ಕಟ್ಟಿಯವರನ್ನು ಕಂಡು ಹೋಗಿಬರುತ್ತೇವೆ ಎಂದು ಹೇಳಲು ಹೋದೆವು. ಅಲ್ಲಿ ಮಾತ್ರ ದೀರ್ಘ ಚರ್ಚೆ ನಡೆಯಿತು. ಅಲ್ಲಿ ನಮಗೆ ಏನಾಯಿತೋ ಏನೋ ನಮ್ಮ ನಿರ್ಧಾರ ತತ್ತರಿಸಿತು. ಅಧೈರ್ಯವು ಆವರಿಸಿತು. ನಿರಾಶೆ ಬಂದೊದಗಿತು. ಕಟ್ಟಿಯವರು ನಮಗೆ ಏನು ಮಾಡಿದರೋ ತಿಳಿಯಲಿಲ್ಲ. ಅಥವಾ ನಮ್ಮ ನಿರ್ಧಾರವೇ ಪೊಳ್ಳಾಗಿತ್ತೋ ಏನೋ–ಅಂತೂ ಆಧ್ಯಾತ್ಮಿಕ ಅಂತರಾಳದಿಂದ ದೊಪ್ಪನೆ ಬಿದ್ದೆವು. ಮುಂದೆ ಧಾರವಾಡ ಬಿಟ್ಟು ನಮ್ಮ ನಮ್ಮ ಊರ ದಾರಿ ಹಿಡಿದೆವು.

ಈ ಒಂದು ಅಂಕನ್ನು ದಾಟಿದ ಮೇಲೆ, ಶ್ರೀ. ಬೇಂದ್ರೆಯವರ ಸಾಹಿತ್ಯ ದೃಷ್ಟಿಯು ನಮ್ಮ ಜೀವನ ಧ್ಯೇಯವನ್ನು ಬದಲುಗೊಳಿಸಿತು. ಬೇಂದ್ರೆಯವರ ಕಾರ್ಯವೂ ಬಲಿಯಿತು; ಬಳಗವೂ ಬೆಳೆಯತೊಡಗಿತು ಇವರ ಆಕರ್ಷಣ ದಿಂದ ಎಷ್ಟೋ ಜನರು ಇವರನ್ನು ಓಲೈಸಹತ್ತಿದರು. ಸಲಿಗೆಯ ಜೀವನ ದಿಂದ, ತೂಕದ ಮಾತಿನಿಂದ, ಮಾರ್ಮಿಕ ಶೈಲಿಯಿಂದ, ಸರಸ ಹಾಸ್ಯ ದಿಂದ, ಕಸದಲ್ಲಿಯೂ ರಸವನ್ನು ಹೀರುವ ಮಾರ್ಮಿಕ ಬುದ್ಧಿಯಿಂದ, ಉದ್ದೇಶರಹಿತವಾದ ಭಾವನೆಯಿಂದ ಎಷ್ಟೋ ವಿದ್ಯಾರ್ಥಿಗಳೂ, ಸಮ ವಯಸ್ಕರೂ ಬೇಂದ್ರೆಯವರ ಪ್ರಭಾವಳಿಯಲ್ಲಿ ಬರತೊಡಗಿದರು.

ಪ್ರಕಟವಾಗಿ ವ್ಯಕ್ತವಾಗುವ ಬೇಂದ್ರೆಯವರ ಸಾಹಿತ್ಯ ನಿರ್ಮಿತಿಗೆ ಮನಸೋತವರೂ ಸಖ್ಯಯೋಗವನ್ನು ಕಂಡುಕೊಂಡರು. ಬರಬರುತ್ತ ಗುಂಪೇ ಆಯಿತು. ಗುಂಪನ್ನು ಕಟ್ಟಬೇಕೆಂಬ ನಿರ್ದಿಷ್ಟ ಉದ್ದೇಶಕ್ಕನುಸಾರವಾಗಿ ಪಣ ತೊಟ್ಟು ಗುಂಪು ಗುಂಪಾಗಲಿಲ್ಲ. ಗುಂಪು ತಾನಾಗಿಯೇ ಕೂಡಿತು. ಕೆಲ ದಿನ ಬಾಳಿತು. ಮುಂದೆ ಚದುರಿತು. ಬಾಳಿದಷ್ಟು ಗುಂಪಿನ ಜೀವನ ಚೆನ್ನಾಗಿಯೇ ಬಾಳಿತು. ನಾಲ್ಕು ಜನರು ಇಂದಿಗೂ ನೆನೆಯುವಂತೆ ಮುಖ್ಯವಾಗಿ ಸಾಹಿತ್ಯ ಸೇವೆಯನ್ನು ಕನ್ನಡ ಮಾತೆಯ ಅಡಿದಾವರೆಗಳಲ್ಲಿ ಅರ್ಪಿಸಿದೆ. ಗುಂಪಿಗರು

ಈಗಲೂ ಅಲ್ಲಲ್ಲಿ ಆ ದಾರಿಯಲ್ಲಿ ದುಡಿಯುತ್ತಿದ್ದಾರೆ. ಅದನ್ನು ಮರೆಯುವದು ಸಾಧ್ಯವಿಲ್ಲ.

ಇಂದಿಗೆ ೨೫ ವರುಷಗಳಿಂದ ಬೇಂದ್ರೆಯವರ ಕಾವ್ಯಜೀವನ ಎಷ್ಟೋ ತರುಣರಿಗೆ ಸಂಜೀವಿನಿಯಾಗಿದೆ. ಕನ್ನಡ ನಾಡ ತುಂಬೆಲ್ಲ ಕೀರ್ತಿವೆತ್ತ ಕವಿ ಬೇಂದ್ರೆಯವರು ಸ್ವತಃ ಕವಿಗಳಿದ್ದು ಅನೇಕ ಕವಿಗಳನ್ನು ಸಿದ್ಧಪಡಿಸಿದ್ದಾರೆಂಬ ಹೆಸರೂ ಚಿರಸ್ಥಾಯಿಯಾಗಿದೆ.

ಬೇಂದ್ರೆಯವರಿಗೆ ಮಾತು ಒಂದು ಅದ್ಭುತ ಶಕ್ತಿ. ಆ ಮಾತಿನ ಎಳೆತ ದಿಂದ ಎಷ್ಟೋ ಜನರು ಮುಗ್ಧರಾಗಿಬಿಡುತ್ತಾರೆ. ಪರಾಂತಃಕರಣಪ್ರವೇಶಿ ಗಳಾದ ಕವಿಗಳಿಗೆ ಲೋಕಸಂಗ್ರಹಬುದ್ಧಿ ಎಷ್ಟು ಜಾಗ್ರತವಿರುತ್ತದೆಂಬ ದನ್ನು ಕಾಣಬೇಕಾದರೆ ನಾವು ಬೇಂದ್ರೆಯವರನ್ನು ಕಂಡರೆ ತಿಳಿಯುತ್ತದೆ. ಅವರಿಗೆ ಕುತೂಹಲವೂ ಹೆಚ್ಚು; ವಿಷಯಗ್ರಹಣ ಶಕ್ತಿಯೂ ವಿಶೇಷವಾಗಿಯೇ ಇದೆ. ಇವರ ಪ್ರಾತಿಭ ಶಕ್ತಿಯು ಅವಗತವಾಗಬೇಕಾದರೆ ಅವರ ಕೃತಿಗಳನ್ನು ಸ್ವತಃ ಓದಿಕೊಂಡರೆ ಅಷ್ಟು ಕಾಣಬರುವದಿಲ್ಲ ಅವರ ಬಾಯಿಯಿಂದಲೇ ಕೇಳಿದರೆ ಅಥವಾ ತಿಳಿದುಕೊಳ್ಳಲು ಯತ್ನಿಸಿದರೆ ಅದರ ಆಳವೆಷ್ಟಿದೆ ಎಂಬು ದರ ಕಲ್ಪನೆ ಬಾರದಿರದು. ಕವಿಯ ಜೀವನದ ಪರಿಚಯವಿದ್ದುದಾದರೆ ಅವರ ಕಾವ್ಯಜೀವನದ ತಿರುಳು ಹೊಳೆಯಲು ಸುಲಭವೆನಿಸುತ್ತದೆ. ಜೀವನದ ಪಡಿ ನೆಳಲೇ ಕಾವ್ಯದಲ್ಲಿ ಒಡಮೂಡಿರುವದೇನೋ ಸರಿಯೆ. ಆದರೂ ಇವೆರಡರಲ್ಲಿ ಪರಸ್ಪರವಾದ ಸಂಬಂಧವಿರುವದರಿಂದ ಕಾವ್ಯದ ಸ್ಪಷ್ಟವಾದ ಸ್ಫುಟವಾದ ಅರ್ಥವು ತಿಳಿಯಬೇಕಾದರೆ ಎರಡರ ಪರಿಚಯವಿರುವದು ಅವಶ್ಯ. ಬೇಂದ್ರೆ ಯವರೂ ಪರಿಚಯವಾದವರ ಸಂಬಂಧವನ್ನು ಬೆಳೆಯಿಸಿಕೊಳ್ಳದೆ ಬಿಡುವವ ರಲ್ಲ. ಕಡೆಗೆ ಪರಿಚಯದ ಅವರ ಕುಂಡಲಿಯನ್ನಾದರೂ ದೊರಕಿಸಿ ಅವರ ಜೀವನದ ರೂಪರೇಷೆಗಳನ್ನು ಜ್ಯೋತಿಷ್ಯಜ್ಞಾನದ ಮೂಲಕವಾದರೂ ಮಾಡಿ ಕೊಳ್ಳದೆ ಬಿಡಲಾರರು ಇವರನ್ನು ಬಲ್ಲವರು ಇವರನ್ನು ಕಾಣುವ ಸಂದರ್ಭ ಸದಾ ತಮಗೊದಗಿಬರುತ್ತಿರಲೆಂದು ಹಾರೈಸುವವರೇ ಬಹಳ.

ಇಂಥ ಕವಿಯ ಬಾಳು ಇಂದು ೫೧ನೆಯ ಹುಟ್ಟುಹಬ್ಬವನ್ನು ಕಾಣುವ ಸಂದರ್ಭದಲ್ಲಿ ಕನ್ನಡನಾಡೇ ಆದರಪೂರ್ವಕವಾಗಿ ' ಕವಿಯು ಚಿರನಾಗಿ ಬಾಳಲಿ, ನಾಡತಾಯಿ ಏಳಲಿ ' ಎಂದು ಹಾರೈಸುತ್ತಿರುವದನ್ನು ಕಂಡ ನಾನೂ ಧನ್ಯನೇ ಅಲ್ಲವೇ ?

———

# ಮುಮುಕ್ಷು ಬೇಂದ್ರೆ

ಶ್ರೀ. ನಾ. ಶ್ರೀ. ರಾಜಪುರೋಹಿತ, ಧಾರವಾಡ

ಶ್ರೀಮಾನ್ ದ. ರಾ. ಬೇಂದ್ರೆ ಇವರ ಪರಿಚಯವು ಇವರು ಹೈಸ್ಕೂಲ ವಿದ್ಯಾರ್ಥಿಯಾಗಿದ್ದಾಗಿನಿಂದ ಇದೆ. ಚಿಕ್ಕಂದಿನಿಂದ ಇವರ ಜೀವನದ ವಿಕಾಸವು ಕ್ರಮಕ್ರಮದಿಂದ ಹೇಗೆ ಆಗುತ್ತ ನಡೆಯಿತು, ಇವರ ಸ್ವಭಾವದ ಮೇಲೆ ಬೇರೆಬೇರೆ ಸಂಸ್ಕಾರಗಳು ಹೇಗೆ ಹೇಗೆ ಆದವು, ಕೊನೆಯಲ್ಲಿ ಇವರ ಜೀವನಕ್ಕೆ ಒಂದು ತರಹದ ವೈಶಿಷ್ಟ್ಯವು ಹೇಗೆ ಪ್ರಾಪ್ತವಾಯಿತು ಎಂಬುದನ್ನು ಸ್ಥೂಲಮಾನದಿಂದ ವಿವರಿಸಿ ಆ ಬಳಿಕ ಇವರು ಪ್ರೌಢಾವಸ್ಥೆಗೆ ಬಂದ ಮೇಲೆ ಧಾರವಾಡದಲ್ಲಿ ಏರ್ಪಡಿಸಿದ ತಪಸ್ವಿ ಶ್ರೀ. ಅರವಿಂದ ಘೋಷರ ತತ್ತ್ವ ಪ್ರಣಾಲಿಯ ಆಧ್ಯಾತ್ಮಿಕ ಸಂಘದ ಸದಸ್ಯರಾಗಿ ಮುಮುಕ್ಷು ವೃತ್ತಿಯಲ್ಲಿ ಹೇಗ ತಲ್ಲೀನರಾಗಿದ್ದಾರೆಂಬುದನ್ನು ನಿರೂಪಿಸುವುದೇ ಈ ಲೇಖನದ ಉದ್ದೇಶ ವಾಗಿದೆ.

ಶ್ರೀ. ಬೇಂದ್ರೆ ಇವರು ವ್ಹಿಕ್ಟೋರಿಯಾ ಹೈಸ್ಕೂಲಿನ ವಿದ್ಯಾರ್ಥಿಗಳು; ಈ ಶಾಲೆಯಲ್ಲಿ ತ್ಯಾಗಮೂರ್ತಿಗಳಾದ ಶ್ರೀಮಾನ್ ಮಧ್ವಾಚಾರ್ಯ ಕಟ್ಟಿ ಬಿ. ಎ., ಪ್ರೊ. ತ್ರ್ಯಂಬಕರಾವ ಹರ್ಡೀಕರ ಎಮ್. ಎ. ಪ್ರಭೃತಿ ಆದರ್ಶ ಪುರುಷರು ಅಧ್ಯಾಪಕರಾಗಿದ್ದರು. ತೇಜಸ್ವಿಗಳೂ ಪರೋಪಕಾರ ತತ್ಪರರೂ ಆದ ಶ್ರೀ. ಕಟ್ಟಿ ಮಧ್ವಾಚಾರ್ಯರಂತೂ ಶ್ರೀ. ಬೇಂದ್ರೆ ಇವರಿಗೆ ಮಾರ್ಗ ದರ್ಶಕರೇ ಆಗಿದ್ದರು.

ವಂಗಭಂಗ ಚಳವಳಿಯಲ್ಲಿ ಶ್ರೀ. ಆಲೂರ ವೆಂಕಟರಾಯರು ಮತ್ತು ನಾನು ಸೇರಿ, "ಕರ್ನಾಟಕ ನೂತನ ವಿದ್ಯಾಲಯ' ಎಂಬುದೊಂದು ರಾಷ್ಟ್ರೀಯ ಶಾಲೆಯನ್ನು ಸ್ಥಾಪಿಸಿ. ರಾಷ್ಟ್ರೀಯ ಶಿಕ್ಷಣದ ಕಾರ್ಯವನ್ನು ಕೈಕೊಂಡಿದ್ದೆವು. ಈ ರಾಷ್ಟ್ರೀಯ ವಿದ್ಯಾಲಯವು ಶ್ರೀ. ಬೇಂದ್ರೆ ಇವರ ಮನೆಯ ಎದುರಿನಲ್ಲಿಯೇ ಇದ್ದಿತು ಈ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗೆ ಅತಿರಥಿ ಮಹಾರಥಿಗಳಾದ ರಾಷ್ಟ್ರೀಯ ಮುಖಂಡರು ಮೇಲಿಂದ ಮೇಲೆ ಭೇಟಿಯನ್ನು ಕೊಡುತ್ತಿದ್ದರು. ಈ ಉಜ್ವಲವಾದ ರಾಷ್ಟ್ರೀಯ ವಾತಾವರಣವು, ಬಾಲಕರಾದ

ಬೇಂದ್ರೆಯವರ ಕೋಮಲವಾದ ಅಂತಃಕರಣದ ಮೇಲೆ ಸಂಸ್ಕಾರವನ್ನುಂಟು ಮಾಡದೆ ಬಿಡಲಿಲ್ಲ.

ಇದೂ ಅಲ್ಲದೆ ಅತಿಶಯ ಜ್ಞಾನಲಾಲಸೆಯುಳ್ಳವರೂ ಉದಾರಧೀಗಳೂ ಆದ ಶ್ರೀಮಾನ್ ಗುರುನಾಥರಾವ ಘಾಟಕ ವಕೀಲರು ತಮ್ಮ ಅಮೌಲ್ಯವಾದ ಪ್ರೌಢ ಗ್ರಂಥಗಳ ದೊಡ್ಡ ಪುಸ್ತಕ ಭಾಂಡಾರವನ್ನು ಈ ರಾಷ್ಟ್ರೀಯ ವಿದ್ಯಾಲಯಕ್ಕೆ ಕಾಣಿಕೆಯಾಗಿ ಕೊಟ್ಟರು. ಈ ಪುಸ್ತಕಾಲಯವೂ ಸಹ ಬೇಂದ್ರೆಯವರ ಪಕ್ಕದ ಮನೆಯ ಅಟ್ಟದ ಮೇಲೆಯೇ ಇದ್ದಿತು.

ಈ ಚಳುವಳಿಯ ಕಾಲದಲ್ಲಿ ನಾನು ಇನ್ನೂ ಗೃಹಸ್ಥಾಶ್ರಮವನ್ನು ಸ್ವೀಕರಿಸಿದ್ದಿಲ್ಲ; ಆದುದರಿಂದ ನಮ್ಮ ರಾಷ್ಟ್ರೀಯ ವಿದ್ಯಾಲಯದ ಬಳಿಯಲ್ಲಿಯೇ ಇದ್ದ ಶ್ರೀ. ಬೇಂದ್ರೆ ಇವರ ಮನೆಯಲ್ಲಿಯೇ ಊಟ ಮಾಡುತ್ತಿದ್ದೆನು. ಕೇವಲ ಅಧ್ಯಯನ, ಅಧ್ಯಾಪನ ಇವೆರಡೇ ಕಾರ್ಯಗಳಲ್ಲಿ ತತ್ಪರನಾಗಿದ್ದೆನು. ಅರ್ಥಾತ್ ಈ ನಮ್ಮ ರಾಷ್ಟ್ರೀಯ ವಿದ್ಯಾಲಯ, ಪುಸ್ತಕಾಲಯಗಳು ಹಗಲಿರುಳೂ ನನ್ನ ವಾಸಸ್ಥಾನಗಳಾಗಿದ್ದವು. ಅತಏವ ಶ್ರೀ ಬೇಂದ್ರೆ ಇವರ ಗೃಹಶಿಕ್ಷಣದಿಂದ ಇವರ ಮೇಲೆ ಹೇಗೆ ಪರಿಣಾಮವಾಗುತ್ತಿತ್ತೆಂಬುದನ್ನು ಪ್ರತ್ಯಕ್ಷವಾಗಿ ನೋಡುವ ಸಮಯವು ನನಗೆ ಪ್ರಾಪ್ತವಾಗುವುದು ಸ್ವಾಭಾವಿಕವಾಗಿದೆ.

ಶ್ರೀ. ಬೇಂದ್ರೆ ಇವರ ತಾಯಂದಿರಾದ ಮಾತೃಶ್ರೀ ಅಂಬಾಬಾಯಿಯವರು ಸುವಿಚಾರಶೀಲರು; ಏಕನಾಥೀ ಭಾಗವತದಂಥ ತತ್ವಪ್ರಧಾನವಾದ ಪ್ರಾಸಾದಿಕ ಪುರಾಣಗ್ರಂಥವನ್ನು ಪಾರಾಯಣ ಮಾಡುತ್ತಿದ್ದವರು. ಇವರಿಗೆ ಚಿ. ದತ್ತಾತ್ರೇಯ, ಚಿ ಕೃಷ್ಣ ಇವರಿಬ್ಬರೇ ಗಂಡುಮಕ್ಕಳು. ಇವರು ತಮ್ಮ ಮಕ್ಕಳ ಶಿಕ್ಷಣ ಮತ್ತು ಆರೋಗ್ಯಗಳ ವಿಷಯದಲ್ಲಿ ಅತ್ಯಂತ ದಕ್ಷತೆಯನ್ನು ವಹಿಸುತ್ತಿದ್ದರೆಂಬುದನ್ನು ಬೇರೆ ಹೇಳುವ ಕಾರಣವೇ ಇಲ್ಲ.

ಇವರೂ ಹಾಗೂ ಇವರ ತಾಯಂದಿರಾದ ಮಾತೃಶ್ರೀ ಗೋದೂಬಾಯಿಯವರೂ ಗೃಹಕಾರ್ಯದಲ್ಲಿ ಸುವ್ಯವಸ್ಥಿತವಾದ ಅಚ್ಚುಕಟ್ಟುತನವನ್ನು ನಿರ್ಮಿಸುವುದರಲ್ಲಿ ಸದೈವ ನಿರತರಾಗಿರುತ್ತಿದ್ದರು. ಇವರ ಮನೆಯಲ್ಲಿ ನಾನು, ಶ್ರೀ. ಮಧ್ವಾಚಾರ್ಯ ಕಟ್ಟಿ ಮಾಸ್ತರರು, ಶ್ರೀ. ಗೋವಿಂದಾಚಾರ್ಯ ಗೋಠೆ, ಶ್ರೀ. ನಾಡಿಗೇರ ಮಾಸ್ತರರು, ಚಿ. ವಾಡೇದ (ವಿದ್ಯಾರ್ಥಿ, ಇಷ್ಟೇ ಅಲ್ಲ

ಶ್ರೀ ಬೇಂದ್ರೆ ಇವರ ಸಹಪಾಠಿ) ಪ್ರಭೃತಿ ೮–೧೦ ಜನರು ಮಾತ್ರ ಊಟ ಮಾಡುತ್ತಿದ್ದೆವು ಇದಕ್ಕಿಂತ ಹೆಚ್ಚು ಜನರಿಗೆ ಅವಕಾಶ ಕೊಡುತ್ತಿರಲಿಲ್ಲ ಊಟಕ್ಕೆ ಕುಳಿತಾಗ್ಗೆ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾದ ರಾಷ್ಟ್ರೀಯ ಚಟುವಟಿಕೆಗಳ ಸುದ್ದಿಗಳ ವಿಷಯವೇ ನಮ್ಮ ಹರಟೆಯಾಗಿರುತ್ತಿತ್ತು.

ಶ್ರೀ. ಬೇಂದ್ರೆ ಇವರ ಅಜ್ಜಿಯವರಾದ ಗೋದೂಬಾಯಿಯವರೂ ಸ್ವರ್ಗಸ್ಥರಾದರು. ನಮ್ಮ ರಾಷ್ಟ್ರೀಯ ವಿದ್ಯಾಲಯವೂ ಸರಕಾರದವರಿಂದ ಮುಕ್ತಾಯ ಮಾಡಲ್ಪಟ್ಟಿತು ಕೂಡಲೇ ನಾನು ಕಾಶೀಕ್ಷೇತ್ರದಲ್ಲಿ ಸ್ಥಾಪಿಸಲ್ಪಟ್ಟ ಧರ್ಮೋಪದೇಶಕರನ್ನು ನಿರ್ಮಿಸುವ 'ಭಾರತ ಧರ್ಮ ಮಹಾಮಂಡಲ' ಎಂಬ ಶಿಕ್ಷಣ ಸಂಸ್ಥೆಗೆ ಅಧ್ಯಯನಕ್ಕೋಸ್ಕರ ಪ್ರಯಾಣ ಮಾಡಿದೆನು.

ಕಾಶೀ ಕ್ಷೇತ್ರದಲ್ಲಿ ಒಂದು ವರ್ಷ ಇದ್ದು, ಅಧ್ಯಯನ ಮುಗಿಸಿಕೊಂಡು ಪುಣೆ ಪಟ್ಟಣಕ್ಕೆ ತಿರುಗಿ ಬಂದೆನು. ಅಲ್ಲಿ ಡಾ ತಪಸ್ವಿ ಪರಾಂಜಪೆ ಇವರು ಮೊಟ್ಟಮೊದಲು ಭೆಟ್ಟಿಯಾದರು. ನಾನು ಧಾರವಾಡದಲ್ಲಿ ರಾಷ್ಟ್ರೀಯ ಶಾಲೆಯ ಅಧ್ಯಾಪಕನಾಗಿದ್ದಾಗ್ಗೆ ಈ ಶಾಲೆಗೆ ಸಮರ್ಪಿಸಿದ ಶ್ರೀ. ಘಾಟಕ ಗುರುನಾಥ ರಾಯರ ಲೈಬ್ರರಿಯಲ್ಲಿ ಪ್ರೌಢ ಮರಾಠಿ ಗ್ರಂಥಗಳ ವಾಚನ, ಮನನ, ನಿದಿಧ್ಯಾಸವಾಗುವುದಕ್ಕೆ ನನಗೆ ತುಂಬಾ ಅವಕಾಶವು ದೊರೆತದ್ದರಿಂದ ಶ್ರೀ. ಆರ್ ಜಿ ಭಾಂಡಾರಕರ, ಶ್ರೀ. ವ್ಹಿ. ಕೆ. ರಾಜವಾಡೆ, ಶ್ರೀ. ಸಿ. ವ್ಹಿ. ವೈದ್ಯ ಪ್ರಭೃತಿ ಮರಾಠಿ ಗ್ರಂಥಕಾರರು ಕರ್ನಾಟಕ ಇತಿಹಾಸ, ಸಂಸ್ಕೃತಿಗಳ ಬಗ್ಗೆ ಹೇಗೆ ತಪ್ಪು ತಿಳಿವಳಿಕೆಯನ್ನು ಪ್ರಚಾರ ಮಾಡಿದ್ದಾರೆಂಬುದು ನನ್ನ ಮನಸ್ಸಿನಲ್ಲಿ ಚೆನ್ನಾಗಿ ಬಿಂಬಿಸಿ ಹೋಗಿತ್ತು. ಇದನ್ನೆಲ್ಲ ಶ್ರೀ. ಪರಾಂಜಪೆಯವರಿಗೆ ವಿವರಿಸಿ ಹೇಳಿದೆನು. ಇದನ್ನು ಕೇಸರೀ ಪತ್ರಿಕೆಯಲ್ಲಿ ಪ್ರಸಿದ್ಧ ಮಾಡುವುದು ಅತ್ಯವಶ್ಯವೆಂದು ನನಗೆ ಉತ್ತೇಜನವನ್ನು ಕೊಟ್ಟರು. ಆಗ ನಾನು ನಾಸಿಕದ ವರೆಗೆ ಮಹಾರಾಷ್ಟ್ರದ ಎಲ್ಲ ಜಿಲ್ಹೆಗಳಲ್ಲಿ ಸಂಚರಿಸಿ 'ಮಹಾರಾಷ್ಟ್ರ ವ ಕರ್ನಾಟಕ' ಎಂಬ ಶಿರೋನಾಮದಿಂದ ಲೇಖನಗಳನ್ನು ಬರೆದು ಕೇಸರಿ ಪತ್ರಿಕೆಯಲ್ಲಿ ಪ್ರಸಿದ್ಧ ಮಾಡತೊಡಗಿದೆನು ಆಗ ಮೇಲಿಂದಮೇಲೆ ಪುಣೆಗೆ ಬರುತ್ತಿದ್ದೆನು. ಮತ್ತು ಬಡೋದೆಯ ಸೆಂಟ್ರಲ್ ಲೈಬ್ರರಿಗೆ ಹೆಚ್ಚಿನ ವಾಚನಕ್ಕಾಗಿ ಹೋಗುವಾಗ್ಗೆ ಮಾರ್ಗದಲ್ಲಿ ಕೆಲವು ದಿವಸ ಪುಣೆಯಲ್ಲಿ ನಿಲ್ಲಬೇಕಾಯಿತು. ಆಗ್ಗೆ ಒಮ್ಮೆ ಶ್ರೀ. ಬೇಂದ್ರೆ ಇವರ ಮನೆಗೆ ಊಟಕ್ಕೆ

ಹೋದಾಗ್ಗೆ ಇವರ ವಿಚಾರಪ್ರಣಾಲಿಯನ್ನು ನೋಡಿ, ಶ್ರೀ. ಬೇಂದ್ರೆ ಇವರಲ್ಲಿ ಸಾರ್ವಜನಿಕ ಜೀವನವು ವಿಕಾಸವಾಗಿರುತ್ತದೆಂಬುದು ತಿಳಿದುಬಂದಿತು. ಪುಣೆ ಪಟ್ಟಣವು ಸಾರ್ವಜನಿಕ ವಿವಿಧ ಸಂಸ್ಥೆಗಳ ತವರ್ಮನೆಯೇ ಆಗದೆ ಈ ಪರಿಸ್ಥಿತಿಯು ಶ್ರೀ. ಬೇಂದ್ರೆ ಇವರ ಜೀವನದಲ್ಲಿ ಕ್ರಾಂತಿಯನ್ನುಂಟುಮಾಡದೆ ಹೇಗೆ ಬಿಟ್ಟೀತು?

ಮುಂದೆ ನಾನು ಬಡೋದೆಯಿಂದ ಧಾರವಾಡಕ್ಕೆ ಬಂದು ೧೯೧೪ನೆಯ ಇಸ್ವಿಯಲ್ಲಿ 'ಕರ್ನಾಟಕ ಇತಿಹಾಸ ಸಂಶೋಧಕ ಮಂಡಲ' ಎಂಬ ಸಂಸ್ಥೆಯನ್ನು ನಾನು, ಶ್ರೀ. ಆಲೂರ ವೆಂಕಟರಾಯರು, ಶ್ರೀ. ನರಗುಂದಕರ ರಾಮರಾಯರು, ಶ್ರೀ. ನರಸಿಂಹಾಚಾರ್ಯ ಕಾವ್ಯಾನಂದರು, ಶ್ರೀ. ದೇಶಪಾಂಡೆ ನಾರಾಯಣರಾಯರು ಸೇರಿ ಸ್ಥಾಪಿಸಿ. ಇತಿಹಾಸ ಸಂಶೋಧನದ ಕಾರ್ಯಕ್ಕೆ ಸಾರ್ವಜನಿಕ ಸ್ವರೂಪವನ್ನು ಕೊಟ್ಟೆವು. ತರುವಾಯ ನಾನು ಗೃಹಸ್ಥಾಶ್ರಮವನ್ನು ಸ್ವೀಕರಿಸಿ, ಶಿವಮೊಗ್ಗಾ ಜಿಲ್ಹೆಯ ಸಂಚಾರ ಉಪನ್ಯಾಸಕನಾಗಿ ೧೯೨೦ನೆಯ ಇಸ್ವಿಯ ವರೆಗೆ ಅಲ್ಲಿ ಕೆಲಸ ಮಾಡಿದೆನು. ಮುಂದೆ ಆ ಎಕನಾಮಿಕ್ ಡಿಪಾರ್ಟಮೆಂಟನ್ನು ಮೈಸೂರು ಸರಕಾರದವರು ವಿಸರ್ಜನೆಯನ್ನು ಮಾಡಿದ್ದರಿಂದ ತಾ. ೨೦-೮-೧೯೨೦ಕ್ಕೆ ಪುನಃ ಶಿವಮೊಗ್ಗೆಯಿಂದ ಸಹಕುಟುಂಬ ಧಾರವಾಡಕ್ಕೆ ಬಂದು, ಇಲ್ಲಿ ಸ್ಥಿರವಾಗಿ ನೆಲಸಿದೆನು.

ಇತ್ತ ಶ್ರೀ. ಬೇಂದ್ರೆ ಇವರು ಪದವೀಧರರಾಗಿ ಈ ಮೊದಲೇ ಧಾರವಾಡದಲ್ಲಿ ಹೈಸ್ಕೂಲಿನ ಅಧ್ಯಾಪಕರಾಗಿದ್ದರು. ಈ ೧೯೨೦ನೆಯ ಇಸ್ವಿಯ ಆಗಸ್ಟ ತಿಂಗಳೆಂದರೆ ಬಹಳ ಮಹತ್ವದ್ದಾಗಿದೆ. ಲೋಕಮಾನ್ಯ ಟಿಳಕರು ಈ ಸಮಯದಲ್ಲಿ ದಿವಂಗತರಾದರು; ಮಹಾತ್ಮಾ ಗಾಂಧಿಯವರು ಉದಯರಾದರು ಗಾಂಧಿಯವರ ಅಸಹಕಾರ ಚಳವಳಿಯಲ್ಲಿ ಪುನಃ ರಾಷ್ಟ್ರೀಯ ಶಾಲೆಗಳು ಸ್ಥಾಪಿಸಲ್ಪಟ್ಟವು.

ಈ ಸಮಯದಲ್ಲಿ ಶ್ರೀ. ಬೇಂದ್ರೆಯವರು ಹಾಗೂ ನಾನು ಸಹ ರಾಷ್ಟ್ರೀಯ ಶಾಲೆಯ ಅಧ್ಯಾಪಕರಾದೆವು ಇದೇ ಕಾಲಕ್ಕೆ ತಪಸ್ವಿ ಅರವಿಂದ ಘೋಷರು ಪಾಂಡೀಚೆರಿಯಲ್ಲಿ ತಮ್ಮ ಆಶ್ರಮದಿಂದ 'ಆರ್ಯ' ಎಂಬ ಮಾಸಪತ್ರಿಕೆಯನ್ನು ಹೊರಡಿಸುತ್ತಿದ್ದರು ಇದರಲ್ಲಿ 'ದೈವಿಕ ಜೀವನ'ವನ್ನು ಪ್ರತಿಯೊಬ್ಬ ಮನುಷ್ಯರು (ಸ್ತ್ರೀಯರೇ ಆಗಲಿ ಪುರುಷರೇ ಆಗಲಿ)

ಹೇಗೆ ತಮ್ಮ ಆಚರಣೆಯಲ್ಲಿ ತರಬೇಕು ಎಂಬ ನೂತನ ದಿವ್ಯ ಸಂದೇಶವನ್ನು ಸುಂದರವಾಗಿ ಪ್ರತಿಪಾದಿಸುತ್ತಿದ್ದರು. ಈ ಪ್ರತಿಪಾದನೆಯು ಆಧುನಿಕ ಮುಮುಕ್ಷುಗಳ ಮನಸ್ಸನ್ನು ಆಕರ್ಷಿಸಿದ್ದರಿಂದ ಧಾರವಾಡದಲ್ಲಿ ಪೂಜ್ಯ ತಪಸ್ವಿ ಶ್ರೀ. ಅರವಿಂದ ಘೋಷರ ತತ್ವಪ್ರಣಾಲಿಯ ಆಧ್ಯಾತ್ಮಿಕ ಸಂಘವನ್ನು ಎಲ್ಲರೂ ಸೇರಿ ಏರ್ಪಡಿಸಿದೆವು. ಈ ಸಂಘದ ಸದಸ್ಯರೆಲ್ಲರೂ ರತ್ನಾಕರ ವರ್ಣಿಯ 'ಭರತೇಶವೈಭವ', ಶಿವಶರಣರ 'ವಚನಗಳು', ಜಗನ್ನಾಥ ದಾಸರ 'ಹರಿಕಥಾಮೃತಸಾರ', ಶ್ರೀ ವಿದ್ಯಾರಣ್ಯರ 'ಪಂಚದಶಿ' ಮೊದಲಾದ ಎಲ್ಲ ಮತಗಳ ತತ್ವಜ್ಞಾನ ವಿಷಯಕ ಗ್ರಂಥಗಳನ್ನು ಓದಿಕೊಂಡು ೮ ದಿವಸಗಳಿಗೊಮ್ಮೆ ಸಂಘದಲ್ಲಿ ಸದಸ್ಯರೆಲ್ಲರೂ ಸೇರಿ, ಶ್ರೀ ಅರವಿಂದ ಘೋಷರ ತತ್ವಪ್ರಣಾಲಿಯನ್ನು ಇವೆಲ್ಲ ಮತಗ್ರಂಥಗಳು ಹೇಗೆ ಪೋಷಿಸುತ್ತವೆಂಬುದರ ವಿಚಾರವಿನಿಮಯ ಮಾಡುವುದಲ್ಲದೆ ಶ್ರೀ. ಅರವಿಂದರ ತತ್ವಜ್ಞಾನದ ಸಮ್ಯಕ್‌ಜ್ಞಾನವನ್ನು ಮಾಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿತ್ತು. ಈ ಸಂಘದಲ್ಲಿ ಶ್ರೀ. ಬೇಂದ್ರೆಯವರು, ಶ್ರೀ. ಆಲೂರ ವೆಂಕಟರಾಯರು, ನಾನು, ಶ್ರೀ. ಮಲೆಬೆನ್ನೂರ ಸತ್ಯವಂತರಾಯರು, ಶ್ರೀ. ಮುಧೋಳಕರ ವಾಮನರಾಯರು ಇನ್ನೂ ಕೆಲವು ಜನರು (ಇವರು ಯಾರೆಂಬುದು ನನ್ನ ಸ್ಮರಣದಲ್ಲಿಲ್ಲ.) ಸದಸ್ಯರಾಗಿದ್ದೆವು. ನಮ್ಮ ಈ ಸಂಘದಲ್ಲಿ ಶ್ರೀ. ಬೇಂದ್ರೆಯವರು ಒಬ್ಬರೇ ಪಾಂಡೀಚೆರಿಯ ಶ್ರೀ. ಅರವಿಂದರ ಆಶ್ರಮಕ್ಕೆ ೩-೪ ಸಾರೆ ಹೋಗಿ ಬಂದಿದ್ದಾರೆ. ಶ್ರೀ. ಅರವಿಂದರ ದರ್ಶನವನ್ನೂ ಅವರ ಆಶೀರ್ವಾದವನ್ನೂ ಪಡೆದಿದ್ದಾರೆ.

---

## ಶ್ರೀ ಬೇಂದ್ರೆಯವರಿಗೆ—

ಶ್ರೀ. ಬಿ. ಎಚ್. ಶ್ರೀಧರ, ಎಂ. ಎ.

ಸರಸ ರಾಜ್ಯದ ಚಕ್ರವರ್ತಿ, ಮಾತಿನಮಲ್ಲ,
ಬಿರುಸನೂ ನಯಗೈವ ಸುರಸಸಿದ್ಧ !
ಮರೆದು ಮರೆಯಿಸಿ ಕೇಳುಗರನು ವಾಗ್ಬ್ರಹ್ಮದಲಿ
ಮುಳುಗಿಸುವ ಮೃದುಮಧುರ ವಾಗ್ವಿದಗ್ಧ !

ನೇಹದಮೃತವನುಣಿಸಿ ಸಂತೈಸಿ ಸಾರತರ
ತಿಳಿವನರುಹಿದ ತಂದೆ, ನಿನ್ನ ನೆನೆವೆ :
ನೇಹದಿಂ ಪೊರಮಟ್ಟು, ದೇಹ ದಣಿದಿದ್ದು, ಬಗೆ
ದಾಹದಿಂದುರಿಯುತಿರೆ ತಣಿಸಿದೊಲವೇ !

ನಾನಾವಿಧದ ಜನದ ಮುಚ್ಚಲಾರದ ಮನದ
ತೂಣೀರದಿಂ ಚಿಮ್ಮಿ ಬಂದು ನಟ್ಟ
ನಾನಾಮುಖದ ನಿಶಿತಬಾಣಗಳ ಗಾಯಕ್ಕೆ
ನೇಹವೆರೆದಾರೈಕೆ ಗೈದ ದಿಟ್ಟ !

ನೀನಟ್ಟ ಭಾವಗಳ, ನಿನ್ನ ಮೊಗದೋಟದಲಿ
ಹೂಬಿಟ್ಟ ಮುಗುಳ್ನಗೆಯ ಮರೆವೆನೆಂತು ?
ನಾನಿಟ್ಟ ಕಣ್ಣೀರನಾದರಿಸಿ ಹೃದಯಕ್ಕೆ
ನೀನಿತ್ತ ಶಾಂತಿಯನು ಬರೆವೆನೆಂತು ?

ಆನಂದದೊಂದುತ್ಸದಂತೆ ತೋರುವ ಕವಿಯೆ,
ನೀನೆಂದುದೆಲ್ಲವೂ ಚೆಂದ ನನಗೆ ;
ನಾನೆಂಬುದನು ಮರೆದು ನೀನಾಗಿ ಹೋಗುವತಿ
ಮಾನವ್ಯ ಸಿದ್ಧಿಯನು ಕೊಟ್ಟೆ, ಗುರುವೇ !

ನಿನ್ನ ವರ್ಧಂತಿಯಿದು, ವರ್ಧಿಸೋ ವರ್ಧಿಸು
ಶಿವನಟ್ಟಹಾಸ ಪಡೆದೇಳುವಂತೆ !
ನಿನ್ನ ವರ್ಧಂತಿ ಕನ್ನಡಕಬ್ಬಕನ್ನಿಕೆಯ
ಪುಣ್ಯಪ್ರವಾಹ ಹರಿದುಕ್ಕುವಂತೆ !

---

# ಶುಭಾಶಯಗಳು

## ೧

ಬೇಂದ್ರೆ ದತ್ತರಾಯರು ದೇವದತ್ತ ದೃಷ್ಟಿಯಿಂದ "ಅಂಬಿಕಾತನಯ ದತ್ತ" ಕವಿಗಳಾಗಿ ಕೀರ್ತಿವಂತರಾಗಿದ್ದಾರೆ.

"ಅಂಬಿಕಾತನಯದತ್ತ"ನು ಅಂಬಿಕೆಯ ಅಮರ ತನಯನಾಗಲೆಂದು ಸರ್ವಶಕ್ತ ಸಮನ್ವಿತೆಯ ಬಳಿಯಲ್ಲಿ ಬೇಡಿಕೊಳ್ಳುವೆನು.

**ಶ್ರೀ ಅರವಿಂದಾಶ್ರಮ** — **ಶ್ರೀಮಂತ ಸರದಾರ ಬಸವಪ್ರಭು ಲ. ಸರದೇಸಾಯಿ**
೧೬--೫--೪೭ **ವಂಟಮೂರಿ, ಪಾಂಡಿಚರಿ**

## ೨

ಈ ಶುಭ ಪ್ರಸಂಗದಲ್ಲಿ ಶ್ರೀ. ಬೇಂದ್ರೆಯವರ ಬಗ್ಗೆ ಹಾಗೂ ಅಂಥ ಕಾವ್ಯಾತ್ಮರ ಬಗ್ಗೆ ಅಂತಃಕರಣದಲ್ಲಿ ಉಕ್ಕುವ ಭಾವನೆಗಳನ್ನೆಲ್ಲ ಮನಸಿನಲ್ಲಿ ಬರುವ ವಿಚಾರಗಳನ್ನೆಲ್ಲ ರೂಪುಗೊಳಿಸಬೇಕಾದರೆ ಶಬ್ದಭಾಂಡಾರ ಸಾಲದು. ಸುತ್ತಲೂ ನಡೆದ ಅವರ ಗುಣಗ್ರಹಣವನ್ನು ನೋಡಿದರೆ ಅವರು ಪ್ರತಿಭಾಸಂಪನ್ನ ಕವಿಗಳೆಂಬುದು ಸ್ಪಷ್ಟವಾಗುವಂತಿರುವದು. ಕವಿ ಹೃದಯವನ್ನು ಕವಿಯೇ ಬಲ್ಲ ಎಂಬಂತೆ ಶ್ರೀ. ಮಾಸ್ತಿ ಮುಂತಾದ ಕವಿವಿಶೇಷರು ಅವರನ್ನರಿತಷ್ಟು ಇನ್ನಾರೂ ಅರಿಯರು. ಅಂಥ ಕವಿಗಳನೇಕರು ಶ್ರೀ ಬೇಂದ್ರೆಯವರನ್ನು ಅನೇಕ ಸಾರೆ ವಿಧ ವಿಧದಿಂದ ಕೊಂಡಾಡಿದ್ದಾರೆ. ಹೀಗಿರಲು ನಾನೇನು ಬರೆಯಬಲ್ಲೆ ? ನನ್ನ ಗುಣಗ್ರಹಣವು ಮೂಕವೇ ಇರಬಲ್ಲದು !

ಕಾವ್ಯವು ಜೀವನದ ಸುಂದರರೂಪರಸವೂ ಅಹುದು; ಚೈತನ್ಯದಾಯಿಯಾದ ಸ್ಫೂರ್ತಿಯೂ ಅಹುದು. ಶ್ರೀ. ಬೇಂದ್ರೆಯವರ ಕಾವ್ಯದಲ್ಲಿರುವ ರಸವು ನಮ್ಮನ್ನು ಹಾಗೂ ನಮ್ಮ ಹಿಂದಿನಿಂದ ಬರುವ ಪೀಳಿಗೆಗಳ ಅಂತಃಕರಣಗಳನ್ನು ತಣಿಸಲಿ ಅವರ ಕಾವ್ಯದಲ್ಲಿರುವ ಸ್ಫೂರ್ತಿಯು ನಮ್ಮನ್ನು ನವಚೈತನ್ಯದಿಂದ ತುಂಬಿ ಹೆಚ್ಚೆಚ್ಚು ಕಾರ್ಯಪ್ರವೃತ್ತ ಮಾಡಲಿ ಎಂದು ನಾನು ಹಾರೈಸುವೆನು

**ಹುಬ್ಬಳ್ಳಿ** — **ಶ್ರೀ. ರಂಗನಾಥ ದಿವಾಕರ**
**೧೫–೫–೪೭**

---